149. Corporation Fund.- All moneys received by or on behalf of the corporation by or under this Act or any other law, all taxes, tolls and other imposts, fines, fees, penalties paid to or levied by it under this Act, all proceeds of land or other property sold by the corporation and all rents accruing from its land or property and all interests, profits and other moneys accruing by gifts or transfers from the Government or private individuals or otherwise shall constitute the corporation fund and shall be held, applied and disposed of in accordance with the provisions of this Act, the rules and the regulations made thereunder or any other law for the time being in force.

xx xx xx

Extract from the Karnataka Municipalities Act, 1964
(Karnataka Act 22 of 1964)

xx xx xx

94. Taxes which may be imposed.- (1) Subject to the general or special orders of the Government, a municipal council,-

(a) xxx]

(b) xxx at rates not exceeding those specified in this Act

may levy any one or more of the following taxes:—

(i) a tax on buildings or vacant lands or both situated within the muncipal area (hereinafter referred to as property tax)

(ii) x x x

(iii) xxx

(iv) xxx

(v) to (vii) x x x

(viii) and (ix)

(x) x x x

(xi) x x x

(xii) a duty on transfers of immovable property in the shape of an additional stamp duty;

(xiii) a tax on advertisements (other than advertisements published in newspapers) erected, exhibited, fixed or retained upon or over any land, building, wall, hoarding, frame, post or structure or upon or in any vehicle or displayed to public view in any manner whatsoever visible from a public street or public place (including any advertisement exhibited by means of cinematograph):

Explanation 1.— The word "structure" in this sub-clause includes any movable board on wheels used as an advertisement or an advertisement medium;

Explanation 2.— 'public place' for the purpose of this sub-clause, means any place which is open to the use and enjoyment of the public, whether it is actually used or enjoyed by the public or not;

Explanation 3.— The word "advertisement" in this sub-clause means any word, letter, model, sign, placard, notice, device or representation, whether illuminated or not, in the nature of, and employed wholly or in part for the purpose of, advertisement, announcement or direction;

xxx

(1-A) The following buildings and vacant lands shall be exempted from the property tax, namely:-

(a) places set apart for public worship and either actually so used or used for no other purpose;

(b) choultries for occupation of which no rent is charged and choultries the rent charged for the occupation of which is used exclusively for charitable purpose;

(c) places used for the charitable purpose of sheltering the destitute or animals and orphanages, homes and schools for the deaf and dumb, asylum for the aged and fallen women and such similar institutions run purely on philanthropic lines as are approved by the State Government;

(d) such ancient monuments protected under the Karnataka Ancient and Historical Monuments and Archaeological Sites and Remains Act, 1961 (Karnataka Act 7 of 1962) and Ancient Monuments and Archaeological Sites and Remains Act, 1958 (Central Act 24 of 1958) or parts thereof as are not used as residential quarters or public offices;

(e) charitable hospitals and dispensaries but not including residential quarters attached thereto;

(f) such hospitals and dispensaries maintained by railway administration as may from time to time be notified by the State Government, but not including residential quarters attached thereto;

(g) burial and cremation grounds included in the list published by the Municipal Commissioner or Chief Officer;

(h) Government lands set apart for free recreational purposes and such other Government land as may be notified by the Government which in the opinion of the State Government no income could be derived;

(i) buildings or vacant lands exclusively used for,-

(i) student hostels, which are not established or conducted for profit;

(ii) educational purposes by recognized educational institutions;

(j) buildings or vacant lands belonging to the Central Government or any State Government used for the purposes of Government and not used or intended to be used for residential or commercial purposes;

(k) buildings or vacant lands belonging to the Bangalore Development Authority, the Karnataka Housing Board, the Urban Development Authorities constituted under the Karnataka Urban

Development Authorities Act, 1987 or any local authority, the possession of which has not been delivered to any person, in pursuance of any grant, allotment or lease;

(l) land which is registered as land used for agricultural purpose in the revenue accounts of State Government and is actually used for cultivation of crops;

Provided that nothing contained in clauses (a), (c) and (e) shall be deemed to exempt from property tax, any building or vacant land for which rent is payable by the person or persons using the same for the purposes referred to in the said clauses:

Provided further that for the purposes of clause (j), a certificate issued by the Government or any officer duly authorised by the Government that any building or land is used for the purposes of the State Government and not used or intended to be used for residential or commercial purposes shall be binding on the municipal council.

(1-B) No tax shall be levied on any advertisement which,-

(a) is exhibited with the window of any building if the advertisement relates to the trade, profession or business carried on in that building; or

(b) relates to trade, profession or business carried on within the land or building upon or over which such advertisement is exhibited or to sale or letting of such land or building or any effects therein or any sale, entertainment or meeting to be held on or upon or in, the same; or

(c) relates to the name of the land or building, upon or over which the advertisement is exhibited or to the name of the owner or occupier of such land or building; or

(d) relates to the business of a railway administration and is exhibited within any railway station or upon any wall or other property of a railway administration;

(e) relates to any activity of the State Government;

(f) relates to any public meeting.

(2) Notwithstanding the exemptions granted under sub-section (1A) it shall be open to the Municipal Council to collect service charges for providing civic amenities and for general or special services rendered at such rates as may be prescribed.

(3) The taxes specified in sub-section (1) shall be assessed, levied and collected in accordance with the provisions of this Act and the rules made by the Government under section 323.

xx xx xx

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೩೫

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/19/Bill/2012, Bangalore, Dated: 30.7.2012

The following Bill was introduced in Legislative Assembly on 30.7.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ಪೌರಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 19)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.– ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರಲ್ಲಿ (1964ರ ಕರ್ನಾಟಕ ಅಧಿನಿಯಮ 22),–

(i) 11ನೇ ಪ್ರಕರಣದಲ್ಲಿ,–

(ಎ) (3)ನೇ ಉಪಪ್ರಕರಣದಲ್ಲಿ, ಎರಡನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಲ್ಲದೇ ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, (2)ನೇ ಉಪಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು, ಮುನ್ಸಿಪಲ್ ಕೌನ್ಸಿಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರದಂತೆ ನಿರ್ಧರಿಸತಕ್ಕದ್ದು."

(ಬಿ) (4)ನೇ ಉಪಪ್ರಕರಣದಲ್ಲಿ "ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು" ಎಂಬ ಪದಗಳಿಗೆ "ಶೇಕಡಾ ಐವತ್ತಕ್ಕಿಂತ ಹೆಚ್ಚಿಗೆ ಇಲ್ಲದಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) 42ನೇ ಪ್ರಕರಣದ (2ಎ) ಉಪಪ್ರಕರಣದಲ್ಲಿ,–

(ಎ) (ಬಿ) ಖಂಡದಲ್ಲಿ ಎರಡನೇ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಲ್ಲದೇ ಪರಂತು, ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಸಂಖ್ಯೆಯನ್ನು, ಈ ಖಂಡದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಹಾಗೂ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯು ರಾಜ್ಯದಲ್ಲಿನ ಮುನಿಸಿಪಲ್ ಕೌನ್ಸಿಲ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರದಂತೆ ನಿರ್ಧರಿಸತಕ್ಕದ್ದು."

(ಬಿ) (ಸಿ) ಖಂಡದಲ್ಲಿ "ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು" ಎಂಬ ಪದಗಳಿಗೆ, "ಶೇಕಡಾ ಐವತ್ತಕ್ಕಿಂತ ಹೆಚ್ಚಿಗೆ ಇಲ್ಲದಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) 352ನೇ ಪ್ರಕರಣದಲ್ಲಿ,–

(ಎ) (5)ನೇ ಉಪಪ್ರಕರಣದಲ್ಲಿ, ಎರಡನೇ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಲ್ಲದೇ ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, (4)ನೇ ಉಪಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸದ ಸ್ಥಾನಗಳ ಒಟ್ಟು ಸಂಖ್ಯೆಯು, ಪಟ್ಟಣ ಪಂಚಾಯತಿಯ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರದಂತೆ ನಿರ್ಧರಿಸತಕ್ಕದ್ದು."

(ಬಿ) (6)ನೇ ಉಪಪ್ರಕರಣದಲ್ಲಿ "ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು" ಎಂಬ ಪದಗಳಿಗೆ "ಶೇಕಡಾ ಐವತ್ತಕ್ಕಿಂತ ಹೆಚ್ಚಿಗೆ ಇಲ್ಲದಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.– ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರಲ್ಲಿ (1977ರ ಕರ್ನಾಟಕ ಅಧಿನಿಯಮ 14),–

(i) 7ನೇ ಪ್ರಕರಣದಲ್ಲಿ,–

(ಎ) (3)ನೇ ಉಪಪ್ರಕರಣದಲ್ಲಿ, ಎರಡನೇ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಲ್ಲದೇ ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, (2)ನೇ ಉಪಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸದ ಸ್ಥಾನಗಳ ಒಟ್ಟು ಸಂಖ್ಯೆಯು, ನಗರಸಭೆಗಳಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರದಂತೆ ನಿರ್ಧರಿಸತಕ್ಕದ್ದು."

(ಬಿ) (4)ನೇ ಉಪಪ್ರಕರಣದಲ್ಲಿ "ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು" ಎಂಬ ಪದಗಳಿಗೆ "ಶೇಕಡಾ ಐವತ್ತಕ್ಕಿಂತ ಹೆಚ್ಚಿಗೆ ಇಲ್ಲದಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) 10ನೇ ಪ್ರಕರಣದ, (1ಎ) ಉಪಪ್ರಕರಣದಲ್ಲಿ,–

(ಎ) (ಬಿ) ಖಂಡದಲ್ಲಿ, ಎರಡನೇ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಲ್ಲದೇ ಪರಂತು, ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಮೇಯರ್ ಮತ್ತು ಉಪಮೇಯರ್ ಹುದ್ದೆಗಳ ಸಂಖ್ಯೆಯನ್ನು, (ಎ) ಖಂಡದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಮೇಯರ್ ಮತ್ತು ಉಪಮೇಯರ್ ಹುದ್ದೆಗಳ ಒಟ್ಟು ಸಂಖ್ಯೆಯು, ರಾಜ್ಯದಲ್ಲಿನ ನಗರಸಭೆಗಳಲ್ಲಿನ ಮೇಯರ್ ಮತ್ತು ಉಪಮೇಯರ್ ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರದಂತೆ ನಿರ್ಧರಿಸತಕ್ಕದ್ದು."

(ಬಿ) (ಸಿ) ಖಂಡದಲ್ಲಿ "ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು" ಎಂಬ ಪದಗಳಿಗೆ "ಶೇಕಡಾ ಐವತ್ತಕ್ಕಿಂತ ಹೆಚ್ಚಿಗೆ ಇಲ್ಲದಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡಾ ಐವತ್ತನ್ನು ಮೀರದಷ್ಟು ಸ್ಥಾನಗಳನ್ನು ಮೀಸಲಿರಿಸುವುದಕ್ಕೆ ಉಪಬಂಧ ಕಲ್ಪಿಸುವ ಮೂಲಕ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:1994ರ 1356ರಲ್ಲಿ ಕೆ.ಕೃಷ್ಣಮೂರ್ತಿ ಮತ್ತು ಇತರರು ವಿರುದ್ಧ ಭಾರತ ಸರ್ಕಾರ ಈ ಪ್ರಕರಣದಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪರಿಣಾಮಕಾರಿಗೊಳಿಸುವುದಕ್ಕೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಎಸ್. ಸುರೇಶ್‌ಕುಮಾರ್
ನಗರಾಭಿವೃದ್ಧಿ, ಕಾನೂನು ಮತ್ತು
ಸಂಸದೀಯ ವ್ಯವಹಾರಗಳ ಸಚಿವರು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)

ಉದ್ಧೃತ ಭಾಗ

xx xx xx

11. ಮುನ್ಸಿಪಲ್ ಕೌನ್ಸಿಲ್‌ಗಳ ರಚನೆ.– (1) ಮುನ್ಸಿಪಲ್ ಕೌನ್ಸಿಲ್‌ಗಳು ಇವರುಗಳನ್ನು ಒಳಗೊಂಡಿರತಕ್ಕದ್ದು.–

xx xx xx

(3) ಮುನ್ಸಿಪಲ್ ಕೌನ್ಸಿಲ್‌ಗಳಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗಿರುವ ಸ್ಥಾನಗಳ ಒಟ್ಟು ಸಂಖ್ಯೆಯ ಸುಮಾರು ಮೂರರಲ್ಲಿ ಒಂದು ಭಾಗದಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು:

xx xx xx

ಮತ್ತು ಪರಂತು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು, ಹಾಗೆಯೇ "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(4) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕಾಗಿ ಮೀಸಲಿರಿಸಿದ ಹುದ್ದೆಗಳಲ್ಲಿ, ಮತ್ತು ಮುನ್ಸಿಪಲ್ ಕೌನ್ಸಿಲ್‌ಗಳಲ್ಲಿ ನೇರ ಚುನಾವಣೆ ಮೂಲಕ ಭರ್ತಿ ಮಾಡಬೇಕಾಗಿರುವ ಮೀಸಲಿರಿಸದ ಹುದ್ದೆಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

42. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು.–

xx xx xx

(2ಎ) ನಿಯಮಿಸಲಾದ ರೀತಿಯಲ್ಲಿ ಸರ್ಕಾರವು ಮೀಸಲಿರಿಸತಕ್ಕದ್ದು.

xx xx xx

(ಬಿ) ರಾಜ್ಯದಲ್ಲಿರುವ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗದಷ್ಟಕ್ಕೆ ಸರಿಸುಮಾರು ಹತ್ತಿರವಾಗಿರುವಂತೆ ರಾಜ್ಯದಲ್ಲಿರುವ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಅಂಥ ಸಂಖ್ಯೆ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದು:

xx xx xx

ಮತ್ತು ಪರಂತು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸದ ಹುದ್ದೆಗಳನ್ನು "ಬಿ" ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು. ಹಾಗೆಯೇ "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(ಸಿ) ರಾಜ್ಯದಲ್ಲಿರುವ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

xx **xx** **xx**

352. ಪಟ್ಟಣ ಪಂಚಾಯತಿಗೆ ಚುನಾವಣೆ.– (1) ಪಟ್ಟಣ ಪಂಚಾಯತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು.

(5) ಪಟ್ಟಣ ಪಂಚಾಯತಿಯಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗಿರುವ ಸ್ಥಾನಗಳ ಒಟ್ಟು ಸಂಖ್ಯೆಯ ಸುಮಾರು ಮೂರರಲ್ಲಿ ಒಂದು ಭಾಗದಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು:

xx **xx** **xx**

ಮತ್ತು ಪರಂತು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು, ಹಾಗೆಯೇ "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(6) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕಾಗಿ ಮೀಸಲಿರಿಸಿದ ಹುದ್ದೆಗಳಲ್ಲಿ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ನೇರ ಚುನಾವಣೆ ಮೂಲಕ ಭರ್ತಿ ಮಾಡಬೇಕಾಗಿರುವ ಮೀಸಲಿರಿಸದ ಹುದ್ದೆಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

xx **xx** **xx**

ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

xx **xx** **xx**

7. ನಿಗಮದ ರಚನೆ.– (1) ನಿಗಮವು ಇವರುಗಳನ್ನು ಒಳಗೊಂಡಿರತಕ್ಕದ್ದು.–

xx **xx** **xx**

(3) ನಿಗಮದಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗಿರುವ ಸ್ಥಾನಗಳ ಒಟ್ಟು ಸಂಖ್ಯೆಯ ಸುಮಾರು ಮೂರರಲ್ಲಿ ಒಂದು ಭಾಗದಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು:

xx **xx** **xx**

ಮತ್ತು ಪರಂತು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು, ಹಾಗೆಯೇ "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(4) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕಾಗಿ ಮೀಸಲಿರಿಸಿದ ಹುದ್ದೆಗಳಲ್ಲಿ ಮತ್ತು ನಿಗಮದಲ್ಲಿ ನೇರ ಚುನಾವಣೆ ಮೂಲಕ ಭರ್ತಿ ಮಾಡಬೇಕಾಗಿರುವ ಮೀಸಲಿರಿಸದ ಹುದ್ದೆಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

10. ಮೇಯರ್ ಮತ್ತು ಉಪಮೇಯರ್.–

xx **xx** **xx**

(ಬಿ) ರಾಜ್ಯದಲ್ಲಿರುವ ಮೇಯರ್ ಮತ್ತು ಉಪಮೇಯರ್ ಹುದ್ದೆಗಳ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗದಷ್ಟಕ್ಕೆ ಸರಿಸುಮಾರು ಹತ್ತಿರವಾಗಿರುವಂತೆ ರಾಜ್ಯದಲ್ಲಿರುವ ಮೇಯರ್ ಮತ್ತು ಉಪ ಮೇಯರ್ ಹುದ್ದೆಗಳ ಅಂಥ ಸಂಖ್ಯೆ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದು:

xx **xx** **xx**

ಮತ್ತು ಪರಂತು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸದ ಹುದ್ದೆಗಳನ್ನು "ಬಿ" ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು. ಹಾಗೆಯೇ "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(ಸಿ) ರಾಜ್ಯದಲ್ಲಿರುವ ಮೇಯರ್ ಮತ್ತು ಉಪ ಮೇಯರ್ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

KARNATAKA LEGISLATIVE ASSEMBLY
THIRTEENTH LEGISLATIVE ASSEMBLY
FOURTEENTH SESSION

THE KARNATAKA MUNICIPALITIES AND CERTAIN OTHER LAW (AMENDMENT) BILL, 2012

(L.A. Bill No. 19 of 2012)

A Bill further to amend the Karnataka Municipalities Act, 1964 and the Karnataka Municipal Corporations Act, 1976.

Whereas it is expedient further to amend the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the Sixty third year of the Republic of India as follows:-

1. Short title and commencement.- (1) This Act may be called the Karnataka Municipalities and Certain Other Law (Amendment) Act, 2012.

(2) It shall come into force at once.

2. Amendment of the Karnataka Act 22 of 1964.- In the Karnataka Municipalities Act, 1964, (Karnataka Act 22 of 1964),-

(i) in section 11,-

(a) in sub-section (3), after the second proviso, the following shall be inserted, namely:-

"Provided also that the number of seats so reserved for the backward classes under this sub-section shall be so determined that the total number of seats reserved for the scheduled castes and the scheduled tribes under sub-section (2) and the backward classes under this sub-section shall not exceed fifty per cent of the total number of seats in the Municipal Council."

(b) in sub-section (4), for the words "Not less than one third of the seats reserved", the words "Not more than fifty percent of the seats reserved" shall be substituted.

(ii) in section 42, in sub-section (2A),-

(a) in clause (b), after the second proviso, the following shall be inserted, namely:-

" Provided also that the number of offices of President and Vice-President reserved for the backward classes under this clause shall be so determined that the total number of offices of President and Vice-President reserved for the scheduled castes and the scheduled tribes and the backward classes under this clause shall not exceed fifty percent of the total number of offices of President and Vice-President of the Municipal Councils in the State."

(b) in clause (c), for the words "not less than one-third of the total number of offices of the President and Vice-President", the words "not more than fifty percent of the total number of offices of the President and Vice-President" shall be substituted.

(iii) in section 352,-

(a) in sub-section (5), after the second proviso, the following shall be inserted, namely:-

"Provided also that the number of seats reserved for the backward classes under this sub-section shall be so determined, that the total number of seats reserved for the scheduled casts and the scheduled tribes under sub-section (4) and the backward classes under this sub-section shall not exceed fifty per cent of the total number of seats in the Town Panchayat."

(b) in sub-section (6), for the words "Not less than one third of the seats reserved", the words "Not more than fifty percent of the seats reserved" shall be substituted.

3. Amendment of the Karnataka Act 14 of 1977.- In the Karnataka Municipal Corporations Act, 1976 (Karnataka Act 14 of 1977),-

(i) in section 7,-

(a) in sub-section (3), after the second proviso, the following shall be inserted, namely:-

"Provided also that the number of seats so reserved for the Backward Classes under this sub-section shall be so determined, that the total number of seats reserved for the Scheduled Castes and Schedule Tribes under sub-section(2) and the Backward Classes under this sub-section shall not exceed fifty per cent of the total number of seats in the City Corporations."

(b) in sub-section (4), for the words "Not less than one third of the seats reserved", the words "Not more than fifty percent of the seats reserved" shall be substituted.

(ii) in section 10, in sub-section (1A), -

(a) in clause (b), after the second proviso, the following shall be inserted, namely:-

" Provided also that the number of offices of Mayor and Deputy Mayor reserved for the backward classes under this clause shall be so determined that the total number of offices of Mayor and Deputy Mayor reserved for the scheduled castes and the scheduled tribes under clause (a) and the backward classes under this clause shall not exceed fifty percent of the total number of offices of Mayor and Deputy Mayor of the City Corporations in the State."

(b) in clause (c), for the words "not less than one third of the total number of offices of Mayor and Deputy Mayor", the words "not more than fifty percent of the total number of offices of Mayor and Deputy Mayor" shall be substituted.

STATEMENT OF OBJECTS AND REASONS

It is considered necessary to amend the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977) to provide for reservation of not more than fifty percent of seats to women in the urban local bodies thereby to give effect to the Judgment of Hon'ble Supreme Court of India in the case of K.Krishnamurthy and others v/s Union of India in writ petition (civil) No.1356 of 1994.

Hence the Bill,

FINANCIAL MEMORANDUM

There is no extra expenditure involved in the proposed legislative measure.

S.SURESH KUMAR
Minister for Urban Development,
Law and Parliamentary Affairs

P. OMPRAKASHA
Secretary
Karnataka Legislative Assembly

ANNEXURE

The extract from the Karnataka Municipalities Act, 1964 (Karnataka Act 22 of 1964)

xx xx

11. Constitution of municipal councils.— (1) The municipal council shall consist of,—

xx xx

(3) Such number of seats which shall, as nearly as may be, one-third of the total number of seats to be filled by direct election in a municipal council, shall be reserved for the persons belonging to the Backward Classes.

xx xx

Provided further that if no person falling under category "A" is available, the seats reserved for that category shall also be filled by the persons falling under the category "B" and vice versa.

(4) Not less than one-third of the seats reserved for each category of persons belonging to the Scheduled Castes, Scheduled Tribes and Backward Classes and those of the non-reserved seats to be filled by direct election in a municipal council shall be reserved for women:

xx xx

42. President and vice-president.—

xx xx

(2A) There shall be reserved by the Government in the prescribed manner,—

xx xx

(b) such number of offices of President and Vice-president in the State which shall as nearly as may be one-third of the total number of offices of President and Vice-president in the State for the persons belonging to the Backward Classes;

xx xx

Provided further that if no person falling under category "A" is available, offices reserved for that category shall also be filled by the persons falling under category "B" and vice versa.

(c) not less than one-third of the total number of offices of the President and Vice-president in the State from each of the categories, reserved for persons belonging to the Scheduled Castes, Scheduled Tribes and Backward Classes and those which are non-reserved, for women:

xx xx

352. Election to Town Panchayat.—(1) A Town Panchayat shall consist of,-

xx xx

(5) Such number of seats which shall as nearly as may be one third of the total number of seats to be filled by direct election in a Town Panchayat shall be reserved for persons belonging to the Backward Classes;

xx xx

Provided further that if no person falling under category "A" is available, the seats reserved for that category shall also be filled by the persons falling under category "B" and vice versa.

(6) Not less than one-third of the seats reserved for each category of persons belonging to the Scheduled Castes, Scheduled Tribes and Backward Classes and those of the non-reserved seats to be filled by direct election in a Town Panchayat shall be reserved for women:

xx xx

The extract from the Karnataka Municipal Corporations Act, 1976 (Karnataka Act 14 of 1977)

xx xx

7. Constitution of the Corporation .- (1) The Corporation shall consist of,-

xx xx

(3) Such number of seats which shall as nearly as may be, one third of the total number of seats to be filled by direct election in a corporation shall be reserved for persons belonging to the Backward Classes;

xx xx

Provided further that if no person falling under category "A" is available, the seats reserved for that category shall also be filled by the persons falling under category "B" and vice-versa.

xx xx

(4) Not less than one third of the seats reserved for each category of persons belonging to Scheduled Castes, Scheduled Tribes and Backward Classes and those of the non-reserved seats to be filled by direct election in a corporation shall be reserved for women:

xx xx

10. Mayor and Deputy Mayor.- (1) xx xx

(b) such number of offices of Mayor and Deputy Mayor in the State which shall as nearly as may be, one third of the total number of offices of the Mayor and Deputy Mayor in the State for the persons belonging to the Backward Classes;

xx xx

Provided further that if no person falling under category "A" is available, the offices reserved for that category shall also be filled by the persons falling under category "B" and vice-versa.

(c) not less than one third of the total number of offices of Mayor and Deputy Mayor in the State from each of the categories reserved for persons belonging to Scheduled Castes, Scheduled Tribes and Backward Classes and those which are non-reserved, for women:

xx xx

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೩೬

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/21/Bill/2012, Bangalore, Dated: 31.7.2012

The following Bill was introduced in Legislative Assembly on 31.7.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 21)

ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980ನ್ನು (1980ರ ಕರ್ನಾಟಕ ಅಧಿನಿಯಮ 6) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 11ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980ರ (1980ರ ಕರ್ನಾಟಕ ಅಧಿನಿಯಮ 6) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 11ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿ (ಎ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ) ಕರ್ನಾಟಕ ಜಲ ಸಂಪನ್ಮೂಲ ಇಂಜಿನಿಯರಿಂಗ್ ಸೇವೆಯ ಪ್ರಧಾನ ಅಭಿಯಂತರರು ಅಥವಾ ಮುಖ್ಯ ಅಭಿಯಂತರರು ಅಥವಾ ಅಧೀಕ್ಷಣಾ ಅಭಿಯಂತರರ ದರ್ಜೆಯಲ್ಲಿನ ಒಬ್ಬ ಅಧಿಕಾರಿಯು ಪ್ರಾಧಿಕಾರದ ಸಾಮಾನ್ಯ ಅಧೀಕ್ಷಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಪ್ರಾಧಿಕಾರದ ಆಡಳಿತಗಾರನಾಗಿರತಕ್ಕದ್ದು ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯ ನಿರ್ದೇಶಕರು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರತಕ್ಕದ್ದು ಮತ್ತು ಪ್ರಾಧಿಕಾರವು ಆತನಿಗೆ ನಿಯಮಿಸಬಹುದಾದ ಅಂಥ, ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರತ್ಯಾಯೋಜಿಸಬಹುದಾದ ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."

3. 11ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 11ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**11ಎ. ನಿರ್ದೇಶನಾಲಯದ ಸ್ಥಾಪನೆ.–** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಎಲ್ಲಾ ಪ್ರಾಧಿಕಾರಗಳ ಮೇಲ್ವಿಚಾರಣೆ ಮತ್ತು ಅವುಗಳೊಂದಿಗೆ ಸಮನ್ವಯ ಸಾಧಿಸಲು ಮತ್ತು ಪ್ರಾಧಿಕಾರಗಳ ಚಟುವಟಿಕೆಗಳ ಕಾರ್ಯನೀತಿ ವಿಷಯಗಳನ್ನು ಕುರಿತಂತೆ ಸರ್ಕಾರಕ್ಕೆ ಶಿಫಾರಸು ಮಾಡಲು ಅಥವಾ ಅದಕ್ಕೆ ಸಲಹೆ ನೀಡಲು ಎಲ್ಲಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳಿಗಾಗಿ ಒಂದು ನಿರ್ದೇಶನಾಲಯವನ್ನು ಸ್ಥಾಪಿಸಬಹುದು ಮತ್ತು ಸರ್ಕಾರದ ಕಾರ್ಯದರ್ಶಿ ದರ್ಜೆಯ ಒಬ್ಬ ಅಧಿಕಾರಿಯನ್ನು ನಿರ್ದೇಶಕನಾಗಿ ಮತ್ತು ನಿಯಮಿಸಬಹುದಾದ ಅಂಥ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಬಹುದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(1) ಪ್ರಧಾನ ಅಭಿಯಂತರರು ಅಥವಾ ಮುಖ್ಯ ಅಭಿಯಂತರರು ಅಥವಾ ಅಧೀಕ್ಷಣಾ ಅಭಿಯಂತರುಗಳನ್ನು ಪ್ರಾಧಿಕಾರದ ಆಡಳಿತಾಧಿಕಾರಿಯನ್ನಾಗಿ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿರ್ದೇಶಕರನ್ನು ಮುಖ್ಯ ಕಾರ್ಯನಿರ್ವಣಾಧಿಕಾರಿಯನ್ನಾಗಿ ನೇಮಕ ಮಾಡಿಕೊಳ್ಳಲು;

(2) ಎಲ್ಲಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳಿಗೆ ನಿರ್ದೇಶನಾಲಯವನ್ನು ಸ್ಥಾಪಿಸಲು; ಮತ್ತು

(3) ಎಲ್ಲಾ ಪ್ರಾಧಿಕಾರಗಳ ಮೇಲ್ವಿಚಾರಣೆ ಮತ್ತು ಸಮನ್ವಯದ ಕಾರ್ಯವನ್ನು ವಹಿಸಲು ಹಾಗೂ ಪ್ರಾಧಿಕಾರದ ಚಟುವಟಿಕೆಗಳ ಕಾರ್ಯನೀತಿ ವಿಷಯಗಳನ್ನು ಕುರಿತಂತೆ ಸರ್ಕಾರಕ್ಕೆ ಶಿಫಾರಸು ಮಾಡಲು ಮತ್ತು ಸಲಹೆ ನೀಡಲು,

–ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ, ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ

ಖಂಡ 2	ವಿಧೇಯಕದ 2ನೇ ಖಂಡದ ಮೂಲಕ ಪ್ರತಿಯೋಜಿಸಲು ಪ್ರಸ್ತಾಪಿಸಲಾದ 11ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡವು ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 3	ವಿಧೇಯಕದ 3ನೇ ಖಂಡದ ಮೂಲಕ ಸೇರಿಸಲು ಪ್ರಸ್ತಾಪಿಸಲಾದ 11ಎ ಪ್ರಕರಣವು ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಮತ್ತು ಸಿಬ್ಬಂದಿಯ ನೇಮಕಾತಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಬಸವರಾಜ ಬೊಮ್ಮಾಯಿ
ಜಲಸಂಪನ್ಮೂಲ ಸಚಿವರು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980ರ ಉದ್ಧೃತ ಭಾಗ

xx xx xx

"11. ಆಡಳಿತಗಾರರು ಮತ್ತು ಇತರ ಅಧಿಕಾರಿಗಳು.– (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ,–

(ಎ) ಸರ್ಕಾರದ ಕಾರ್ಯದರ್ಶಿ ದರ್ಜೆಯ ಅಥವಾ ಅದಕ್ಕಿಂತ ಮೇಲಿನ ದರ್ಜೆಯ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯನ್ನು ಪ್ರಾಧಿಕಾರದ ಆಡಳಿತಗಾರನನ್ನಾಗಿ ನೇಮಕ ಮಾಡತಕ್ಕದ್ದು ಮತ್ತು ಈತನು ಪ್ರಾಧಿಕಾರದ ಸಾಮಾನ್ಯ ಅಧೀಕ್ಷಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಪ್ರಾಧಿಕಾರವು ಆತನಿಗೆ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರತ್ಯಾಯೋಜಿಸಬಹುದಾದ ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."

xx xx xx

KARNATAKA LEGISLATIVE ASSEMBLY

THIRTEENTH LEGISLATIVE ASSEMBLY

FOURTEENTH SESSION

THE KARNATAKA COMMAND AREAS DEVELOPMENT(AMENDMENT) BILL, 2012

(L.A. Bill No. 21 of 2012)

A Bill further to amend the Karnataka Command Areas Development Act, 1980.

Whereas it is expedient further to amend the Karnataka Command Areas Development Act, 1980 (Karnataka Act 6 of 1980) for the purposes hereinafter appearing;

Be it enacted by the Karnataka State Legislature in the sixty-third year of the Republic of India as follows:-

1. Short title and commencement.- (1) This Act may be called the Karnataka Command Areas Development (Amendment) Act, 2012.

(2) It shall come into force at once.

2. Amendment of section 11.- In the Karnataka Command Areas Development Act, 1980 (Karnataka Act 6 of 1980) (hereinafter referred as the principal Act), in section 11, in sub-section (1), for clause (a), the following shall be substituted, namely:-

"(a) an officer of the Karnataka Water Resource Engineering Service in the grade of Engineer-in-Chief or Chief Engineer or Superintending Engineer shall be the Administrator of the Authority who shall, subject to the general superintendence and control of the Authority and the Director of Command Areas Development to be the Chief Executive Officer of the Authority and shall exercise and discharge such powers and duties as may be prescribed or delegated to him by the Authority."

3. Insertion of new section 11A.- After section 11 of the principal Act, the following shall be inserted, namely:-

"**11A. Establishment of Directorate.-** The State Government may, by notification, establish a Directorate for all Command Area Development Authorities and appoint an officer of the rank of Secretary to Government as Director and such officers and staff as may be prescribed, to supervise and co-ordinate with all Authorities and make recommendations to or advice the Government on policy matters on activities of the Authorities."

STATEMENT OF OBJECTS AND REASONS

It is considered necessary to amend the Karnataka Command Areas Development Act, 1980, to provide for,-

(1) appointment of an Engineer-in-Chief or Chief Engineer or Superintending Engineer as the Administrator of the Authority and the Director of Command Area Development Authority and the Chief Executive Officer;

(2) establishment of a Directorate for all Command Area Development Authorities; and

(3) entrusting the work of supervising and co-ordinating with all authorities and make recommendations to and advice the Government on policy matters on the activities of the authorities.

Hence, the Bill.

FINANCIAL MEMORANDUM

There is no extra expenditure involved in the proposed measure.

MEMORANDUM REGARDING DELEGATED LEGISLATION

Clause 2: Clause (a) of sub-section (1) of Section 11 proposed to be substituted by clause 2 of the Bill, empowers the State Government to make rules regarding powers to be exercised and duties to be discharged by the Chief Executive Officer of the Authority.

Clause 3: Section 11A proposed to be inserted by clause 3 of the Bill, empowers the State Government to make rules regarding the appointment of the Director, Officers and Staff of the Directorate.

BASAVARAJ BOMMAI
Minister for Water Resources

P. OMPRAKASHA
Secretary
Karnataka Legislative Assembly

ANNEXURE

Extract from the Karnataka Irrigation Act, 1965
(Karnataka Act 16 of 1965)

xx xx xx

11. Administrator and other Officers .- (1) The State Government shall, by notification, appoint to an Authority,-

(a) an officer of the State Government of or above the grade of Secretary to Government, as the Administrator of the Authority who shall, subject to the general superintendence and control of the Authority be the Chief Executive Officer of the Authority and shall exercise and discharge such powers and duties as may be prescribed or delegated to him by the Authority.

xx xx xx

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೩೭

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/24/Bill/2012, Bangalore, Dated: 30.7.2012

The following Bill was introduced in Legislative Assembly on 30.7.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 24)

ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು **ಕರ್ನಾಟಕ ಶಿಕ್ಷಣ (ತಿದ್ದುಪಡಿ) ಅಧಿನಿಯಮ, 2012** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 87ಎ ಹೊಸ ಪ್ರಕರಣದ ಸೇರ್ಪಡೆ.– ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ (1995ರ ಕರ್ನಾಟಕ ಅಧಿನಿಯಮ 1) 87ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ:–

"87ಎ. ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತುಗಳು.– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವುವೇ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಯ ಹುದ್ದೆಯನ್ನು ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ಹೊಂದಿರುವ

ಅಥವಾ ನಿಯಂತ್ರಿಸುತ್ತಿರುವ ಯಾವುವೇ ಇತರ ಸಂಸ್ಥೆಗಳಲ್ಲಿನ ಯಾವುದೇ ಇತರ ಹುದ್ದೆಯನ್ನು ಧಾರಣ ಮಾಡಲು, ಸಾರ್ವಜನಿಕ ಹಿತಾಸಕ್ತಿಯಿಂದ ಖಾಸಗಿ ಶಿಕ್ಷಣ ಸಂಸ್ಥೆಯ ಸೇವೆಯಲ್ಲಿರುವ ಯಾವೊಬ್ಬ ನೌಕರನನ್ನು ನೇಮಕಾತಿ ಮಾಡಿದಲ್ಲಿ ಹಾಗೆ ನೇಮಕಗೊಂಡ ನಿಯೋಜನೆಯ ಆಧಾರದ ಮೇಲಿನ ಅಂಥ ವ್ಯಕ್ತಿಯ ಸೇವೆಯನ್ನು ಖಾಸಗಿ ಆಡಳಿತ ಮಂಡಳಿಯು ಬಿಟ್ಟುಕೊಡತಕ್ಕದ್ದು ಮತ್ತು ಆತನು ಅಂಥ ನೇಮಕಾತಿಗೆ ನಿಕಟ ಪೂರ್ವದಲ್ಲಿ ಆತನು ಹೊಂದಿದ್ದ ಹುದ್ದೆಯಲ್ಲಿ ತನ್ನ ಧಾರಣಾಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(2) ಆತನು, ವಯೋನಿವೃತ್ತಿ ವಯಸ್ಸಿನೊಳಗಿನವನಾಗಿದ್ದಲ್ಲಿ, ಆತನ ನೇಮಕಾತಿಯ ಅವಧಿಯ ತರುವಾಯ ಆತನ ಸೇವೆಗಳನ್ನು ಖಾಸಗಿ ಆಡಳಿತ ಮಂಡಳಿಯು ಹಿಂತೆಗೆದುಕೊಳ್ಳತಕ್ಕದ್ದು.

3. ಮಾನ್ಯತೆ.- ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಹೊರಡಿಸಲಾದ ಯಾವುದೇ ನೋಟೀಸುಗಳು ಅಥವಾ ಆದೇಶಗಳನ್ನು ಒಳಗೊಂಡಂತೆ ಅವುಗಳ ಅಡಿಯಲ್ಲಿ ಕೈಗೊಂಡ ಅಥವಾ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕ್ರಮ ಅಥವಾ ಕಾರ್ಯವನ್ನು ಮತ್ತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಮೂಲ ಅಧಿನಿಯಮದಡಿಯಲ್ಲಿ ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರಕ್ಕೆ ಸರ್ಕಾರವು ಹೊರಡಿಸಿದ ಯಾವುದೇ ಸೂಚನೆಗಳು ಅಥವಾ ಆದೇಶಗಳ ಅನುಸರಣೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಯಾವೊಬ್ಬ ನೌಕರನ ಧಾರಣಾಧಿಕಾರವನ್ನು ಸಂರಕ್ಷಿಸುವ ಸಂಬಂಧದಲ್ಲಿ ನಡೆಸಲಾದ ಎಲ್ಲಾ ವ್ಯವಹರಣೆಗಳನ್ನು, ಅಂಥ ಸೂಚನೆಗಳು ಅಥವಾ ಆದೇಶ ಅಥವಾ ಕ್ರಮಗಳನ್ನು ಅಥವಾ ಕಾರ್ಯವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ, ಮೂಲ ಅಧಿನಿಯಮದ ಅಡಿಯಲ್ಲಿ ರೂಪಿಸಲಾಗಿದೆ, ಕೈಗೊಳ್ಳಲಾಗಿದೆ ಅಥವಾ ಮಾಡಲಾಗಿದೆ ಎಂಬಂತೆ ಮಾನ್ಯವಾಗಿವೆ ಮತ್ತು ಪರಿಣಾಮಕಾರಿಯಾಗಿವೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ,-

(ಎ) ಧಾರಣಾಧಿಕಾರದ ಸಂರಕ್ಷಣೆಯ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರದಿಂದ ಕೈಗೊಂಡ ಅಥವಾ ಮಾಡಿದ ಎಲ್ಲಾ ಕ್ರಮಗಳು, ವ್ಯವಹರಣೆಗಳು ಅಥವಾ ಕಾರ್ಯಗಳನ್ನು ಎಲ್ಲಾ ಉದ್ದೇಶಗಳಿಗಾಗಿ ಕಾನೂನಿಗನುಸಾರವಾಗಿ ಕೈಗೊಳ್ಳಬೇಕು ಮತ್ತು ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಈ ಅಧಿನಿಯಮಕ್ಕೆ ವಿರುದ್ಧವಾಗಿ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧೀಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ನಿರ್ವಹಿಸತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ; ಮತ್ತು

(ಸಿ) ಮೇಲಿನ ಉಪಬಂಧಗಳಿಗೆ ವಿರುದ್ಧವಾಗಿ ಯಾವೊಬ್ಬ ವ್ಯಕ್ತಿ ಅಥವಾ ಸರ್ಕಾರಕ್ಕೆ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯವು ಜಾರಿಗೊಳಿಸತಕ್ಕದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ಹೊಂದಿರುವ ಅಥವಾ ನಿಯಂತ್ರಿಸುತ್ತಿರುವ ಯಾವುದೇ ಇತರ ಸಂಸ್ಥೆಯಲ್ಲಿನ ಯಾವುದೇ ಇತರ ಹುದ್ದೆಗೆ ಸಾರ್ವಜನಿಕ ಹಿತಾಸಕ್ತಿಯಿಂದ ಖಾಸಗಿ ಶಿಕ್ಷಣ ಸಂಸ್ಥೆಯು ಒಬ್ಬ ನೌಕರನನ್ನು ನೇಮಕಮಾಡಿಕೊಂಡಲ್ಲಿ, ಆತನ ಸೇವಾ ಷರತ್ತುಗಳನ್ನು ಸಂರಕ್ಷಿಸಲು ಕರ್ನಾಟಕ ಶಿಕ್ಷಣ ಅಧಿನಿಯಮ, 1983ಕ್ಕೆ ತಿದ್ದುಪಡಿ ಮಾಡುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಸಿ.ಟಿ. ರವಿ
ಉನ್ನತ ಶಿಕ್ಷಣ ಸಚಿವರು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

THIRTEENTH LEGISLATIVE ASSEMBLY

FOURTEENTH SESSION

THE KARNATAKA EDUCATION (AMENDMENT) BILL, 2012

(L.A. Bill No. 24 of 2012)

A Bill further to amend the Karnataka Education Act, 1983.

Whereas it is expedient further to amend the Karnataka Education Act, 1983 for the purposes hereinafter appearing;

Be it enacted by the Karnataka State Legislature in the Sixty-Third Year of the Republic of India, as follows:-

1. Short title and commencement.- (1) This Act may be called the Karnataka Education (Amendment) Act, 2012.

(2) It shall come into force at once.

2. Insertion of new section 87A.- In the Karnataka Education Act, 1983 (Karnataka Act 1 of 1995), after section 87, the following shall be and shall always be deemed to have been inserted, namely:-

"87A. Conditions of Service of Private Educational Institution Employees.- (1) Notwithstanding anything contained in any law for the time being in force, if any employee in the services of a private educational institution is appointed in public interest to hold the post of Vice-Chancellor in any universities or any other post in any other institutions established or owned or controlled by the State Government, the private management shall surrender the services of such person on deputation basis who is so appointed and he shall be entitled to retain his lien in the post held by him immediately prior to such appointment.

(2) The private management shall take back his services after the tenure of his appointment if he is within the age of superannuation.

3. Validation.- Notwithstanding anything contained in any judgement, decree or order of any Court, Tribunal or other authority to the contrary, anything done or any action taken or purporting to have been done or taken (including any notices or orders issued and all proceedings held in relation to the protection of lien of any employee of private educational institution in pursuance of any instructions or order issued by the Government to any person or authority under principal Act before the commencement of this Act shall be deemed to be valid and effective as if such instructions or order or action or thing had been made, taken or done under the principal Act, as amended by this Act and accordingly,-

(a) all acts, proceedings or things taken or done by any authority in connection with protection of lien shall, for all purposes be deemed to be, and to have always been taken or done in accordance with law;

(b) no suit or other proceedings shall be maintained or continued in any Court or Tribunal or before any authority contrary to this Act; and

(c) no Court shall enforce any decree or order directing any person or Government contrary to the above provisions.

STATEMENT OF OBJECTS AND REASONS

It is considered necessary to amend the Karnataka Education Act, 1983 to protect the service condition of an employee of a private educational institution where he is appointed in public interest as Vice Chancellor of a university or in any other post in any other institution established or owned or controlled by the State Government.

Hence the Bill,

FINANCIAL MEMORANDUM

There is no extra expenditure involved in the proposed legislative measure.

C.T. RAVI
Minister for Higher Education

P. OMPRAKASHA
Secretary
Karnataka Legislative Assembly

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೩೮

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/25/Bill/2012, Bangalore, Dated: 30.7.2012

The following Bill was introduced in Legislative Assembly on 30.7.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 25)

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 29)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು **ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2012** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 14ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ (2001ರ ಕರ್ನಾಟಕ ಅಧಿನಿಯಮ 29) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 14ನೇ ಪ್ರಕರಣದಲ್ಲಿ (11)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ:–

"(12) ಈ ಅಧಿನಿಯಮದಲ್ಲಿ ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಖಾಸಗಿ ಶಿಕ್ಷಣ ಸಂಸ್ಥೆಯ ಶ್ರೇಷ್ಠ ಶಿಕ್ಷಣ ತಜ್ಞನನ್ನು ಕುಲಪತಿಯಂತೆ ನೇಮಕಾತಿ ಮಾಡಿಕೊಂಡಾಗ ಮತ್ತು ಮೊದಲಿನ ತನ್ನ ಹುದ್ದೆಗೆ ರಾಜೀನಾಮೆ ನೀಡದೆ ಸದರಿ ನೇಮಕಾತಿಯನ್ನು ಅವನು ಒಪ್ಪಿಕೊಂಡಾಗಲೆಲ್ಲ ಕುಲಪತಿಯ ಪದಾವಧಿಯ ಅವನ ನೇಮಕಾತಿಯನ್ನು ನಿಯೋಜನೆ ಮೇಲೆ ಎಂದು ಭಾವಿಸತಕ್ಕದ್ದು ಮತ್ತು ಅವನು ಕುಲಪತಿಯಾಗಿ

ನೇಮಕವಾಗುವುದಕ್ಕೆ ನಿಕಟ ಪೂರ್ವದಲ್ಲಿ ಅವನು ಹೊಂದಿದ್ದ ಹುದ್ದೆಯಲ್ಲಿನ ತನ್ನ ಧಾರಣಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಕುಲಪತಿಯಾಗಿ ಅವನ ಅವಧಿಯು ಪೂರ್ಣಗೊಂಡ ತರುವಾಯ ಖಾಸಗಿ ಶಿಕ್ಷಣ ಸಂಸ್ಥೆಯು, ಅವನು ಕುಲಪತಿಯಾಗಿ ನೇಮಕ ಹೊಂದುವ ನಿಕಟ ಪೂರ್ವದಲ್ಲಿ ಅವನು ಹೊಂದಿದ್ದ ಹುದ್ದೆಯಲ್ಲಿ ಮುಂದುವರೆಯುವುದಕ್ಕೆ ಅವನಿಗೆ ವಯೋ ನಿವೃತ್ತಿಯವರೆಗೆ ಅವಕಾಶ ನೀಡತಕ್ಕದ್ದು ಮತ್ತು ಅವನ ಸೇವಾ ಷರತ್ತುಗಳನ್ನು ಸಂರಕ್ಷಿಸತಕ್ಕದ್ದು ಮತ್ತು ಅವನಿಗೆ ಅನಾನುಕೂಲವಾಗುವಂತೆ ಅವುಗಳನ್ನು ವ್ಯತ್ಯಾಸಗೊಳಿಸತಕ್ಕದ್ದಲ್ಲ.

ವಿವರಣೆ.– ಈ ಉಪಪ್ರಕರಣದ ಉದ್ದೇಶಕ್ಕಾಗಿ "ಖಾಸಗಿ ಶಿಕ್ಷಣ ಸಂಸ್ಥೆ" ಎಂಬ ಪದಾವಳಿಯು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ (1995ರ ಕರ್ನಾಟಕ ಅಧಿನಿಯಮ 1) 2ನೇ ಪ್ರಕರಣದ 27ನೇ ಖಂಡದಲ್ಲಿ ಪರಿಭಾಷಿಸಲಾದ ಅರ್ಥವನ್ನೇ ಹೊಂದಿರತಕ್ಕದ್ದು."

3. ಮಾನ್ಯತೆ.– ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಹೊರಡಿಸಲಾದ ಯಾವುದೇ ನೋಟೀಸುಗಳು ಅಥವಾ ಆದೇಶಗಳನ್ನು ಒಳಗೊಂಡಂತೆ ಅವುಗಳ ಅಡಿಯಲ್ಲಿ ಕೈಗೊಂಡ ಅಥವಾ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕ್ರಮ ಅಥವಾ ಕಾರ್ಯವನ್ನು ಮತ್ತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಮೂಲ ಅಧಿನಿಯಮದಡಿಯಲ್ಲಿ ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರಕ್ಕೆ ಸರ್ಕಾರವು ಹೊರಡಿಸಿದ ಯಾವುದೇ ಸೂಚನೆಗಳು ಅಥವಾ ಆದೇಶಗಳ ಅನುಸರಣೆಯಲ್ಲಿ ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಯಾವೊಬ್ಬ ನೌಕರನ ಧಾರಣಾಧಿಕಾರವನ್ನು ಸಂರಕ್ಷಿಸುವ ಸಂಬಂಧದಲ್ಲಿ ನಡೆಸಲಾದ ಎಲ್ಲಾ ವ್ಯವಹರಣೆಗಳನ್ನು, ಅಂಥ ಸೂಚನೆಗಳು ಅಥವಾ ಆದೇಶ ಅಥವಾ ಕ್ರಮಗಳನ್ನು ಅಥವಾ ಕಾರ್ಯವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ, ಮೂಲ ಅಧಿನಿಯಮದ ಅಡಿಯಲ್ಲಿ ರೂಪಿಸಲಾಗಿದೆ, ಕೈಗೊಳ್ಳಲಾಗಿದೆ ಅಥವಾ ಮಾಡಲಾಗಿದೆ ಎಂಬಂತೆ ಮಾನ್ಯವಾಗಿವೆ ಮತ್ತು ಪರಿಣಾಮಕಾರಿಯಾಗಿವೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ,–

(ಎ) ಧಾರಣಾಧಿಕಾರದ ಸಂರಕ್ಷಣೆಯ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರದಿಂದ ಕೈಗೊಂಡ ಅಥವಾ ಮಾಡಿದ ಎಲ್ಲಾ ಕ್ರಮಗಳು, ವ್ಯವಹರಣೆಗಳು ಅಥವಾ ಕಾರ್ಯಗಳನ್ನು ಎಲ್ಲಾ ಉದ್ದೇಶಗಳಿಗಾಗಿ ಕಾನೂನಿಗನುಸಾರವಾಗಿ ಕೈಗೊಳ್ಳಬೇಕು ಮತ್ತು ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಈ ಅಧಿನಿಯಮಕ್ಕೆ ವಿರುದ್ಧವಾಗಿ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧೀಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ನಿರ್ವಹಿಸತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ; ಮತ್ತು

(ಸಿ) ಮೇಲಿನ ಉಪಬಂಧಗಳಿಗೆ ವಿರುದ್ಧವಾಗಿ ಯಾವೊಬ್ಬ ವ್ಯಕ್ತಿ ಅಥವಾ ಸರ್ಕಾರಕ್ಕೆ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯವು ಜಾರಿಗೊಳಿಸತಕ್ಕದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಖಾಸಗಿ ಶಿಕ್ಷಣ ಸಂಸ್ಥೆಯ ನೌಕರನಾಗಿರುವಂಥ ವ್ಯಕ್ತಿಯನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಕುಲಪತಿಯನ್ನಾಗಿ ನೇಮಕ ಮಾಡಿಕೊಂಡಲ್ಲಿ, ಆತನ ಪದಾವಧಿಯಲ್ಲಿ ಹಾಗೂ ಕುಲಪತಿಯ ಪದಾವಧಿ ಮುಗಿದ ತರುವಾಯವೂ ಆತನ ಹಿತಾಸಕ್ತಿಯನ್ನು ಸಂರಕ್ಷಿಸಲು ಮತ್ತು ಕುಲಪತಿಯನ್ನಾಗಿ ಯಾವ ಖಾಸಗಿ ಶಿಕ್ಷಣ ಸಂಸ್ಥೆಯಿಂದ ಆತನನ್ನು ಕರೆತರಲಾಗಿದೆಯೋ ಆತನು ನೇಮಕಾತಿಯ ನಿಕಟ ಪೂರ್ವದಲ್ಲಿರುವ ಹುದ್ದೆಯಲ್ಲಿಯೇ ವಯೋನಿವೃತ್ತಿ ಹೊಂದುವವರೆಗೂ ಮುಂದುವರೆಯುವುದಕ್ಕೆ ಆ ಸಂಸ್ಥೆಯು ಅನುಮತಿಯನ್ನು ನೀಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಸಿ.ಟಿ. ರವಿ
ಉನ್ನತ ಶಿಕ್ಷಣ ಸಚಿವರು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

THIRTEENTH LEGISLATIVE ASSEMBLY

FOURTEENTH SESSION

THE KARNATAKA STATE UNIVERSITIES (AMENDMENT) BILL, 2012

(L.A. Bill No. 25 of 2012)

A Bill further to amend the Karnataka State Universities Act, 2000.

Whereas it is expedient further to amend the Karnataka State Universities Act, 2000 (Karnataka Act 29 of 2001) for the purposes hereinafter appearing;

Be it enacted by the Karnataka State Legislature in the Sixty Third Year of the Republic of India, as follows:-

1. Short title and commencement.- (1) This Act may be called the Karnataka State Universities (Amendment) Act, 2012.

2) It shall come into force at once.

2. Amendment of section 14.- In section 14 of the Karnataka State Universities Act, 2000 (Karnataka Act 29 of 2001) (hereinafter referred to as the principal Act), after sub-section (11), the following shall be and shall always be deemed to have been inserted, namely:-

"(12) Notwithstanding anything contained in this Act or in the Karnataka Education Act, 1983 (Karnataka Act 1 of 1995) or any other law for the time being in force, whenever an eminent academician of a private educational institution is appointed as Vice-Chancellor and if he accepts the said appointment without resigning his earlier post, his appointment during the tenure as Vice-Chancellor shall be deemed to be on deputation and he shall have lien in the post held by him immediately prior to the appointment as Vice-Chancellor and after expiry of his tenure as Vice-Chancellor, the private educational institution shall allow him to continue in the post held by him immediately before his appointment to serve till superannuation. Further, his service conditions shall be protected and it shall not be varied to his disadvantage.

Explanation.- For the purpose of this sub-section, the term "private educational institution" shall have the same meaning as defined in clause (27) of section 2 of the Karnataka Education Act, 1983 (Karnataka Act 1 of 1995)."

3. Validation.- Notwithstanding anything contained in any judgement, decree or order of any Court, Tribunal or other authority to the contrary, anything done or any action taken or purporting to have been done or taken (including any notices or orders issued and all proceedings held in relation to the protection of lien of any employee of private educational institution in pursuance of any instructions or order issued by the Government to any person or authority under any Act before the commencement of this Act shall be deemed to be valid and effective as if such instructions or order or action or thing had been made, taken or done under the principal Act, as amended by this Act and accordingly,-

(d) all acts, proceedings or things taken or done by any authority in connection with protection of lien shall, for all purposes be deemed to be, and to have always been taken or done in accordance with law;

(e) no suit or other proceedings shall be maintained or continued in any Court or Tribunal or before any authority contrary to this Act; and

(f) no Court shall enforce any decree or order directing any person or Government contrary to the above provisions.

STATEMENT OF OBJECTS AND REASONS

It is considered necessary to amend the Karnataka State Universities Act, 2000 to protect the interest of a person who is an employee of a private educational institution and appointed in public interest as Vice Chancellor, during his term and even after expiry of his term as Vice Chancellor.

Hence the Bill,

FINANCIAL MEMORANDUM

There is no extra expenditure involved in the proposed legislative measure.

C.T. RAVI
Minister for Higher Education

P. OMPRAKASHA
Secretary
Karnataka Legislative Assembly

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೩೯

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/26/Bill/2012, Bangalore, Dated: 31.7.2012

The following Bill was introduced in Legislative Assembly on 31.7.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ (ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 26)

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 20ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 20ನೇ ಪ್ರಕರಣದಲ್ಲಿ "ಮೂವತ್ತು ರೂಪಾಯಿಗಳನ್ನು" ಎಂಬ ಪದಗಳಿಗೆ "ಆಜೀವ ಸದಸ್ಯತ್ವಕ್ಕಾಗಿ ನಿಯಮಿಸಬಹುದಾದ ಅಂಥ ಶುಲ್ಕವನ್ನು" ಎಂಬ ಪದಗಳನ್ನು 1996ರ ಜನವರಿ 1ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

3. 24ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 24ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು 1996ರ ಜನವರಿ 1ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

"(1) 18 ಅಥವಾ 20ನೇ ಪ್ರಕರಣದಲ್ಲಿ ಏನೇ ಇದ್ದರೂ, 18ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿದ ಅಥವಾ ಮುಂದುವರೆಸಿದ ಹೋಮಿಯೋಪತಿ ವೃತ್ತಿಗಾರನನ್ನು ಹೊರತುಪಡಿಸಿ, ಪ್ರತಿಯೊಬ್ಬ ನೋಂದಾಯಿತ ಹೋಮಿಯೋಪತಿ ವೃತ್ತಿಗಾರನು, ಪ್ರತಿ ವರ್ಷದ ಡಿಸೆಂಬರ್ ಮೂವತ್ತೊಂದನೇ ದಿವಸದಂದು ಅಥವಾ ಅದಕ್ಕೆ ಮೊದಲು ಮತ್ತು ಮುಂದಿನ ವರ್ಷದಲ್ಲಿ, ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿದಂದು ಮತ್ತು ಅದರ ತರುವಾಯದ ಪ್ರತಿ ವರ್ಷವು, ತನ್ನ ಹೆಸರನ್ನು ಮುಂದುವರಿಸಲು ಮಂಡಳಿಗೆ ನಿಯಮಿಸಲಾದ ನವೀಕರಣ ಫೀಜನ್ನು ಸಂದಾಯ ಮಾಡತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿ, ಆಜೀವ ನೋಂದಣಿಯು ಪ್ರಾರಂಭವಾಗುವುದಕ್ಕೆ ಮೊದಲು ನೋಂದಾಯಿತನಾದ ಒಬ್ಬ ಹೋಮಿಯೋಪತಿ ವೃತ್ತಿಗಾರನು, ಆಜೀವ ಪರ್ಯಂತ ರಿಜಿಸ್ಟರಿನಲ್ಲಿ ಆತನ ಹೆಸರನ್ನು ಮುಂದುವರಿಸುವುದಕ್ಕಾಗಿ, ನವೀಕರಣ ಫೀಜಾಗಿ ನಿಯಮಿಸಬಹುದಾದ ಅಂಥ ಮೊತ್ತವನ್ನು ಸಂದಾಯ ಮಾಡತಕ್ಕದ್ದು."

4. 35ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 35ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ನಿಯಮಗಳನ್ನು ರಚಿಸಬಹುದು" ಎಂಬ ಪದಗಳಿಗೆ ಮೊದಲು "ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

5. ಮಾನ್ಯತೆ.- ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಯಾವುವೇ ನಿಯಮಗಳು, ಅಧಿಸೂಚನೆಯಗಳು, ಹೊರಡಿಸಲಾದ ನೋಟೀಸುಗಳು ಅಥವಾ ಆದೇಶಗಳ ಅಡಿಯಲ್ಲಿ ಕೈಗೊಂಡ ಅಥವಾ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕ್ರಮ ಅಥವಾ ಕಾರ್ಯವನ್ನು ಮತ್ತು ಸದಸ್ಯತ್ವದ ಉದ್ದೇಶಕ್ಕಾಗಿ ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರ ಅಥವಾ ಮಂಡಳಿಯು ಆಜೀವ ಫೀಜು ಅಥವಾ ಯಾವುದೇ ನವೀಕರಣ ಫೀಜನ್ನು ವಿಧಿಸುವುದಕ್ಕಾಗಿ ನಡೆಸಲಾದ ಎಲ್ಲಾ ವ್ಯವಹರಣೆಗಳನ್ನು, ಅಂಥ ಫೀಜಿನ ಹೆಚ್ಚಿನ ದರದ ವಿಧಿಸುವಿಕೆಯನ್ನು ಮತ್ತು ಸಂಗ್ರಹಣೆಯನ್ನು, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ, ಮೂಲ ಅಧಿನಿಯಮದ ಅಡಿಯಲ್ಲಿ ಕಾನೂನಿಗನುಸಾರವಾಗಿ ಸಂಗ್ರಹಿಲಾಗಿದೆ ಅಥವಾ ಕ್ರಮ ಕೈಗೊಳ್ಳಲಾಗಿದೆ ಅಥವಾ ಕಾರ್ಯವನ್ನು ಮಾಡಲಾಗಿದೆ ಎಂಬಂತೆ ಕಾನೂನುಬದ್ಧವಾಗಿ ವಿಧಿಸಲಾಗಿದೆ ಅಥವಾ ಸಂಗ್ರಹಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ,–

(ಎ) ಯಾವುದೇ ಅಂಥ ಫೀಜು, ಹೆಚ್ಚುವರಿ ಫೀಜಿನ ಮರು ಸಂದಾಯಕ್ಕಾಗಿನ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ನಿರ್ವಹಿಸತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ; ಮತ್ತು

(ಬಿ) ಯಾವುದೇ ಅಂಥ ಫೀಜು, ಹೆಚ್ಚುವರಿ ಫೀಜಿನ ಮರುಸಂದಾಯವನ್ನು ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆಜ್ಞೆಯನ್ನು ಯಾವುದೇ ನ್ಯಾಯಾಲಯವು ಜಾರಿಗೊಳಿಸತಕ್ಕದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35), ಈ ಮುಂದಿನವುಗಳಿಗಾಗಿ,–

(i) ರಾಜ್ಯದಲ್ಲಿ ಹೋಮಿಯೋಪತಿ ವೈದ್ಯಕೀಯ ಪದ್ಧತಿಯ ವೃತ್ತಿಗಾರರ ಸದಸ್ಯತ್ವ ಫೀಜುಗಳನ್ನು, ನೋಂದಣಿಗಾಗಿ ಆಜೀವ ಸದಸ್ಯತ್ವ ಫೀಜುಗಳನ್ನು ಪರಿಷ್ಕರಿಸಲು;

(ii) ರಾಜ್ಯ ಸರ್ಕಾರ ಮತ್ತು ಮಂಡಳಿಯು ಹೋಮಿಯೋಪತಿ ವೃತ್ತಿಗಾರರಿಗೆ ಆಜೀವ ಫೀಜನ್ನು, ಯಾವುದೇ ನವೀಕರಣ ಫೀಜನ್ನು ವಿಧಿಸುವುದು ಮತ್ತು ಹೆಚ್ಚಿಸಲಾದ ಫೀಜನ್ನು ಸಂಗ್ರಹಿಸುವುದು ಇವುಗಳನ್ನು ಮಾನ್ಯತೆ ಮಾಡಲು,

– ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

ಖಂಡ 2: 20ನೇ ಪ್ರಕರಣವು ಹೋಮಿಯೋಪತಿ ವೈದ್ಯಕೀಯ ಪದ್ಧತಿಯ ವೃತ್ತಿಗಾರರ ಆಜೀವ ಸದಸ್ಯತ್ವದ ನೋಂದಣಿಗೆ ಉಪಬಂಧವನ್ನು ಕಲ್ಪಿಸಲು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 3: 24ನೇ ಪ್ರಕರಣದ (1)ನೇ ಉಪ ಪ್ರಕರಣವು, ರಿಜಿಸ್ಟರಿನಲ್ಲಿ, ಹೋಮಿಯೋಪತಿ ವೈದ್ಯಕೀಯ ಪದ್ಧತಿಯ ವೃತ್ತಿಗಾರರ ಹೆಸರಿನ ನೋಂದಣಿಯ ನವೀಕರಣಕ್ಕಾಗಿ ಸಂದಾಯ ಮಾಡಬೇಕಾದ ಫೀಜಿನ ಮೊಬಲಗಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 4: 35ನೇ ಪ್ರಕರಣದ (1)ನೇ ಉಪ ಪ್ರಕರಣವು, ಈ ಅಧಿನಿಯಮದ ಉದ್ದೇಶವನ್ನು ಕಾರ್ಯರೂಪಗೊಳಿಸಲು ಪೂರ್ವ ಪ್ರಕಟಣೆಯ ತರುವಾಯ ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಅರವಿಂದ ಲಿಂಬಾವಳಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35)
ಉದ್ಧೃತ ಭಾಗ

xxx xxx xxx

20. ತರುವಾಯದ ನೋಂದಣಿಗೆ ಅರ್ಹತೆಗಳು.- 19ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮಂಡಲಿಯ ರಚನೆಯ ತರುವಾಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅರ್ಹತೆಗಳನ್ನು ಅವನು ಹೊಂದಿದ್ದರೆ ಮಾತ್ರ ಮೂವತ್ತು ರೂಪಾಯಿಗಳನ್ನು ಸಂದಾಯ ಮಾಡಿದ ಮೇಲೆ "ರಿಜಿಸ್ಟರಿನಲ್ಲಿ" ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು

xxx xxx xxx

24. ನವೀಕರಣ ಫೀಜು.- (1) 18 ಅಥವಾ 20ನೇ ಪ್ರಕರಣದಲ್ಲಿ ಏನೇ ಇದ್ದರೂ, ಪ್ರತಿಯೊಬ್ಬ ನೋಂದಾಯಿತ ವೃತ್ತಿಗಾರನು ಪ್ರತಿ ವರ್ಷದ ಡಿಸೆಂಬರಿನ ಮೂವತ್ತೊಂದನೇ ದಿವಸದಂದು ಅಥವಾ ಅದಕ್ಕೆ ಮುಂಚೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ಮುಂದುವರಿಸಲು ಮಂಡಲಿಗೆ ಹತ್ತು ರೂಪಾಯಿಗಳ ನವೀಕರಣ ಫೀಜನ್ನು ಸಂದಾಯ ಮಾಡತಕ್ಕದ್ದು.

(2) ನವೀಕರಣದ ಫೀಜನ್ನು ನಿಗದಿತ ದಿನಾಂಕಕ್ಕಿಂತ ಮುಂಚೆ ಸಂದಾಯ ಮಾಡದಿದ್ದರೆ, ರಿಜಿಸ್ಟ್ರಾರನು ಹಾಗೆ ಸಂದಾಯ ಮಾಡಲು ತಪ್ಪಿದವನ ಹೆಸರನ್ನು ರಿಜಿಸ್ಟರಿನಿಂದ ತೆಗೆದು ಹಾಕತಕ್ಕದ್ದು. ಹಾಗೆ ತೆಗೆದುಹಾಕಿದ ಮೇಲೆ, ಆ ವೃತ್ತಿಗಾರನಿಗೆ ನೀಡಿರುವ ನೋಂದಣಿ ಪ್ರಮಾಣ ಪತ್ರವು ರದ್ದಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, ಹಾಗೆ ತೆಗೆದುಹಾಕಲಾದ ಹೆಸರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತಿಗೊಳಪಟ್ಟು ನವೀಕರಣ ಫೀಜನ್ನು ಸಂದಾಯ ಮಾಡಿದ ಮೇಲೆ ರಿಜಿಸ್ಟರಿನಲ್ಲಿ ಪುನಃ ನಮೂದಿಸಬಹುದು ಮತ್ತು ಹೊಸ ನೋಂದಣಿ ಪ್ರಮಾಣ ಪತ್ರವನ್ನು ಪುನಃ ನೀಡಬಹುದು.

xxx xxx xxx

35. ನಿಯಮಗಳು.- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

xxx xxx xxx

KARNATAKA LEGISLATIVE ASSEMBLY

THIRTEENTH LEGISLATIVE ASSEMBLY

FOURTEENTH SESSION

THE KARNATAKA HOMOEOPATHIC PRACTITIONERS (AMENDMENT) BILL, 2012

(L.A. Bill No. 26 of 2012)

A Bill further to amend the Karnataka Homoeopathic Practitioners Act, 1961.

Whereas it is expedient further to amend the Karnataka Homoeopathic Practitioners Act, 1961 (Karnataka Act 35 of 1961), for the purposes hereinafter appearing;

Be it enacted by the Karnataka State Legislature in the Sixty-Third Year of the Republic of India, as follows:-

1. Short title and commencement.- (1) This Act may be called the Karnataka Homoeopathic Practitioners (Amendment) Act, 2012.

(2) It shall come into force at once.

2. Amendment of section 20.- In the Karnataka Homoeopathic Practitioners Act, 1961 (Karnataka Act 35 of 1961) (hereinafter referred to as the principal Act), in section 20, for the words "thirty rupees", the words "such fee as may be prescribed for life time membership" shall be deemed to have been substituted with effect from 1st January, 1996.

3. Amendment of section 24.- In section 24 of the principal Act, for sub-section (1), the following shall be deemed to have been substituted with effect from 1st January, 1996, namely:-

"(1) Notwithstanding anything contained in section 18 or 20, each Homoeopathic Practitioner other than a Homoeopathic Practitioner whose name is entered in the register under section 18 or continued in the register shall pay to the Board on or before the thirty first day of December of every year and in succeeding year in which his name is entered in the register and every year thereafter a prescribed renewal fee for the continuance of his name on the register:

Provided that a Homoeopathic Practitioner registered under this Act, before the commencement of the life time registration may pay such amount as renewal fee, as may be prescribed, for the continuance of his name on the register for life time."

4. Amendment of section 35.- In section 35 of the principal Act, in sub-section (1), after the words "make rules", the words "prospectively or retrospectively" shall be inserted.

5. Validation.- Notwithstanding anything contained in any judgment, decree or order of any Court, Tribunal or other Authority to the contrary, anything done or any action taken or purporting to have been done or taken under any rules, notifications, notices or order issued and all proceedings held for levy of life time fee or any renewal fee by the State Government or the Board from any person for the purpose of membership shall be deemed to have been validly levied or collected and effective as if such levy and collection of enhanced rate of fee has been collected or action or thing had been done or taken under the principal Act, as amended by this Act in accordance with the law and accordingly,-

(a) no suit or other proceedings shall be maintained or continued in any court or Tribunal or before any Authority for the refund of any such fee, additional fee; and

(b) no court shall enforce any decree or order directing the refund of any such fee, additional fee.

STATEMENT OF OBJECTS AND REASONS

It is considered necessary to amend the Karnataka Homoeopathic Practitioners Act, 1961 (Karnataka Act 35 of 1961) to provide,-

(i) for revision of membership fees, life time fees for registration of Practitioners of the Homoeopathic system of medicine in the State;

(ii) a provision to validate the collection of levy of life time fee, any renewal fee and collection of enhanced fee from the Homoeopathic Practitioners by the State Government and the Board.

Hence, the Bill.

FINANCIAL MEMORANDUM

There is no extra expenditure involved in the proposed legislative measure.

MEMORANDUM REGARDING DELEGATED LEGISLATION

Clause 2 : Section 20 empowers the State Government to make rules to provide a provision for the lifetime membership registration of practitioners of the Homoeopathic System of medicine.

Clause 3: Sub-section (1) of Section 24, empowers the State Government to make rules regarding the amount payable as renewal fee of registration of name of practitioners of the Homoeopathic System of medicine on the register.

Clause 4 : Sub-section (1) of Section 35, empowers the State Government to make rules prospectively or retrospectively after previous publication for carrying out the purposes of the Act.

The proposed delegation of legislative power is normal in character.

ARAVINDA LIMBAVALI
Minister for Health and Family Welfare

P. OMPRAKASHA
Secretary
Karnataka Legislative Assembly

ANNEXURE

Extract from the Karnataka Homoeopathic Practitioners Act, 1961 (Karnataka Act 35 of 1961)

XX XX XX

20. Qualifications for subsequent registration.—After the constitution of the Board referred to in sub-section (1) of section 19, a person shall on payment of thirty rupees be entitled to have his name entered in the register, only if he possesses any of the qualifications specified in the Schedule.

XX XX XX

24. Renewal fee.—(1) Notwithstanding anything contained in section 18 or 20, each registered practitioner shall pay to the Board on or before the thirty-first day of December of every year a renewal fee of ten rupees for the continuance of his name in the register.

XX XX XX

35. Rules.—(1) The State Government may, by notification, and after previous publication, make rules to carry out all or any of the purposes of this Act.

XX XX XX

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೦

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/27/Bill/2012, Bangalore, Dated: 31.7.2012

The following Bill was introduced in Legislative Assembly on 31.7.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ (ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 27)

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ನ್ನು (2012ರ ಕರ್ನಾಟಕ ಅಧಿನಿಯಮ ಸಂಖ್ಯೆ 1) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು, 2012ರ ಏಪ್ರಿಲ್ 2ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಶೀರ್ಷಿಕೆಯ ತಿದ್ದುಪಡಿ.– ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 1) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) "ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011" ಎಂಬ ಶೀರ್ಷಿಕೆಗೆ "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ಎಂಬ ಶೀರ್ಷಿಕೆಯನ್ನು ಪ್ರತಿಯೋಜಿಸತಕ್ಕದ್ದು.

3. 1ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 1ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011" ಎಂಬ ಪದಗಳು ಅಲ್ಪವಿರಾಮ ಚಿಹ್ನೆ ಮತ್ತು ಅಂಕಿಗಳಿಗೆ "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ಎಂಬ ಪದಗಳು ಅಲ್ಪವಿರಾಮ ಚಿಹ್ನೆ ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

. **10ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಗ್ರೂಪ್ 'ಬಿ' ಅಧಿಕಾರಿಯ" ಎಂಬ ಪದಗಳಿಗೆ "ಗ್ರೂಪ್ 'ಬಿ' ಅಥವಾ ಗ್ರೂಪ್ 'ಸಿ' ಅಧಿಕಾರಿಯ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ನ್ನು,–

(i) ಸಾರ್ವಜನಿಕರಿಂದ ಸ್ವೀಕರಿಸಿದ ಸಲಹೆಗಳು ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸನ್ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿಯ ಸಮಿತಿಯ ತೀರ್ಮಾನದಂತೆ ಶೀರ್ಷಿಕೆಯನ್ನು "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ಎಂದು ಬದಲಾಯಿಸಲು; ಮತ್ತು

(ii) 10ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ವೆಚ್ಚವನ್ನು ವಿಧಿಸುವುದಕ್ಕಾಗಿ ಗ್ರೂಪ್ 'ಬಿ' ಅಥವಾ 'ಸಿ' ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯನ್ನು ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸಲು,

– ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಜಗದೀಶ ಶೆಟ್ಟರ
ಮುಖ್ಯಮಂತ್ರಿಗಳು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ರ (2012 ರ ಕರ್ನಾಟಕ ಅಧಿನಿಯಮ 1) ಉದ್ಧೃತ ಭಾಗ

ಕರ್ನಾಟಕ ರಾಜ್ಯದಲ್ಲಿನ ನಾಗರಿಕರಿಗೆ ಗೊತ್ತುಮಾಡಿದ ಕಾಲಮಿತಿಯೊಳಗೆ ಸೇವೆಗಳ ಖಾತರಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿನ ನಾಗರಿಕರಿಗೆ ಗೊತ್ತುಮಾಡಿದ ಕಾಲಮಿತಿಯೊಳಗೆ ಸೇವೆಗಳ ಖಾತರಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ಎಂದು ಕರೆಯತಕ್ಕದ್ದು.

XX XX XX

10. ಸಕ್ಷಮ ಅಧಿಕಾರಿಯ ನೇಮಕಾತಿ.– (1) ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮಕ್ಕನುಸಾರವಾಗಿ ಸೇವೆಗಳನ್ನು ವಿಲೆ ಮಾಡುವಲ್ಲಿ ಕರ್ತವ್ಯ ಲೋಪ ಎಸಗುವ ಅಥವಾ ವಿಳಂಬ ಮಾಡುವ, ಹೆಸರಿಸಲಾದ ಅಧಿಕಾರಿ ಅಥವಾ ಆತನ ಅಧೀನದಲ್ಲಿಯ ಸಾರ್ವಜನಿಕ ನೌಕರನ ವಿರುದ್ಧ ವೆಚ್ಚವನ್ನು ವಿಧಿಸುವುದಕ್ಕೆ ಸಕ್ಷಮ ಅಧಿಕಾರಿಯಂತೆ ಕಾರ್ಯ ನಿರ್ವಹಿಸಲು ಸರ್ಕಾರದ ಗ್ರೂಪ್ 'ಬಿ' ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಅಥವಾ ಸಾರ್ವಜನಿಕ ಪ್ರಾಧಿಕಾರದ ಸಂದರ್ಭದಲ್ಲಿ ಇದಕ್ಕೆ ತತ್ಸಮನಾದ ಶ್ರೇಣಿಯ ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು.

XX XX XX

KARNATAKA LEGISLATIVE ASSEMBLY

THIRTEENTH LEGISLATIVE ASSEMBLY

FOURTEENTH SESSION

THE KARNATAKA GUARANTEE OF SERVICES TO CITIZENS (AMENDMENT) BILL, 2012

(L.A. Bill No. 27 of 2012)

A Bill to amend the Karnataka Guarantee of Services to Citizens Act, 2011.

Whereas, it is expedient to amend the Karnataka Guarantee of Services to Citizens Act, 2011 (Karnataka Act 1 of 2012) for the purposes hereinafter appearing;

Be it enacted by the Karnataka State Legislature in the Sixty Third Year of the Republic of India as follows:-

1. Short title and commencement.- (1) This Act may be called the Karnataka Guarantee of Services to Citizens (Amendment) Act, 2012.

(2) It shall come into force with effect from the 2nd day of April, 2012.

2. Amendment of title.- In the Karnataka Guarantee of Services to Citizens Act, 2011 (Karnataka Act 1 of 2012) (hereinafter referred to as the principal Act), for the title "THE KARNATAKA GUARANTEE OF SERVICES TO CITIZENS ACT, 2011", the title "THE KARNATAKA SAKAALA SERVICES ACT, 2011" shall be substituted.

3. Amendment of section 1.- In section 1 of the principal Act, in sub-section (1), for the words, punctuation and figures "The Karnataka Guarantee of Services to Citizens Act, 2011", the words, punctuation and figures "The Karnataka Sakaala Services Act, 2011" shall be substituted.

4. Amendment of section 10.- In section 10 of the principal Act, in sub-section (1), for the words "Group B officer", the words "Group B or C Officer" shall be substituted.

STATEMENT OF OBJECTS AND REASONS

It is considered necessary to amend the Karnataka Guarantee of Services to Citizens Act, 2011,-

(i) to change the title of the Act as "The Karnataka Sakaala Services Act, 2011" as the suggestions received from the public and as decided by the committee under the Chairmanship of the Hon'ble Minister for Law and Parliamentary Affairs; and

(ii) to make provision for appointment of an officer not below the rank of Group B or C as the competent officer to impose cost by amending section 10.

Hence, the Bill.

FINANCIAL MEMORANDUM

There is no financial implication involved in the proposed Legislative measure.

JAGADISH SHETTAR
Chief Minister

P. OMPRAKASHA
Secretary
Karnataka Legislative Assembly

ANNEXURE

Extract from the Karnataka Guarantee of Services to Citizen Act, 2011

(Karnataka Act 1 of 2012)

xx xx xx

THE KARNATAKA GUARANTEE OF SERVICES TO CITIZENS ACT, 2011

(Received the assent of the Governor on the Twenty Ninth day of December, 2011)

An Act to provide for guarantee of services to citizens in the State of Karnataka within the stipulated time limit and for matters connected therewith and incidental thereto.

Whereas, it is expedient to provide for guarantee of services to citizens in the State of Karnataka within the stipulated time limit and for matters connected therewith and incidental thereto.

Be it enacted by the Karnataka State Legislature in the Sixty-Second Year of the Republic of India as follows:-

1. Short title and commencement.- (1) This Act may be called the Karnataka Guarantee of Services to Citizens Act, 2011.

Xx xx xx

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೧

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/29/Bill/2012, Bangalore, Dated: 30.7.2012

The following Bill was introduced in Legislative Assembly on 30.7.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿನಾಲ್ಕನೇ ಅಧಿವೇಶನ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 29)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು 2012ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 35) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾಗಿದೆ) 3ನೇ ಪ್ರಕರಣದ (1)ನೇ ಉಪಪ್ರಕರಣದ ನಾಲ್ಕನೇ ಪರಂತುಕದಲ್ಲಿ, (ಡಿ) ಖಂಡದಲ್ಲಿ "ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಪದಗಳಿಗೆ "ಹದಿನೈದು ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 4ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೂರನೇ ಪರಂತುಕದಲ್ಲಿ "ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಪದಗಳಿಗೆ "ಹದಿನೈದು ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. ಅನುಸೂಚಿಯ ತಿದ್ದುಪಡಿ.– ಮೂಲ ಅಧಿನಿಯಮದ ಅನುಸೂಚಿಯಲ್ಲಿ,–

(i) ಭಾಗ ಎ–8ರ ಶೀರ್ಷಿಕೆಯಲ್ಲಿ "ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಪದಗಳಿಗೆ "ಹದಿನೈದು ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಭಾಗ ಸಿ–7ರ ಶೀರ್ಷಿಕೆಯಲ್ಲಿ "10 ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಅಂಕಿಗಳು ಮತ್ತು ಪದಗಳಿಗೆ "15 ಲಕ್ಷ ರೂಪಾಯಿಗಳಿಗೆ ಮೀರಿದ" ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

5. ಉಳಿಸುವಿಕೆಗಳು.– ಹತ್ತು ಲಕ್ಷ ರೂಪಾಯಿಗಳನ್ನು ಮೀರಿದ ಆದರೆ ಹದಿನೈದು ಲಕ್ಷ ರೂಪಾಯಿಗಳನ್ನು ಮೀರದಿರುವ ಬೆಲೆಯ ಯಾವುದೇ ಮೋಟಾರು ಕ್ಯಾಬುಗಳ ಸಂಬಂಧದಲ್ಲಿ,–

(ಎ) 2012ರ ಏಪ್ರಿಲ್ 1ನೇ ದಿನಾಂಕದಿಂದ ಕರ್ನಾಟಕ ಮೋಟಾರು ವಾಹನಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2012ನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದವರೆಗೆ ಸಂದಾಯ ಮಾಡಿದ ಜೀವಾವಧಿ ತೆರಿಗೆಯು ತ್ರೈಮಾಸಿಕ ತೆರಿಗೆಯ ಸಂದಾಯಕ್ಕೆ ಒಳಪಟ್ಟು, ಮರುಸಂದಾಯಕ್ಕೆ ಅರ್ಹವಾಗಿರತಕ್ಕದ್ದು.

(ಬಿ) 2012ರ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ಬಾಕಿ ಇರುವ ಆದರೆ ಸಂದಾಯ ಮಾಡದಿರುವ ತೆರಿಗೆಯನ್ನು, ಅಂಥ ದಿನಾಂಕಕ್ಕೆ ಮೊದಲು ಜಾರಿಯಲ್ಲಿರುವ ದರಗಳಲ್ಲಿ, ದಂಡದ ಬಾಕಿಯು ಯಾವುದಾದರೂ ಇದ್ದಲ್ಲಿ, ಅದರೊಂದಿಗೆ ಸಂಗ್ರಹಿಸತಕ್ಕದ್ದು.

(ಸಿ) 2012ರ ಏಪ್ರಿಲ್ 1ನೇ ದಿನಾಂಕದ ತರುವಾಯ ಬಾಕಿ ಇರುವ ಆದರೆ ಸಂದಾಯ ಮಾಡದಿರುವ ಜೀವಾವಧಿ ತೆರಿಗೆಯನ್ನು ದಂಡದೊಂದಿಗೆ ಸಂಗ್ರಹಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮೋಟಾರು ಕ್ಯಾಬು ವಾಹನದ ಬೆಲೆಯು ಹತ್ತು ಲಕ್ಷ ರೂಪಾಯಿಗಳಿಗೆ ಮೀರಿರುವ ಸಂದರ್ಭದಲ್ಲಿ ಇಲ್ಲಿಯವರೆಗೆ ಜೀವಾವಧಿ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಹದಿನೈದು ಲಕ್ಷ ರೂಪಾಯಿಗಳಿಗೆ ಕಡಿಮೆ ಇರುವ ಬೆಲೆಯ ಮೋಟಾರು ಕ್ಯಾಬುಗಳನ್ನು ಹೊಂದಿರುವ ಮಾಲೀಕರಿಗೆ ಪರಿಹಾರವನ್ನು ನೀಡುವುದಕ್ಕಾಗಿ, ಜೀವಾವಧಿ ತೆರಿಗೆಗೆ ಬದ್ಧವಾಗುವ ವಾಹನದ ಬೆಲೆಯನ್ನು ಹತ್ತು ಲಕ್ಷ ರೂಪಾಯಿಗಳಿಂದ ಹದಿನೈದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಆರ್. ಅಶೋಕ
ಉಪ ಮುಖ್ಯಮಂತ್ರಿಗಳು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ 1957ರ
(1957ರ ಕರ್ನಾಟಕ ಅಧಿನಿಯಮ 35ರ) ಉದ್ಧೃತ ಭಾಗ

xx xx xx

3. ತೆರಿಗೆ ವಿಧಿಸುವಿಕೆ.– (1) ಅನುಸೂಚಿಯ ಭಾಗ 'ಎ'ದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ರಸ್ತೆಗಳ ಮೇಲಿನ ಉಪಯೋಗಕ್ಕಾಗಿ ಸೂಕ್ತವಾದ ಎಲ್ಲಾ ಮೋಟಾರು ವಾಹನಗಳ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದು.

xx xx xx

(ಡಿ) 10 ಲಕ್ಷ ರೂಪಾಯಿಗಳಿಗೆ ಮೀರಿದ ಬೆಲೆಯ ಮೋಟಾರು ಕ್ಯಾಬುಗಳ ಸಂದರ್ಭದಲ್ಲಿ ಅನುಸೂಚಿಯ ಭಾಗ–ಎ8 ರಲ್ಲಿ ನಿರ್ದಿಷ್ಟಪಡಿಸಿದ ದರಗಳ ಪ್ರಕಾರ ತೆರಿಗೆಯನ್ನು ವಿಧಿಸತಕ್ಕದ್ದು.

xx xx xx

4. ತೆರಿಗೆ ಸಂದಾಯ.– (1) 3ನೇ ಪ್ರಕರಣದ ಮೇರೆಗೆ ವಿಧಿಸಿದ ತೆರಿಗೆಯನ್ನು ಮೋಟಾರು ವಾಹನದ ನೋಂದಾಯಿತ ಒಡೆಯ ಅಥವಾ ಅದರ ಸ್ವಾಧೀನತೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಅವನ ಇಷ್ಟಾನುಸಾರವಾಗಿ ಕಾಲು ವರ್ಷ, ಅರ್ಧ ವರ್ಷ ಅಥವಾ ವರ್ಷಕ್ಕಾಗಿ, ಸಂದರ್ಭಾನುಸಾರ ಅಂಥ ಕಾಲು ವರ್ಷ, ಅರ್ಧ ವರ್ಷ ಅಥವಾ ವರ್ಷವು ಪ್ರಾರಂಭವಾದಂದಿನಿಂದ ಹದಿನೈದು ದಿವಸಗಳೊಳಗೆ ಮುಂಗಡವಾಗಿ ವಿಧಿಸಿದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು:

xx xx xx

ಅಲ್ಲದೆ, ಪರಂತು ಹೇರು ಭಾರವು 1500 ಕಿ.ಗ್ರಾಂ.ಗಳನ್ನು ಮೀರದ ಸರಕುಗಳ ಸಾಗಣೆಗಾಗಿ ಬಳಸಿದ ಆಟೋ ರಿಕ್ಷಾಗಳನ್ನು ಒಳಗೊಂಡಂತೆ ತ್ರಿಚಕ್ರ ವಾಹನಗಳು ಮತ್ತು ಬಾಡಿಗೆಗಾಗಿಯಾಗಲೀ ಅಥವಾ ಪ್ರತಿಫಲಕ್ಕಾಗಿಯಾಗಲೀ ಅಥವಾ ಅದಿಲ್ಲದೆಯೂ (ಚಾಲಕನನ್ನು ಹೊರತುಪಡಿಸಿ) ಮೂವರು ಪ್ರಯಾಣಿಕರನ್ನು ಸಾಗಿಸಲು ಅನುಮತಿಸಿದ ವಾಹನಗಳು, ಮೋಟಾರು ಸೈಕಲ್ಲು (ಯಂತ್ರ ಚಾಲಿತ ಮೋಟಾರು ಸ್ಕೂಟರು ಮತ್ತು ಸೈಕಲ್ಲು ಸೇರಿದಂತೆ) ಮತ್ತು ಜೀಪುಗಳನ್ನು ಒಳಗೊಂಡಂತೆ ವರ್ಗಾವಣೆಯ ಮೇಲೆ ತಮ್ಮೊಡನೆ ಕರ್ನಾಟಕ ರಾಜ್ಯಕ್ಕೆ ತಂದಿರುವ ಮತ್ತು ಅವುಗಳಿಗೆ ಇತರ ರಾಜ್ಯಗಳಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ, ಆಮ್ನಿ ಬಸ್‌ಗಳು ಮತ್ತು ಖಾಸಗಿ ಸೇವಾ ವಾಹನಗಳ ಸಂದರ್ಭದಲ್ಲಿ, ಜೀವಾವಧಿ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ತ್ರೈಮಾಸಿಕ ತೆರಿಗೆ ಅಥವಾ ವಾರ್ಷಿಕ ತೆರಿಗೆಯನ್ನು ಈಗಾಗಲೇ ಪಾವತಿಸಲಾಗಿರುವ ಮೋಟಾರು ಕಾರುಗಳು (ಕೇಂದ್ರ ಸರ್ಕಾರದ ನೌಕರರು, ರಕ್ಷಣಾ ಸಿಬ್ಬಂದಿ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳೂ ಸೇರಿದಂತೆ ಭಾರತ ಸರ್ಕಾರದ ಒಡೆತನದ ಸಾರ್ವಜನಿಕ ವಲಯ ಉದ್ಯಮಗಳ ನೌಕರರನ್ನು ಹೊರತುಪಡಿಸಿ ಮತ್ತು 1997ರ ಏಪ್ರಿಲ್ ಮೊದಲನೇ ದಿವಸಕ್ಕೆ ಮುಂಚೆ ಅಥವಾ ಸಂದರ್ಭಾನುಸಾರವಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2011ರ ಪ್ರಾರಂಭದ ದಿನಾಂಕಕ್ಕೆ ಮುಂಚೆ ಈಗಾಗಲೇ ಸಂದಾಯ ಮಾಡಿರುವ ತೆರಿಗೆಗೆ ಸಂಬಂಧಿಸಿದಂತೆ 3ನೇ ಪ್ರಕರಣದ (1)ನೇ ಉಪ ಪ್ರಕರಣದ ನಾಲ್ಕನೆಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಐದು ಚದರ ಮೀಟರುಗಳು ಮೀರದ ನೆಲ ಅಂತಸ್ತನ್ನು ಹೊಂದಿರುವ ಮತ್ತು ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಬೆಲೆಯ ಮೋಟಾರು ಕ್ಯಾಬುಗಳು 3ನೇ ಪ್ರಕರಣದ (1)ನೇ ಉಪಪ್ರಕರಣದ ಮೊದಲನೇ ಪರಂತುಕ ಅಥವಾ ಸಂದರ್ಭಾನುಸಾರವಾಗಿ ನಾಲ್ಕನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ತೆರಿಗೆಯನ್ನು, (1)ನೇ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯ ಅವಧಿಯು ಮುಕ್ತಾಯವಾದ ತರುವಾಯ ವಿಧಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಆ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

xx xx xx

"ಭಾಗ – ಎ 8

(3 (1)ನೇ ಪ್ರಕರಣವನ್ನು ನೋಡಿ)

ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಬೆಲೆಯ ಮೋಟಾರು ಕ್ಯಾಬ್‌ಗಳಿಗೆ ಜೀವಾವಧಿ ತೆರಿಗೆ

xx xx xx

"ಭಾಗ – ಸಿ 7

(7 (3)ನೇ ಪ್ರಕರಣವನ್ನು ನೋಡಿ)

10 ಲಕ್ಷ ರೂಪಾಯಿಗಳಿಗೆ ಮೀರಿದ ಬೆಲೆಯ ಮೋಟಾರು ಕ್ಯಾಬ್‌ಗಳಿಗೆ ಮರುಪಾವತಿ ಕೋಷ್ಟಕ

xx xx xx

KARNATAKA LEGISLATIVE ASSEMBLY

THIRTEENTH LEGISLATIVE ASSEMBLY

FOURTEENTH SESSION

THE KARNATAKA MOTOR VEHICLES TAXATION (SECOND AMENDMENT) BILL, 2012

(L.A. Bill No. 29 of 2012)

A Bill further to amend the Karnataka Motor Vehicles Taxation Act, 1957.

Whereas it is expedient further to amend the Karnataka Motor Vehicles Taxation Act, 1957 (Karnataka Act 35 of 1957) for the purposes hereinafter appearing;

Be it enacted by the Karnataka State Legislature in the Sixty-Third Year of the Republic of India as follows:-

1. Short title and commencement:- (1) This Act may be called the Karnataka Motor Vehicles Taxation (Second Amendment) Act, 2012

(2) It shall be deemed to have come into force with effect from 1st day of April, 2012.

2. Amendment of section 3.- In the Karnataka Motor Vehicles Taxation Act, 1957 (Karnataka Act 35 of 1957), (hereinafter referred to as the Principal Act), in section 3, in sub section (1), in the fourth proviso, in clause (d), for the words "ten lakhs", the words "fifteen lakhs" shall be substituted.

3. Amendment of section 4.- In section 4 of the principal Act, in sub-section (1), in the third proviso, for the words "Rupees ten lakhs", the words "Rupees fifteen lakhs" shall be substituted.

4. Amendment of the Schedule.- In the schedule to the principal Act,-

(i) in Part-A8, in the heading, for the words "which exceeds Rupees ten lakhs", the words "which exceeds Rupees fifteen lakhs" shall be substituted;

(ii) in Part-C7, in the heading, for the words and figures "which exceeds Rs.10 lakhs", the words "which exceeds Rupees fifteen lakhs" shall be substituted.

5. Savings.-Where in respect of any Motor Cabs the cost of which exceeds Rupees ten lakhs but does not exceed Rupees fifteen lakhs,-

(a) lifetime tax has been paid from 1st day of April, 2012 till the date of publication of the Karnataka Motor Vehicles Taxation (Second Amendment) Act, 2012 in the official Gazette shall be entitled for refund subject to the payment of quarterly tax.

(b) tax was due prior to the 1st day of April 2012, but has not been paid, such tax shall be collected at the rates prevailing prior to such day alongwith the penalty due, if any.

(c) lifetime tax was due after 1st day of April, 2012 but has not been paid such tax shall be collected alongwith the penalty.

STATEMENT OF OBJECTS AND REASONS

The lifetime tax in respect of Motor Cabs was collected where the cost of the vehicle exceeded Rupees ten lakhs. It is considered necessary to enhance the cost of the vehicle from Rupees ten lakhs to Rupees fifteen lakhs to give relief to the owners of Motor Cabs below Rupees fifteen lakhs.

Hence the Bill.

FINANCIAL MEMORANDUM

There is no extra expenditure involved in the proposed Legislative measure.

R. ASHOK
Deputy Chief Minister

P. OMPRAKASHA
Secretary
Karnataka Legislative Assembly

ANNEXURE

Extract from the Karnataka Motor Vehicles Taxation Act, 1957 (Karnataka Act 35 of 1957)

XX XX XX

3. Levy of tax.- (1) A tax at the rates specified in Part A of the Schedule shall be levied on all motor vehicles suitable for use on roads.

XX XX XX

(d) in the case of Motor Cabs the cost of which exceeds Rupees ten lakhs, tax shall be levied at the rates specified in Part-A8 of the schedule.

XX XX XX

4. Payment of tax.- (1) The tax levied under section 3 shall be paid in advance by the registered owner or person having possession or control of the motor vehicle, for a quarter, half-year or year, at his choice, within fifteen days from the commencement of such quarter, half-year, or year as the case may be:

XX XX XX

Provided also that in case of three wheelers including auto rickshaws used for transportation of goods not exceeding 1500 kgs. in weight laden and vehicles permitted to carry three passengers (excluding driver) either for hire or reward or not, motor cycle (including motor scooter and cycle with attachment for propelling the same by mechanical power) and motor cars including jeeps, (other than those owned by the Central Government Employees, Defence personnel or employees of public sector undertakings owned by Government of India including nationalised banks which are brought with them to the State of Karnataka on transfer for which lifetime tax, or tax quarterly or annually, as the case may be, has already been paid in other states or Union territories, omni buses and private service vehicles having floor area not exceeding five square meters and motor cabs the cost of which exceeds Rupees ten lakhs specified in the fourth proviso to sub-section (1) of section 3 in respect of which tax is already paid prior to the first day of April, 1997 or prior to the date of commencement of the Karnataka Motor Vehicles Taxation (Second Amendment) Act, 2011 as the case may be, the tax specified in the first proviso or in the fourth proviso to sub-section (1) of section 3 as the case may be shall be levied after the expiry of the period for which tax is paid under sub-section (1) and the tax shall be paid within one month from the date of expiry of the said period.

XX XX XX

SCHEDULE

PART 'A'

[See Section 3(1)]

XX XX XX

Part-A8

[See Section 3 (1)]

Lifetime Tax for Motor Cabs the cost of which exceeds Rupees ten lakhs

XX XX XX

Part – C7

[See Section 7 (3)]

Refund table for Motor Cabs cost of which exceeds Rs.10 lakhs

XX XX XX

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೨

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 260 ಎಂಆರ್‌ಇ 2011, ಬೆಂಗಳೂರು, ದಿನಾಂಕ : 31ನೇ ಜುಲೈ, 2012

ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೇವದುರ್ಗ ಎಂದು ಸ್ಥಾಪಿಸಲು ಹಾಗೂ ಸದರಿ ಸಮಿತಿಗಳಿಗೆ ನಾಮ ನಿರ್ದೇಶನ ಮಾಡುವ ಸಂಬಂಧ ಹೊರಡಿಸಲಾಗಿದ್ದ ಮತ್ತು ತಡೆಹಿಡಿಯಲಾಗಿದ್ದ ಈ ಕೆಳಕಂಡ ಅಧಿಸೂಚನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ :

(01) ಸಂಖ್ಯೆ: ಸಇ 260 ಎಂಆರ್‌ಇ (01) 2011 ದಿನಾಂಕ: 20/04/2012.

(02) ಸಂಖ್ಯೆ: ಸಇ 260 ಎಂಆರ್‌ಇ (02) 2011 ದಿನಾಂಕ: 20/04/2012.

(03) ಸಂಖ್ಯೆ: ಸಇ 260 ಎಂಆರ್‌ಇ (03) 2011 ದಿನಾಂಕ: 20/04/2012.

(04) ಸಂಖ್ಯೆ: ಸಇ 260 ಎಂಆರ್‌ಇ (04) 2011 ದಿನಾಂಕ: 20/04/2012.

(05) ಸಂಖ್ಯೆ: ಸಇ 260 ಎಂಆರ್‌ಇ (05) 2011 ದಿನಾಂಕ: 20/04/2012.

(06) ಸಂಖ್ಯೆ: ಸಇ 260 ಎಂಆರ್‌ಇ 2011 ದಿನಾಂಕ: 20/04/2012.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಸಹಕಾರ ಇಲಾಖೆ

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೩

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 260 ಎಂಆರ್‌ಇ (01) 2011, ಬೆಂಗಳೂರು, ದಿನಾಂಕ : 31ನೇ ಜುಲೈ, 2012

ಸರ್ಕಾರವು ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ 209 ಎಂಆರ್‌ಇ 1996 (1) ದಿನಾಂಕ: 25/10/2000 ರ ಮೂಲಕ ಅಧಿಸೂಚಿತ ಕೃಷಿ ಉತ್ಪನ್ನಗಳ ಪರಿಣಾಮಕಾರಿ ಮಾರಾಟಕ್ಕಾಗಿ ರಾಯಚೂರು ಮತ್ತು ದೇವದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮಾರುಕಟ್ಟೆ ಕ್ಷೇತ್ರಗಳನ್ನು ಸಂಯೋಜಿಸಿ ರಾಯಚೂರು ಮಾರುಕಟ್ಟೆ ಕ್ಷೇತ್ರವೆಂದು ಮತ್ತು ಸಂಯೋಜಿತ ಮಾರುಕಟ್ಟೆ ಸಮಿತಿಯನ್ನು ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಎಂದು ಘೋಷಿಸಿದೆ.

ಪ್ರಸ್ತುತ ರಾಯಚೂರು ಮಾರುಕಟ್ಟೆ ಕ್ಷೇತ್ರದಲ್ಲಿನ ಅಧಿಸೂಚಿತ ಕೃಷಿ ಉತ್ಪನ್ನಗಳ ಪರಿಣಾಮಕಾರಿ ಮಾರಾಟ ನಿಯಂತ್ರಣಕ್ಕಾಗಿ ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ ದೇವದುರ್ಗ ತಾಲ್ಲೂಕಿಗೆ ಪ್ರತ್ಯೇಕ ಮಾರುಕಟ್ಟೆ ಕ್ಷೇತ್ರ ರಚಿಸುವ ಉದ್ದೇಶವನ್ನು ದಿನಾಂಕ: 09/01/2012 ರ ಅಧಿಸೂಚನೆ ಸಂಖ್ಯೆ: ಸಇ 260 ಎಂಆರ್‌ಇ 2011 ನ್ನು ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆಯಲ್ಲಿ ದಿನಾಂಕ: 09/01/2012 ರಲ್ಲಿ ಮತ್ತು ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ದಿನಾಂಕ: 14/01/2012 ರಲ್ಲಿ ಪ್ರಕಟಿಸಿ ಅಧಿಸೂಚನೆಯಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಅಧಿಸೂಚನೆಯಲ್ಲಿ ನಿಗಧಿಪಡಿಸಿದ ದಿನದೊಳಗೆ ಸ್ವೀಕೃತವಾಗಿರುವ ಆಕ್ಷೇಪಣೆ / ಸಲಹೆಗಳನ್ನು ಪರಿಶೀಲಿಸಿದ್ದು, ದೇವದುರ್ಗ ತಾಲ್ಲೂಕಿಗೆ ಸ್ವತಂತ್ರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸ್ಥಾಪಿಸುವುದು ಅಗತ್ಯವೆಂದು ಮನಗಂಡು ಆಕ್ಷೇಪಣೆ / ಸಲಹೆಗಳನ್ನು ತಳ್ಳಿಹಾಕಿದೆ.

ಆದ್ದರಿಂದ, ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರವನ್ನು ವಿಭಜಿಸಿ ದೇವದುರ್ಗ ತಾಲ್ಲೂಕಿಗೆ ಪ್ರತ್ಯೇಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸ್ಥಾಪಿಸಲು ಸರ್ಕಾರ ತೀರ್ಮಾನಿಸಿದೆ.

ಆದ್ದರಿಂದ, **ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ರ ಕಲಂ 3 ಮತ್ತು 145 (1) ರಲ್ಲಿ** ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಾಯಚೂರು ಮತ್ತು ದೇವದುರ್ಗ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರವನ್ನು ಈ ಕೆಳಗಿನ ಅನುಸೂಚಿ 4ನೇ ಅಂಕಣದಲ್ಲಿ ನಮೂದಿಸಿದ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ 3ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಮಾರುಕಟ್ಟೆ ಕ್ಷೇತ್ರದ ಪರಿಮಿತಿಯನ್ನೊಳಗೊಂಡಂತೆ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರತ್ಯೇಕ ಮಾರುಕಟ್ಟೆ ಕ್ಷೇತ್ರಗಳನ್ನಾಗಿ ವಿಭಜಿಸಿದೆ :

ಕ್ರ ಸಂ.	ಮಾರುಕಟ್ಟೆ ಕ್ಷೇತ್ರ	ಮಾರುಕಟ್ಟೆ ಕ್ಷೇತ್ರದ ಪರಿಮಿತಿ	ಕೃಷಿ ಉತ್ಪನ್ನಗಳು
01	**02**	**03**	**04**
01	ರಾಯಚೂರು	ರಾಯಚೂರು ತಾಲ್ಲೂಕು	1.ಜಾನುವಾರುಗಳು, 2. ಮೇಕೆಗಳು, 3.ಕುರಿಗಳು, 4.ಹತ್ತಿ (ಬೀಜ ತೆಗೆದ ಮತ್ತು ತೆಗೆಯದ), 5. ಎಲ್ಲಾ ಹೂ.ಗಳು, 6.ಸಜ್ಜೆ, 7.ಜವೆ ಗೋಧಿ, 8.ಜೋಳ, 9.ಕಂಬು, 10.ಮೆಕ್ಕೆಜೋಳ, 11.ನವಣೆ, 12.ಭತ್ತ, 13.ರಾಗಿ, 14.ಅಕ್ಕಿ 15.ಸಾಮೆ (ಸಾವೆ), 16.ಗೋಧಿ, 17.ಅಂಟುವಾಳ, 18.ಬೊಂಬು, 19.ಬೆತ್ತ, 20.ಹಿಪ್ಪೆಬೀಜ, 21.ಹೊಂಗೇಬೀಜ, 22.ಬೇವಿನಬೀಜ, 23.ಸೀಗೇಕಾಯಿ, 24.ಹುಣಸೇಹಣ್ಣು, 25.ಹುಣಸೇಬೀಜ, 26.ಸೇಬು, 27.ಬಾಳೆಹಣ್ಣು, 28.ಬೋರೆಹಣ್ಣು, 29.ಹುಳಿಹಣ್ಣುಗಳು, 30.ಚಕ್ಕೋತನ ಹಣ್ಣು, 31.ಪೇರಲೆಹಣ್ಣು (ಸೀಬೆಹಣ್ಣು), 32.ದ್ರಾಕ್ಷಿ, 33.ಹಲಸಿನಹಣ್ಣು, 34.ಜಂಬುನೇರಳೆಹಣ್ಣು, 35.ನಿಂಬೆಹಣ್ಣು, 36.ಕರಬೂಜ, 37.ಮಾವಿನಹಣ್ಣು, 38.ಮೂಸಂಬಿ, 39.ಮರಸೇಬು, 40.ಪೈನಾಪಲ್ (ಅನಾನಸ್), 41.ಪಪ್ಪಾಯಿಹಣ್ಣು (ಪರಂಗಿಹಣ್ಣು), 42.ದಾಳಿಂಬೆಹಣ್ಣು, 43.ಸಪೋಟಾ, 44.ಸಿದ್ಧೋಟ, 45.ಕಿತ್ತಳೆ, 46.ಕಲ್ಲಂಗಡಿ, 47.ನೆಲಗಡಲೆ(ಶೇಂಗಾ) (ಕಾಯಿ ಮತ್ತು ಬೀಜ), 48.ಹರಳುಬೀಜ, 49.ಹತ್ತಿಬೀಜ, 50.ಅಗಸೆಬೀಜ, 51.ಸಾಸುವೆ, 52.ಹುಚ್ಚೆಳ್ಳು, 53.ಕುಸುಬೆ, 54.ಎಳ್ಳು, 55.ಸೂರ್ಯಕಾಂತಿಬೀಜ, 56.ಸೋಯಾಬಿನ್, 57.ಅಡಿಕೆ, 58.ಗೋಡಂಬಿಬೀಜ, 59.ಒಣಮೆಣಸಿನಕಾಯಿ, 60.ತೆಂಗಿನಕಾಯಿ, 61.ಕೊಬ್ಬರಿ, 62.ಕೊತ್ತಂಬರಿಬೀಜ (ಧನಿಯಾ), 63.ಬೆಳ್ಳುಳ್ಳಿ, 64.ಶುಂಠಿ, 65.ಮೆಂತ್ಯ, 66.ಕಾಳುಮೆಣಸು, 67.ಅರಿಶಿನ, 68.ಅಲಸಂದೆ(ಇಡೀ ಮತ್ತು ಒಡೆದ), 69.ಅವರೆ (ಇಡೀ ಮತ್ತು ಒಡೆದ), 70.ಕಡಲೆ (ಇಡೀ ಮತ್ತು ಒಡೆದ), 71.ಉದ್ದು (ಇಡೀ ಮತ್ತು ಒಡೆದ), 72.ಬುಲ್ಲರ್ (ಇಡೀ ಮತ್ತು ಒಡೆದ), 73.ಹೆಸರು (ಇಡೀ ಮತ್ತು ಒಡೆದ), 74.ಹುರುಳಿ, 75.ಲಾಕ್ (ಇಡೀ ಮತ್ತು ಒಡೆದ), 76.ಮಡಿಕೆ (ಮಟಕಿ) (ಇಡೀ ಮತ್ತು ಒಡೆದ), 77.ಚೆನ್ನಂಗಿ (ಮಸೂರಿ) (ಇಡೀ ಮತ್ತು ಒಡೆದ), 78.ಬಟಾಣಿ, 79.ತೊಗರಿ (ಇಡೀ ಮತ್ತು ಒಡೆದ), 80.ಮೋತ್ (ಇಡೀ ಮತ್ತು ಒಡೆದ), 81.ಎಲ್ಲಾ ತರಕಾರಿಗಳು

ಕ್ರ ಸಂ.	ಮಾರುಕಟ್ಟೆ ಕ್ಷೇತ್ರ	ಮಾರುಕಟ್ಟೆ ಕ್ಷೇತ್ರದ ಪರಿಮಿತಿ	ಕೃಷಿ ಉತ್ಪನ್ನಗಳು
01	02	03	04
			(ಸೊಪ್ಪುಗಳು ಸೇರಿಸಿ)(ಗರ್ಕಿನ್ ಹೊರತುಪಡಿಸಿ), 82.ಕಾಯಿಗಳು, 83.ಹಸಿರು ಮೆಣಸಿನಕಾಯಿ, 84.ಈರುಳ್ಳಿ, 85.ಆಲೂಗಡ್ಡೆ, 86.ಸುವರ್ಣಗೆಡ್ಡೆ, 87.ಸಿಹಿಗೆಣಸು (ಗೆಣಸು), 88.ಟೊಮ್ಯಾಟೋ, 89.ವೀಳ್ಯೆದೆಲೆ, 90.ಬೆಲ್ಲ, 91.ತೆಂಗಿನಕಡ್ಡಿ, 92.ಒಣದ್ರಾಕ್ಷಿ.
02	ದೇವದುರ್ಗ	ದೇವದುರ್ಗ ತಾಲ್ಲೂಕು	1.ಜಾನುವಾರುಗಳು, 2. ಮೇಕೆಗಳು, 3.ಕುರಿಗಳು, 4.ಹತ್ತಿ (ಬೀಜ ತೆಗೆದ ಮತ್ತು ತೆಗೆಯದ), 5. ಎಲ್ಲಾ ಹೂ.ಗಳು, 6.ಸಜ್ಜೆ, 7.ಜವೆ ಗೋಧಿ, 8.ಜೋಳ, 9.ಕಂಬು, 10.ಮೆಕ್ಕೆಜೋಳ, 11.ನವಣೆ, 12.ಭತ್ತ, 13.ರಾಗಿ, 14.ಅಕ್ಕಿ 15.ಸಾಮೆ (ಸಾವೆ), 16.ಗೋಧಿ, 17.ಅಂಟುವಾಳ, 18.ಬೊಂಬು, 19.ಬೆತ್ತ, 20.ಹಿಪ್ಪೆಬೀಜ, 21.ಹೊಂಗೇಬೀಜ, 22.ಬೇವಿನಬೀಜ, 23.ಸೀಗೇಕಾಯಿ, 24.ಹುಣಸೇಹಣ್ಣು, 25.ಹುಣಸೇಬೀಜ, 26.ಸೇಬು, 27.ಬಾಳೆಹಣ್ಣು, 28.ಬೋರೆಹಣ್ಣು, 29.ಹುಳಿಹಣ್ಣುಗಳು, 30.ಚಕ್ಕೋತನ ಹಣ್ಣು, 31.ಪೇರಲೆಹಣ್ಣು (ಸೀಬೆಹಣ್ಣು), 32.ದ್ರಾಕ್ಷಿ, 33.ಹಲಸಿನಹಣ್ಣು, 34.ಜಂಬುನೇರಳೆಹಣ್ಣು, 35.ನಿಂಬೆಹಣ್ಣು, 36.ಕರಬೂಜ, 37.ಮಾವಿನಹಣ್ಣು, 38.ಮೂಸಂಬಿ, 39.ಮರಸೇಬು, 40.ಪೈನಾಪಲ್ (ಅನಾನಸ್), 41.ಪಪ್ಪಾಯಿಹಣ್ಣು (ಪರಂಗಿಹಣ್ಣು), 42.ದಾಳಿಂಬೆಹಣ್ಣು, 43.ಸಪೋಟಾ, 44.ಸಿದ್ದೋಟ, 45.ಕಿತ್ತಳೆ, 46.ಕಲ್ಲಂಗಡಿ, 47.ನೆಲಗಡಲೆ(ಶೇಂಗಾ) (ಕಾಯಿ ಮತ್ತು ಬೀಜ), 48.ಹರಳುಬೀಜ, 49.ಹತ್ತಿಬೀಜ, 50.ಅಗಸೆಬೀಜ, 51.ಸಾಸುವೆ, 52.ಹುಚ್ಚೆಳ್ಳು, 53.ಕುಸುಬೆ, 54.ಎಳ್ಳು, 55.ಸೂರ್ಯಕಾಂತಿಬೀಜ, 56.ಸೋಯಾಬಿನ್, 57.ಅಡಿಕೆ, 58.ಗೋಡಂಬಿಬೀಜ, 59.ಒಣಮೆಣಸಿನ ಕಾಯಿ, 60.ತೆಂಗಿನಕಾಯಿ, 61.ಕೊಬ್ಬರಿ, 62.ಕೊತ್ತಂಬರಿಬೀಜ (ಧನಿಯಾ), 63.ಬೆಳ್ಳುಳ್ಳಿ, 64.ಶುಂಠಿ, 65.ಮೆಂತ್ಯ, 66.ಕಾಳುಮೆಣಸು, 67.ಅರಿಶಿನ, 68.ಅಲಸಂದೆ(ಇಡೀ ಮತ್ತು ಒಡೆದ), 69.ಅವರೆ (ಇಡೀ ಮತ್ತು ಒಡೆದ), 70.ಕಡಲೆ (ಇಡೀ ಮತ್ತು ಒಡೆದ), 71.ಉದ್ದು (ಇಡೀ ಮತ್ತು ಒಡೆದ), 72.ಬುಲ್ಲರ್ (ಇಡೀ ಮತ್ತು ಒಡೆದ), 73.ಹೆಸರು (ಇಡೀ ಮತ್ತು ಒಡೆದ), 74.ಹುರುಳಿ, 75.ಲಾಕ್ (ಇಡೀ ಮತ್ತು ಒಡೆದ), 76.ಮಡಿಕೆ (ಮಟಕಿ) (ಇಡೀ ಮತ್ತು ಒಡೆದ), 77.ಚೆನ್ನಂಗಿ (ಮಸೂರಿ) (ಇಡೀ ಮತ್ತು ಒಡೆದ), 78.ಬಟಾಣಿ, 79.ತೊಗರಿ (ಇಡೀ ಮತ್ತು ಒಡೆದ), 80.ಮೋತ್ (ಇಡೀ ಮತ್ತು ಒಡೆದ), 81.ಎಲ್ಲಾ ತರಕಾರಿಗಳು (ಸೊಪ್ಪುಗಳು ಸೇರಿಸಿ) (ಗರ್ಕಿನ್ ಹೊರತುಪಡಿಸಿ), 82.ಕಾಯಿಗಳು, 83.ಹಸಿರುಮೆಣಸಿನಕಾಯಿ, 84.ಈರುಳ್ಳಿ, 85.ಆಲೂಗಡ್ಡೆ, 86.ಸುವರ್ಣಗೆಡ್ಡೆ, 87.ಸಿಹಿಗೆಣಸು (ಗೆಣಸು), 88.ಟೊಮ್ಯಾಟೋ, 89.ವೀಳ್ಯೆದೆಲೆ, 90.ಬೆಲ್ಲ, 91.ತೆಂಗಿನಕಡ್ಡಿ, 92.ಒಣದ್ರಾಕ್ಷಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ-1

ಸಹಕಾರ ಇಲಾಖೆ

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೪

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 260 ಎಂಆರ್ಇ (02) 2011, ಬೆಂಗಳೂರು, ದಿನಾಂಕ : 31ನೇ ಜುಲೈ, 2012

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 9(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಅಧಿಸೂಚನೆ ಸಂಖ್ಯೆ: ಸಇ 260 ಎಂಆರ್ಇ (01) 2011 ದಿನಾಂಕ: 31/07/2012 ರಲ್ಲಿ ಸ್ಥಾಪಿಸಲಾಗಿರುವ ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಎಂದು ಕರ್ನಾಟಕ ಸರ್ಕಾರವು ಈ ಮೂಲಕ ನಿರ್ಧಿಷ್ಟಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಸಹಕಾರ ಇಲಾಖೆ

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೫

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 260 ಎಂಆರ್ಇ (03) 2011, ಬೆಂಗಳೂರು, ದಿನಾಂಕ : 31ನೇ ಜುಲೈ, 2012

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 9(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಅಧಿಸೂಚನೆ ಸಂಖ್ಯೆ: ಸಇ 260 ಎಂಆರ್ಇ (01) 2011 ದಿನಾಂಕ: 31/07/2012 ರಲ್ಲಿ ಸ್ಥಾಪಿಸಲಾಗಿರುವ **ದೇವದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ** ಎಂದು ಕರ್ನಾಟಕ ಸರ್ಕಾರವು ಈ ಮೂಲಕ ನಿರ್ಧಿಷ್ಠ ಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಸಹಕಾರ ಇಲಾಖೆ

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೬

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 260 ಎಂಆರ್‌ಇ (04) 2011, ಬೆಂಗಳೂರು, ದಿನಾಂಕ : 31ನೇ ಜುಲೈ, 2012

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 10(1) ಮತ್ತು 10(4)(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಇ 260 ಎಂಆರ್‌ಇ 2011 ದಿನಾಂಕ: 31/07/2012 ರಲ್ಲಿ ಸ್ಥಾಪಿಸಲಾಗಿರುವ ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಈ ಕೆಳಕಂಡವರನ್ನು ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ :

ಕ್ರ. ಸಂ.	ಹೆಸರು ಮತ್ತು ವಿಳಾಸ ಶ್ರೀಯುತರು / ಶ್ರೀಮತಿ	
01	ಆರ್. ತಿಮ್ಮಯ್ಯ ಗುತ್ತೇದಾರ್, ರಾಜ್ಯ ಉಪಾಧ್ಯಕ್ಷರು, ದಲಿತ ಮೋರ್ಚಾ, ಭಾರತೀಯ ಜನತಾ ಪಾರ್ಟಿ, **ಬೆಂಗಳೂರು.** 12–10–80, ರವಿ ನಿಲಯ, ಸಿಯಾತಲಾಬ, **ರಾಯಚೂರು.**	ಸದಸ್ಯರು
02	ಬಾಬುರಾವ್ ತಂದೆ ಸಾಯಿಬಣ್ಣ, ಮನೆ ನಂ.1–8–75, ಸ್ಟೇಷನ್ ರಸ್ತೆ, **ರಾಯಚೂರು.**	ಸದಸ್ಯರು
03	ಬಂಗಿ ನರಸರೆಡ್ಡಿ ತಂದೆ ಅಡಿವೆಪ್ಪ, ಮಕ್ತಲ್‌ಪೇಟೆ, **ರಾಯಚೂರು.**	ಸದಸ್ಯರು
04	ಬಿ. ಮಲ್ಲಿಕಾರ್ಜುನ ತಂದೆ ಬಿ. ವೀರಣ್ಣ, ಸಾ॥ ಉಡಮಗಲ್ ಖಾನಾಪೂರ, ರಾಯಚೂರು ತಾಲ್ಲೂಕು, **ರಾಯಚೂರು ಜಿಲ್ಲೆ.**	ಸದಸ್ಯರು
05	ಶರಣಮ್ಮ ಕೋಂ. ಗೂಳಪ್ಪಗೌಡ, ಸಾ॥ ಜೇಗರಕಲ್, ರಾಯಚೂರು ತಾಲ್ಲೂಕು, **ರಾಯಚೂರು ಜಿಲ್ಲೆ.**	ಸದಸ್ಯರು
06	ಜಿ. ಮಹದೇವ ನಾಯ್ಕ ತಂದೆ ರಂಗಣ್ಣ ನಾಯ್ಕ, ಸಾ॥ ಮಂಜರ್ಲಾ, **ರಾಚಯೂರು ತಾಲ್ಲೂಕು,** **ರಾಯಚೂರು ಜಿಲ್ಲೆ,**	ಸದಸ್ಯರು
07	ಸಿದ್ದಲಿಂಗಯ್ಯ ಸ್ವಾಮಿ ತಂದೆ ವೀರಭದ್ರಯ್ಯ, ಸಾ॥ ರಘುನಾಥನಹಳ್ಳಿ, ಸುಲ್ತಾನಪುರ ಅಂಚೆ, ರಾಯಚೂರು ತಾಲ್ಲೂಕು, **ರಾಯಚೂರು ಜಿಲ್ಲೆ.**	ಸದಸ್ಯರು
08	ಸುರೇಂದ್ರ ದೋಖಾ ತಂದೆ ಮದನ್‌ಲಾಲ್, ಕು. ರತನ್‌ಲಾಲ್ & ಕಂಪನಿ, ಅಂ.ಸಂ.5, ಪ್ಲಾಟ್ ಸಂ.7, ರಾಜೇಂದ್ರ ಗಂಜ್, **ರಾಯಚೂರು.**	ಸದಸ್ಯರು

ಕ್ರ. ಸಂ.	ಹೆಸರು ಮತ್ತು ವಿಳಾಸ ಶ್ರೀಯುತರು / ಶ್ರೀಮತಿ	
09	ಚನ್ನಪ್ಪ ಹರಿಜನ ತಂದೆ ತಿಪ್ಪಯ್ಯ, ಹರಿಜನವಾಡ, ಗದ್ವಾಲ್ ರಸ್ತೆ, **ರಾಯಚೂರು.**	ಸದಸ್ಯರು
10	ಮಲ್ಲಪ್ಪ ತಂದೆ ನರಸರೆಡ್ಡಿ (ವರಪ್ರಸಾದ ರೆಡ್ಡಿ), **ಸಾ॥ ತಲಮಾರಿ.**	ಸದಸ್ಯರು
11	ನಾರಾಯಣ ರಾವ್ ಕುಲಕರ್ಣಿ, **ಸಾ॥ ಪೂರತಿಪ್ಪಿ.**	ಸದಸ್ಯರು
12	ಬಿ.ಎಸ್. ಸುರಗಿಮಠ ತಂದೆ ಶರಣಯ್ಯ, ಮನೆ ನಂ.8–11–36, ನೀಲಕಂಠೇಶ್ವರ ನಗರ, **ರಾಯಚೂರು.**	ಸದಸ್ಯರು **(ಸಹಕಾರ ಸಂಸ್ಕರಣ ಘಟಕದ** ಪ್ರತಿನಿಧಿ)

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 10(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ನಾಮ ನಿರ್ದೇಶನಗೊಂಡಿರುವ ಸದಸ್ಯರುಗಳ ಪೈಕಿ "**ಶ್ರೀ ಆರ್. ತಿಮ್ಮಯ್ಯ ಗುತ್ತೇದಾರ್, ರಾಜ್ಯ ಉಪಾಧ್ಯಕ್ಷರು, ದಲಿತ ಮೋರ್ಚಾ, ಭಾರತೀಯ ಜನತಾ ಪಾರ್ಟಿ, ಬೆಂಗಳೂರು. 12–10–80, ರವಿ ನಿಲಯ, ಸಿಯಾತಲಾಬ, ರಾಯಚೂರು**" ಇವರನ್ನು "**ಅಧ್ಯಕ್ಷರನ್ನಾಗಿ**" ಮತ್ತು "**ಶ್ರೀ ಬಾಬುರಾವ್ ತಂದೆ ಸಾಯಿಬಣ್ಣ, ಮನೆ ನಂ.1–8–75, ಸ್ಟೇಷನ್ ರಸ್ತೆ, ರಾಯಚೂರು** ಇವರನ್ನು "**ಉಪಾಧ್ಯಕ್ಷರನ್ನಾಗಿ**" ನೇಮಿಸಲಾಗಿದೆ. **ಕಾಯ್ದೆಯ ಕಲಂ 42 ರನ್ವಯ** ಇವರುಗಳ ಅಧಿಕಾರವಧಿಯು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ **20 ತಿಂಗಳ ವರೆಗೆ** ಅಥವಾ ಸಮಿತಿಯ ಕಾಲಾವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಸಹಕಾರ ಇಲಾಖೆ

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೨ (ಶ್ರಾವಣ ೯, ಶಕ ವರ್ಷ ೧೯೩೪)	ನಂ. ೫೪೭

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 260 ಎಂಆರ್‌ಇ (05) 2011, ಬೆಂಗಳೂರು, ದಿನಾಂಕ : 31ನೇ ಜುಲೈ, 2012

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 9(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಅಧಿಸೂಚನೆ ಸಂಖ್ಯೆ: ಸಇ 260 ಎಂಆರ್‌ಇ (01) 2011 ದಿನಾಂಕ: 31/07/2012 ರಲ್ಲಿ ಸ್ಥಾಪಿಸಲಾಗಿರುವ **ದೇವದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸ್ಥಾಪಿಸುವ ಕುರಿತು** ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ **ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು** ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಸಹಕಾರ ಇಲಾಖೆ

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಬುಧವಾರ, ಆಗಸ್ಟ್ ೧, ೨೦೧೨ (ಶ್ರಾವಣ ೧೦, ಶಕ ವರ್ಷ ೧೯೩೪)	ನಂ. ೫೪೮

FINANCE SECRETARIAT

NOTIFICATION

No. FD 135 CSL 2012, Bangalore, Dated: 1.8.2012

In exercise of the powers conferred by sub-section (1) of Section 5 of the Karnataka Value Added Tax Act, 2003 (Karnataka Act 32 of 2004), the Government of Karnataka hereby exempts, with immediate effect the tax payable by a dealer under the said Act on the sale of HDPE monofilament woven fabrics.

By Order and in the name of the Governor of Karnataka,

D.R. SHASHIDHAR
Under Secretary to Government
Finance Department (C.T.-1)

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಬುಧವಾರ, ಆಗಸ್ಟ್ ೧, ೨೦೧೨ (ಶ್ರಾವಣ ೧೦, ಶಕ ವರ್ಷ ೧೯೩೪)	ನಂ. ೫೪೯

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಪ:ಶಾರಶಾ:ವಿಪವಿ:1:2012, ಬೆಂಗಳೂರು, ದಿನಾಂಕ: 31ನೇ ಜುಲೈ, 2012

ಈ ಮುಂದಿನ ವಿಧೇಯಕಗಳನ್ನು ವಿಧಾನ ಪರಿಷತ್ತಿನಲ್ಲಿ ದಿನಾಂಕ: 31ನೇ ಜುಲೈ, 2012 ರಂದು ಮಂಡಿಸಲಾಯಿತು.

ಕರ್ನಾಟಕ ವಿಧಾನ ಪರಿಷತ್ತು

ನೂರ ಹತ್ತೊಂಬತ್ತನೇ ಅಧಿವೇಶನ

(ಮುಂದುವರೆದ ಉಪವೇಶನ)

ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ, 2012

(2012ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 01)

ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಪೊಲೀಸು (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು 2012ರ ಜೂನ್ 2ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 6ನೇ ಪ್ರಕರಣದ ಪ್ರತಿಯೋಜನೆ.– ಕರ್ನಾಟಕ ಪೊಲೀಸು ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ 4) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 6ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

“6. ಪೊಲೀಸು ಮಹಾ ನಿರ್ದೇಶಕ ಮತ್ತು ಮಹಾನಿರೀಕ್ಷಕ.– (1) ಪೊಲೀಸು ಸೇವೆಯ ನಿರ್ದೇಶನಕ್ಕಾಗಿ, ನಿಯಂತ್ರಣಕ್ಕಾಗಿ ಮತ್ತು ಮೇಲ್ವಿಚಾರಣೆಗಾಗಿ ಒಬ್ಬ ಪೊಲೀಸು ಮಹಾ ನಿರ್ದೇಶಕ ಮತ್ತು ಮಹಾನಿರೀಕ್ಷಕನನ್ನು ಸರ್ಕಾರವು ನೇಮಕ ಮಾಡತಕ್ಕದ್ದು, ಅವನು ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಉಪಬಂಧಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಹಾಗೂ ಅಂಥ ಜವಾಬ್ದಾರಿಗಳನ್ನು ಮತ್ತು ಅಂಥ ಪ್ರಾಧಿಕಾರವನ್ನು ಹೊಂದಿರತಕ್ಕದ್ದು.

(2) ಪೊಲೀಸು ಮಹಾನಿರ್ದೇಶಕ ಮತ್ತು ಮಹಾನಿರೀಕ್ಷಕರನ್ನು ರಾಜ್ಯ ಸರ್ಕಾರವು, ಭಾರತೀಯ ಪೊಲೀಸು ಸೇವೆಯ ಪೊಲೀಸು ಮಹಾ ನಿರ್ದೇಶಕರ ದರ್ಜೆಯ ಅಧಿಕಾರಿಗಳ ಸೇವಾವಧಿ, ಅತ್ಯುತ್ತಮ ಸೇವಾ ಪೂರ್ವ ವೃತ್ತಾಂತ, ವೃತ್ತಿ ನೈಪುಣ್ಯತೆ ಮತ್ತು ರಾಜ್ಯದಲ್ಲಿ ಪೊಲೀಸ್ ದಳವನ್ನು ಮುನ್ನಡೆಸುವ ಸಾಮರ್ಥ್ಯ ಇವುಗಳ ಆಧಾರದ ಮೇಲೆ ಆ ದರ್ಜೆಗೆ ಬಡ್ತಿ ನೀಡಲು ಪಟ್ಟಿಯಲ್ಲಿ ಸೇರಿಸಲಾಗಿರುವಂಥ ಅಧಿಕಾರಿಗಳ ಪೈಕಿಯಿಂದ ಆಯ್ಕೆ ಮಾಡತಕ್ಕದ್ದು.

(3) ಹಾಗೆ ನೇಮಕಗೊಂಡ ಪೊಲೀಸು ಮಹಾ ನಿರ್ದೇಶಕರು ಮತ್ತು ಮಹಾನಿರೀಕ್ಷಕರು ವಯೋನಿವೃತ್ತಿಗೊಳಪಟ್ಟು ಎರಡು ವರ್ಷಗಳಿಗೆ ಕಡಿಮೆಯಲ್ಲದ ಅಧಿಕಾರಾವಧಿಯನ್ನು ಹೊಂದಿರತಕ್ಕದ್ದು:

ಪರಂತು, ಅವನು,–

(ಎ) ಕ್ರಿಮಿನಲ್ ಮೊಕದ್ದಮೆಯಲ್ಲಿ ನ್ಯಾಯಾಲಯದಿಂದ ನಿರ್ಣೀತ ಅಪರಾಧಿಯಾಗಿದ್ದರೆ ಅಥವಾ ಭ್ರಷ್ಟಾಚಾರವನ್ನು ಅಥವಾ ನೈತಿಕ ಅಧ:ಪತನಕ್ಕೆ ಎಡೆ ಮಾಡಿಕೊಡುವ ಅಪರಾಧಗಳನ್ನು ಒಳಗೊಂಡ ಮೊಕದ್ದಮೆಯಲ್ಲಿ ನ್ಯಾಯಾಲಯವು ಅವನ ವಿರುದ್ಧ ಆರೋಪಗಳನ್ನು ಮಾಡಲಾಗಿದ್ದರೆ; ಅಥವಾ

(ಬಿ) ಪೊಲೀಸು ಮಹಾ ನಿರ್ದೇಶಕ ಮತ್ತು ಮಹಾನಿರೀಕ್ಷಕನಾಗಿ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಸಾಧ್ಯವಾಗದಿರುವಂಥ ದೈಹಿಕ ಅಥವಾ ಮಾನಸಿಕ ಖಾಯಿಲೆಯಿಂದಾಗಿ ಅಸಮರ್ಥನಾಗಿದ್ದರೆ; ಅಥವಾ

(ಸಿ) ಆತನ ಒಪ್ಪಿಗೆಯೊಂದಿಗೆ ಇನ್ನೊಂದು ಹುದ್ದೆಗೆ ನೇಮಕವಾಗಿದ್ದರೆ; ಅಥವಾ

(ಡಿ) ಅಖಿಲ ಭಾರತ ಸೇವೆಗಳು (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳು, 1969ರ ಅಥವಾ ಸಂಬಂಧಿತ ಇತರ ಯಾವುವೇ ನಿಯಮಗಳ ಉಪಬಂಧಗಳ ಅಡಿಯಲ್ಲಿ ವಜಾ ಮಾಡಲಾಗುವ, ತೆಗೆದು ಹಾಕಲಾಗುವ ಅಥವಾ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗುವ ಅಥವಾ ಕೆಳಗಿನ ಹುದ್ದೆಗೆ ಇಳಿಸಲಾಗುವ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಇ) ಸೇವೆಯಿಂದ ಅಮಾನತ್ತಿಗೊಳಗಾಗಿದ್ದರೆ; ಅಥವಾ

(ಎಫ್) ಪ್ರಾರಂಭಿಕ ವಿಚಾರಣೆ ತರುವಾಯ, ಮೇಲ್ನೋಟಕ್ಕೆ ದುರ್ನಡತೆಯ ಅಥವಾ ತೀವ್ರ ನಿರ್ಲಕ್ಷ್ಯದ ಪ್ರಕರಣವೆಂದು ರುಜುವಾತುಪಡಿಸಲಾಗಿದ್ದರೆ,

–ಸರ್ಕಾರವು, ಪೊಲೀಸು ಮಹಾ ನಿರ್ದೇಶಕ ಮತ್ತು ಮಹಾನಿರೀಕ್ಷಕನಾಗಿ ಎರಡು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸುವುದಕ್ಕೆ ಮೊದಲೇ, ಆತನನ್ನು ವರ್ಗಾವಣೆ ಮಾಡಬಹುದು.

(4) ಪೊಲೀಸು ಮಹಾ ನಿರ್ದೇಶಕ ಮತ್ತು ಮಹಾನಿರೀಕ್ಷಕರು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಚಲಾಯಿಸತಕ್ಕ ಅಧಿಕಾರಗಳನ್ನು ಮತ್ತು ನಿರ್ವಹಿಸತಕ್ಕ ಪ್ರಕಾರ್ಯಗಳನ್ನು, ಸರ್ಕಾರವು, ಅಧಿಸೂಚನೆಯ ಮೂಲಕ ತಾನು ಅವಶ್ಯಕವೆಂದು ಭಾವಿಸುವ ಅಂಥ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು ಅಥವಾ ಅಂಥ ನಿರ್ದೇಶನಗಳನ್ನು ನೀಡಬಹುದು.”

3. II ಎ ಹೊಸ ಅಧ್ಯಾಯದ ಸೇರ್ಪಡೆ.– ಮೂಲ ಅಧಿನಿಯಮದಲ್ಲಿ ಅಧ್ಯಾಯ II ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನ ಹೊಸ ಅಧ್ಯಾಯವನ್ನು ಸೇರಿಸತಕ್ಕದ್ದು, ಎಂದರೆ:–

“ಅಧ್ಯಾಯ IIಎ

ರಾಜ್ಯ ಭದ್ರತಾ ಆಯೋಗ, ಪೊಲೀಸು ಸಿಬ್ಬಂದಿ ಮಂಡಳಿ, ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರ ಮತ್ತು ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಗಳ ಸ್ಥಾಪನೆ.

20ಎ. ರಾಜ್ಯ ಭದ್ರತಾ ಆಯೋಗ.– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೂಲಕ ಮತ್ತು ಅದರ ಅಡಿಯಲ್ಲಿ ಆಯೋಗಕ್ಕೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ಚಲಾಯಿಸುವ ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ರಾಜ್ಯ ಭದ್ರತಾ ಆಯೋಗ ಎಂದು ಕರೆಯಲಾಗುವ ಒಂದು ಆಯೋಗವನ್ನು ಸ್ಥಾಪಿಸತಕ್ಕದ್ದು.

(2) ರಾಜ್ಯ ಭದ್ರತಾ ಆಯೋಗವು, ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಮುಖ್ಯ ಮಂತ್ರಿಗಳು	ಅಧ್ಯಕ್ಷರು
(ಬಿ) ಗೃಹ ಸಚಿವರು	ಉಪಾಧ್ಯಕ್ಷರು
(ಸಿ) ವಿಧಾನ ಸಭೆಯ ವಿರೋಧ ಪಕ್ಷದ ನಾಯಕರು	ಸದಸ್ಯರು
(ಡಿ) ಕರ್ನಾಟಕದ ಮುಖ್ಯ ನ್ಯಾಯಮೂರ್ತಿಗಳು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ಒಬ್ಬ ನಿವೃತ್ತ ನ್ಯಾಯಾಧೀಶ	ಸದಸ್ಯರು
(ಇ) ಸರ್ಕಾರದ ಮುಖ್ಯ ಕಾರ್ಯದರ್ಶಿ	ಸದಸ್ಯರು
(ಎಫ್) ಒಳಾಡಳಿತ ಇಲಾಖೆಯ ಪ್ರಭಾರದಲ್ಲಿರುವ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ	ಸದಸ್ಯರು
(ಜಿ) ಪೊಲೀಸು ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರು	ಸದಸ್ಯ–ಕಾರ್ಯದರ್ಶಿ

(3) ನಿವೃತ್ತ ನ್ಯಾಯಾಧೀಶರ ನೇಮಕದ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಅವರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಆಯೋಗದ ಪ್ರಕಾರ್ಯಗಳು,–

(ಎ) ಪ್ರದೇಶದ ಕಾನೂನುಗಳಿಗೆ ಮತ್ತು ಭಾರತ ಸಂವಿಧಾನಕ್ಕೆ ಅನುಸಾರವಾಗಿ ರಾಜ್ಯ ಪೊಲೀಸರು ಯಾವಾಗಲೂ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ಖಚಿತಪಡಿಸುವುದಕ್ಕಾಗಿ ವಿಸ್ತೃತ ಕಾರ್ಯನೀತಿ ಮಾರ್ಗದರ್ಶಿ ಸೂತ್ರಗಳನ್ನು ನಿರೂಪಿಸುವುದು;

(ಬಿ) ಪ್ರತಿಬಂಧಕ ಕಾರ್ಯಗಳ ಮತ್ತು ಪೊಲೀಸು ಸೇವಾ ಆಧಾರಿತ ಪ್ರಕಾರ್ಯಗಳ ಕಾರ್ಯನಿರ್ವಹಣೆಗೆ ವಿಸ್ತೃತ ತತ್ತ್ವಗಳನ್ನು ನಿರೂಪಿಸುವುದು ಮತ್ತು ನಿರ್ದೇಶನಗಳನ್ನು ನೀಡುವುದು;

(ಸಿ) ರಾಜ್ಯ ಪೊಲೀಸರ ಕಾರ್ಯನಿರ್ವಹಣೆಯ ಮೌಲ್ಯಮಾಪನ ಮಾಡುವುದು ಮತ್ತು ಅದರ ಮೇಲಿನ ವರದಿಯನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವುದು; ಮತ್ತು

(ಡಿ) ನಿಯಮಿಸಬಹುದಾದಂತೆ ಯಾವುವೇ ಇತರ ಪ್ರಕಾರ್ಯಗಳು,

–ಇವುಗಳನ್ನು ಒಳಗೊಂಡಿರತಕ್ಕದ್ದು.

(5) ಆಯೋಗದ ಶಿಫಾರಸ್ಸುಗಳಿಗೆ ಸರ್ಕಾರವು ಬದ್ಧವಾಗಿರತಕ್ಕದ್ದು.

20ಬಿ. ಪೊಲೀಸು ಸಿಬ್ಬಂದಿ ಮಂಡಳಿ.– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಪೊಲೀಸು ಮಹಾನಿರ್ದೇಶಕ ಮತ್ತು ಮಹಾನಿರೀಕ್ಷಕನು ಅಧ್ಯಕ್ಷನಾಗಿರುವ ಮತ್ತು ಪೊಲೀಸು ಅಪರ ಮಹಾನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ಪೊಲೀಸು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೂವರು ಜೇಷ್ಠತಮ ಪೊಲೀಸು ಅಧಿಕಾರಿಗಳು ಸದಸ್ಯರಾಗಿರುವ ಪೊಲೀಸು ಸಿಬ್ಬಂದಿ ಮಂಡಳಿಯನ್ನು ಸ್ಥಾಪಿಸತಕ್ಕದ್ದು. ಪೊಲೀಸು ಅಪರ ಮಹಾನಿರ್ದೇಶಕರು (ಆಡಳಿತ) ಇವರು ಸಂಚಾಲಕರಾಗಿರತಕ್ಕದ್ದು.

(2) ಪೊಲೀಸು ಸಿಬ್ಬಂದಿ ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) 20ಎಫ್ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಇದು ಪೊಲೀಸು ಉಪ ಅಧೀಕ್ಷಕರ ದರ್ಜೆಯ ಮತ್ತು ಕಡಿಮೆ ದರ್ಜೆಯ ಪೊಲೀಸು ಅಧಿಕಾರಿಗಳ ವರ್ಗಾವಣೆಗಳು ಮತ್ತು ನಿಯೋಜನೆಗಳು, ಬಡ್ತಿಗಳು ಮತ್ತು ಇತರೆ ಸೇವಾ ಸಂಬಂಧಿ ವಿಷಯಗಳನ್ನು ನಿರ್ಧರಿಸತಕ್ಕದ್ದು;

(ಬಿ) ಇದು, ನಿಯಮಿಸಲಾದಂತೆ ನೇರ ನೇಮಕಾತಿ ಮತ್ತು ಬಡ್ತಿಗಾಗಿನ ಮೀಸಲಾತಿಯನ್ನು ಮತ್ತು ಕೋಟಾವನ್ನು ಸೂಕ್ತವಾಗಿ ಪರಿಶೀಲಿಸಿದ ತರುವಾಯ, ಪೊಲೀಸು ಉಪ ಅಧೀಕ್ಷಕನ ದರ್ಜೆಯ ಬಡ್ತಿಗೆ ಶಿಫಾರಸ್ಸನ್ನು ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ, ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದ ಆದೇಶಗಳು ಅಥವಾ ಮಾರ್ಗದರ್ಶಿ ಸೂತ್ರಗಳ ಅನ್ವಯ ಪೊಲೀಸು ಮಹಾನಿರ್ದೇಶಕ ಮತ್ತು ಪೊಲೀಸು ಮಹಾನಿರೀಕ್ಷಕನು, ಒಂದು ಪ್ರತ್ಯೇಕ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು;

(ಸಿ) ಪೊಲೀಸು ಅಪರ ಅಧೀಕ್ಷಕರ ದರ್ಜೆಯ ಮತ್ತು ಅದಕ್ಕಿಂತ ಮೇಲಿನ ದರ್ಜೆಯ ಅಧಿಕಾರಿಗಳ ನಿಯೋಜನೆಗಳು ಮತ್ತು ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡತಕ್ಕದ್ದು;

(ಡಿ) ರಾಜ್ಯದಲ್ಲಿ ಪೊಲೀಸು ಸೇವೆಯ ಕಾರ್ಯನಿರ್ವಹಣೆಯನ್ನು ಸಾಮಾನ್ಯವಾಗಿ ಪರಿಶೀಲಿಸತಕ್ಕದ್ದು;

(ಇ) ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ಅದರ ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟು, ಪೊಲೀಸು ಸಿಬ್ಬಂದಿ ಮಂಡಳಿಯು, ಸಿ ಮತ್ತು ಡಿ ದರ್ಜೆ ನೌಕರರನ್ನು ವರ್ಗಾವಣೆ ಮಾಡಲು ಜಿಲ್ಲೆಯೊಳಗೆ ಪೊಲೀಸು ಅಧೀಕ್ಷಕರನ್ನು ಮತ್ತು ವಲಯದೊಳಗೆ ಪೊಲೀಸು ಮಹಾ ನಿರೀಕ್ಷಕರನ್ನು ಅಧಿಕೃತಗೊಳಿಸಬಹುದು.

(4) ಸರ್ಕಾರವು, ಅಸಾಧಾರಣ ಸಂದರ್ಭಗಳಲ್ಲಿ, ಪೊಲೀಸು ಸಿಬ್ಬಂದಿ ಮಂಡಳಿಯ ನಿರ್ಧಾರವನ್ನು ಮಾರ್ಪಾಡು ಮಾಡುವುದಕ್ಕೆ ಸಂಬಂಧಿಸಿದಂತೆ ತನ್ನ ಕಾರಣಗಳನ್ನು ದಾಖಲಿಸಿದ ತರುವಾಯ ಮಾತ್ರವೇ, ಹಾಗೆ ಮಾರ್ಪಾಟು ಮಾಡಬಹುದು. ಪೊಲೀಸು ಅಪರ ಅಧೀಕ್ಷಕ ದರ್ಜೆಯ ಮತ್ತು ಅದರ ಮೇಲಿನ ದರ್ಜೆಯ ಅಧಿಕಾರಗಳ ನಿಯೋಜನೆಗಳ ಮತ್ತು ವರ್ಗಾವಣೆಗಳ ಬಗ್ಗೆ ಪೊಲೀಸು ಸಿಬ್ಬಂದಿ ಮಂಡಳಿಯು ಮಾಡಿದ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಸರ್ಕಾರವು, ಈ ಶಿಫಾರಸ್ಸುಗಳಿಗೆ ಸೂಕ್ತ ಮಾನ್ಯತೆಯನ್ನು ನೀಡತಕ್ಕದ್ದು ಮತ್ತು ಅವುಗಳನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳತಕ್ಕದ್ದು.

(5) ಪೊಲೀಸು ಸಿಬ್ಬಂದಿ ಮಂಡಳಿಯು ನಿರ್ಧರಿಸಿದ ಮತ್ತು ಜಾರಿಗೆ ತಂದ ವರ್ಗಾವಣೆಗಳು, ಕಟ್ಟುನಿಟ್ಟಾಗಿ 20ಎಫ್ ಪ್ರಕರಣಕ್ಕೆ ಅನುಸಾರವಾಗಿ ಮತ್ತು ಸರ್ಕಾರವು ಕಾಲಕಾಲಕ್ಕೆ ನೀಡಿದ ಸಾಮಾನ್ಯ ವರ್ಗಾವಣೆ ಮಾರ್ಗದರ್ಶಿ ಸೂತ್ರಗಳಿಗೆ ಅನುಸಾರವಾಗಿ ಇರತಕ್ಕದ್ದು.

(6) ದೂರುಗಳ ಮೇಲೆ, ಪೊಲೀಸು ಅಧಿಕಾರಿಗಳ ಅಥವಾ ಸಿಬ್ಬಂದಿಯ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣಗಳನ್ನು ಪೊಲೀಸು ಸಿಬ್ಬಂದಿ ಮಂಡಳಿಯು ಪರಿಗಣಿಸತಕ್ಕದ್ದು ಮತ್ತು ಈ ಸಂಬಂಧದಲ್ಲಿ ಕೈಗೊಂಡ ಕ್ರಮವನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(7) ಪೊಲೀಸು ಸಿಬ್ಬಂದಿ ಮಂಡಳಿಯ ನಡವಳಿಗಳ ಪ್ರತಿಗಳನ್ನು ಮತ್ತು ಅವುಗಳ ಮೇಲೆ ಹೊರಡಿಸಲಾದ ವರ್ಗಾವಣೆ ಆದೇಶಗಳನ್ನು ಕೂಡಲೇ ಸರ್ಕಾರಕ್ಕೆ ಕಳುಹಿಸತಕ್ಕದ್ದು.

20ಸಿ. ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರ.– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಐದು ಜನರನ್ನು ಒಳಗೊಂಡ ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವನ್ನು ರಚಿಸತಕ್ಕದ್ದು, ಎಂದರೆ.–

(i) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಶಿಫಾರಸ್ಸು ಮಾಡಿದ ಉಚ್ಚ ನ್ಯಾಯಾಲಯದ ಮೂರು ಜನ ನಿವೃತ್ತ ನ್ಯಾಯಾಧೀಶರ ಪಟ್ಟಿಯಿಂದ ಆಯ್ಕೆ ಮಾಡಿಕೊಂಡ ಒಬ್ಬರು ಅಧ್ಯಕ್ಷರಾಗಿರತಕ್ಕದ್ದು.

(ii) ಒಬ್ಬ ಸದಸ್ಯನು ನಾಗರಿಕ ಸೇವೆಗಳಿಂದ ನಿವೃತ್ತನಾದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯಾಗಿರತಕ್ಕದ್ದು;

(iii) ಒಬ್ಬ ಸದಸ್ಯನು ನಾಗರಿಕ ಸಮಾಜದಿಂದ ಬಂದವನಾಗಿರತಕ್ಕದ್ದು. ನಾಗರಿಕ ಸಮಾಜದ ಸದಸ್ಯನನ್ನು ಮಾನವ ಹಕ್ಕುಗಳ ಆಯೋಗ, ಕರ್ನಾಟಕ ಲೋಕ ಸೇವಾ ಆಯೋಗ ಮತ್ತು ಲೋಕಾಯುಕ್ತ ಇವುಗಳಲ್ಲಿ ಪ್ರತಿಯೊಂದನ್ನು ಪ್ರತಿನಿಧಿಸುವ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಮೂವರು ವ್ಯಕ್ತಿಗಳನ್ನು ಒಳಗೊಂಡ ಶೋಧನಾ ಸಮಿತಿಯು ಶಿಫಾರಸ್ಸು ಮಾಡಿದ ಮೂರು ಹೆಸರುಗಳುಳ್ಳ ಪಟ್ಟಿಯ ಪೈಕಿಯಿಂದ ರಾಜ್ಯ ಸರ್ಕಾರವು, ಆಯ್ಕೆ ಮಾಡತಕ್ಕದ್ದು. ರಾಜ್ಯ ಸರ್ಕಾರವು ಈ ಸದಸ್ಯರುಗಳ ಪೈಕಿಯಿಂದ ಒಬ್ಬರನ್ನು ಶೋಧನಾ ಸಮಿತಿಯ ಅಧ್ಯಕ್ಷರನ್ನಾಗಿ ಮತ್ತು ಒಳಾಡಳಿತ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಶೋಧನಾ ಸಮಿತಿಯ ಸಂಚಾಲಕರನ್ನಾಗಿ ನೇಮಕ ಮಾಡತಕ್ಕದ್ದು. ಪಟ್ಟಿಯಲ್ಲಿರುವ ವ್ಯಕ್ತಿಗಳು ಶಿಕ್ಷಣ, ಆರೋಗ್ಯ, ಬಡವರ ಏಳಿಗೆ ಮುಂತಾದ ಜನೋಪಕಾರಿ ಸೇವಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಪ್ರಖ್ಯಾತರಾಗಿರುವ ಪ್ರತಿಷ್ಠಿತ ವ್ಯಕ್ತಿಯಾಗಿರತಕ್ಕದ್ದು ಮತ್ತು ಸ್ವತ: ಯಾವುದೇ ರಾಜಕೀಯ ಪಕ್ಷದೊಡನೆ ಅಥವಾ ಸೈದ್ಧಾಂತಿಕ ಗುಂಪಿನೊಂದಿಗೆ ಜೊತೆಗೂಡಿರದ ವ್ಯಕ್ತಿಯಾಗಿರತಕ್ಕದ್ದು;

(iv) ಉಪ ಪೊಲೀಸು ಮಹಾನಿರೀಕ್ಷಕರಿಗಿಂತ ಕಡಿಮೆಯಲ್ಲದ ದರ್ಜೆಯ ಭಾರತೀಯ ಪೊಲೀಸು ಸೇವೆಯ ಒಬ್ಬ ಮಹಿಳಾ ಅಧಿಕಾರಿ;

(v) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಅಪರ ಪೊಲೀಸು ಮಹಾನಿರ್ದೇಶಕರು (ಕುಂದು ಕೊರತೆ) ಇವರು ಪ್ರಾಧಿಕಾರದ ಪದನಿಮಿತ್ತ ಸದಸ್ಯ ಮತ್ತು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(2) ಒಬ್ಬ ವ್ಯಕ್ತಿಯು,–

(ಎ) ಸಮಾಜ ವಿರೋಧಿ ಅಥವಾ ರಾಷ್ಟ್ರ ವಿರೋಧಿ ಗುಂಪು ಅಥವಾ ಸಂಸ್ಥೆಯೊಂದಿಗೆ ತಾನಾಗಿಯೇ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸೇರಿಕೊಂಡಿದ್ದಲ್ಲಿ; ಅಥವಾ

(ಬಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧ:ಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದು ಮತ್ತು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದಲ್ಲಿ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದಲ್ಲಿ; ಅಥವಾ

(ಡಿ) ಅಸ್ವಸ್ಥ ಚಿತ್ತದವನಾಗಿದ್ದು ಮತ್ತು ಸಕ್ಷಮ ನ್ಯಾಯಾಲಯವು ಹಾಗೆ ಘೋಷಿಸಿದ್ದಲ್ಲಿ; ಅಥವಾ

(ಇ) ನಿಯಮಿಸಬಹುದಾದ ಅಂಥ ಇತರ ಅನರ್ಹತೆಗಳೇನಾದರು ಇದ್ದಲ್ಲಿ,

–ಅವನು ಸದಸ್ಯನಾಗಿ ನೇಮಕನಾಗುವುದಕ್ಕೆ ಅನರ್ಹನಾಗಿರತಕ್ಕದ್ದು.

(3) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಪ್ರತಿಯೊಬ್ಬ ಸರ್ಕಾರೇತರ ಸದಸ್ಯನು ಮೂರು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು.

(4) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಸರ್ಕಾರೇತರ ಸದಸ್ಯರಿಗೆ ಸಂದಾಯಮಾಡತಕ್ಕ ಸಂಬಳ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಹಾಗೂ ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ಸರ್ಕಾರವು, ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಪ್ರಕಾರ್ಯಗಳಿಗೆ ನೆರವು ನೀಡುವುದಕ್ಕಾಗಿ ಅವಶ್ಯಕವಾಗಬಹುದಾದಷ್ಟು ಸಂಖ್ಯೆಯ ಸಿಬ್ಬಂದಿಯನ್ನು ಒದಗಿಸತಕ್ಕದ್ದು.

(6) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು, ಪೊಲೀಸು ಅಪರ ಅಧೀಕ್ಷಕರನ್ನೂ ಒಳಗೊಂಡಂತೆ ಪೊಲೀಸು ಅಧಿಕ್ಷಕರು ಮತ್ತು ಮೇಲಿನ ದರ್ಜೆಯ ಅಧಿಕಾರಿಗಳ ವಿರುದ್ಧದ ದೂರುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪೊಲೀಸು ಅಭಿರಕ್ಷೆಯಲ್ಲಿ ಮರಣ, ಗಂಭೀರ ಗಾಯ ಅಥವಾ ಅತ್ಯಾಚಾರದ ಘಟನೆಗಳನ್ನೊಳಗೊಂಡಂತೆ, ಪೊಲೀಸು ಅಧಿಕಾರಿಗಳು ಎಸಗಿದ ಗಂಭೀರ ದುರ್ನಡತೆಯ ಆಪಾದನೆಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದು.

(7) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು, ಪೊಲೀಸು ಅಧಿಕಾರಿಗಳ ವಿರುದ್ಧದ ಗಂಭೀರ ದುರ್ನಡತೆಯ ಆಪಾದನೆಯ ಬಗ್ಗೆ, ಆಪಾದಿತ ಪೊಲೀಸು ಅಧಿಕಾರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ತಾನಾಗಿಯಾಗಿಯೇ ಆಗಲೀ ಅಥವಾ ಈ ಮುಂದಿನ ಯಾರೊಬ್ಬರಿಂದ, ಎಂದರೆ:–

(ಎ) ತೊಂದರೆಗೆ ಗುರಿಯಾಗಿರುವ ಅಥವಾ ಅವನ ಪರವಾಗಿ ಯಾವೊಬ್ಬ ವ್ಯಕ್ತಿಯಿಂದ; ಅಥವಾ

(ಬಿ) ರಾಷ್ಟ್ರೀಯ ಅಥವಾ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ; ಅಥವಾ

(ಸಿ) ಪೊಲೀಸರಿಂದ: ಅಥವಾ

(ಡಿ) ಯಾವುದೇ ಇತರ ಮೂಲದಿಂದ,

–ಸ್ವೀಕರಿಸಿದ ಫಿರ್ಯಾದಿನ ಮೇಲಾಗಲೀ ವಿಚಾರಣೆ ಮಾಡತಕ್ಕದ್ದು.

ವಿವರಣೆ:– (1) ಈ ಅಧ್ಯಾಯದ ಉದ್ದೇಶಕ್ಕೆ ಸಂಬಂಧಿಸಿದಂತೆ "ಗಂಭೀರ ದುರ್ನಡತೆ" ಎಂದರೆ,–

(ಎ) ಪೊಲೀಸ್ ಅಭಿರಕ್ಷೆಯಲ್ಲಿನ ಮರಣಕ್ಕೆ; ಅಥವಾ

(ಬಿ) ಭಾರತ ದಂಡ ಸಂಹಿತೆ, 1860ರ 320ನೇ ಪ್ರಕರಣದಲ್ಲಿ ಪರಿಭಾಸಿಸಲಾದಂತೆ ಗಂಭೀರ ಗಾಯಕ್ಕೆ; ಅಥವಾ

(ಸಿ) ಅತ್ಯಾಚಾರ ಅಥವಾ ಅತ್ಯಾಚಾರದ ಪ್ರಯತ್ನಕ್ಕೆ; ಅಥವಾ

(ಡಿ) ಕಾನೂನಿನ ಯುಕ್ತ ಪ್ರಕ್ರಿಯೆ ಇಲ್ಲದೆ ಬಂಧನಕ್ಕೆ ಅಥವಾ ಸ್ಥಾನಬದ್ಧತೆಗೆ;

– ಕಾರಣನಾದ ಪೊಲೀಸು ಅಧಿಕಾರಿಯ ಯಾವುದೇ ಕೃತ್ಯ ಅಥವಾ ಲೋಪ.

(2) ಈ ಸಂದರ್ಭದಲ್ಲಿ "ದುರ್ನಡತೆ" ಎಂದರೆ, ಒಬ್ಬ ಪೊಲೀಸು ಅಧಿಕಾರಿಯು, ವಿವರಣೆ (1)ರಲ್ಲಿ ಪರಿಭಾಷಿಸಲಾದ "ಗಂಭೀರ ದುರ್ನಡತೆ" ಯನ್ನು ಹೊರತುಪಡಿಸಿ, ಯಾವೊಬ್ಬ ಸಾರ್ವಜನಿಕ ಸದಸ್ಯನ ಹಕ್ಕುಗಳಿಗೆ ಪ್ರತಿಕೂಲವಾಗಿ ತೊಂದರೆಯುಂಟು ಮಾಡುವಂತೆ, ಯಾವೊಬ್ಬ ಪೊಲೀಸು ಅಧಿಕಾರಿಯು, ಪೊಲೀಸರಿಗೆ ಅನ್ವಯವಾಗುವ ಯಾವುದೇ ಕಾನೂನು, ನಿಯಮ, ವಿನಿಯಮಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸುವುದು ಅಥವಾ ನಿರ್ಲಕ್ಷಿಸುವುದು.

(8) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು, ತಾನಾಗಿಯೇ ವಿಚಾರಣೆ ನಡೆಸಿದಾಗ, ವಿಚಾರಣೆಯ ಸಂದರ್ಭದಲ್ಲಿ ಫಿರ್ಯಾದಿನ ಮೇಲೆ ತನ್ನ ಅಭಿಪ್ರಾಯಗಳನ್ನು ಸಲ್ಲಿಸುವಂತೆ ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರಿಗೆ ನಿರ್ದೇಶಿಸಿ ನೋಟೀಸನ್ನು ಹೊರಡಿಸಬಹುದು. ಪೊಲೀಸು ಮಹಾ ನಿರ್ದೇಶಕರು ಮತ್ತು ಮಹಾನಿರೀಕ್ಷಕರು ಸಲ್ಲಿಸಿರುವ ಅಭಿಪ್ರಾಯ ಮತ್ತು ವಾಸ್ತವಾಂಶಗಳುಪ್ರಕರಣದ ಸಾರಭೂತವಾದ ಅಂಶಗಳಾಗಿರಬಹುದಾದುದರಿಂದ ಅವುಗಳನ್ನು ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು ಗಣನೆಗೆ ತೆಗೆದುಕೊಳ್ಳಬಹುದು:

ಪರಂತು, ಈ ಉದ್ದೇಶಕ್ಕಾಗಿ ಯಾವುದೇ ಇತರ ಅಧಿನಿಯಮದಲ್ಲಿ ಪ್ರತ್ಯೇಕ ಪ್ರಾಧಿಕಾರವನ್ನು ಸೃಜಿಸಿದ್ದಲ್ಲಿ, ರಾಜ್ಯ ಪೊಲೀಸು ಫಿರ್ಯಾದು ಪ್ರಾಧಿಕಾರವು ಅಂಥ ಪೊಲೀಸು ಅಧಿಕಾರಿಯ ವಿರುದ್ಧದ ಫಿರ್ಯಾದಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(9) ವಿಚಾರಣೆಯು ಪೂರ್ಣಗೊಂಡ ಮೇಲೆ, ಆಪಾದನೆಗಳು ಭಾಗಶ:ವಾಗಿ ಅಥವಾ ಪೂರ್ಣವಾಗಿ ರುಜುವಾತಾದಲ್ಲಿ, ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು, ಆಪಾದಿತ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ಶಿಸ್ತು ಪ್ರಾಧಿಕಾರಕ್ಕೆ ತನ್ನ ವರದಿಯನ್ನು ಕಳುಹಿಸತಕ್ಕದ್ದು.

(10) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು, ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಗಳ ಪ್ರಕಾರ್ಯಗಳ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು, ಉಸ್ತುವಾರಿಯನ್ನು ನಡೆಸತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು. ಇದು, ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಮತ್ತು ಜಿಲ್ಲಾ ಪೊಲೀಸು ಫಿರ್ಯಾದು ಪ್ರಾಧಿಕಾರಗಳ ಕಾರ್ಯನಿರ್ವಹಣೆಯ ವಾರ್ಷಿಕ ವರದಿಯನ್ನು ಸಂಕಲಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ವಾರ್ಷಿಕ ವರದಿಯು,–

(ಎ) ವರ್ಷಾವಧಿಯಲ್ಲಿ ರಾಜ್ಯ ಪೊಲೀಸು ಫಿರ್ಯಾದು ಪ್ರಾಧಿಕಾರವು ಪರಿಗಣಿಸಿದ "ಗಂಭೀರ ದುರ್ನಡತೆ" ಮತ್ತು "ದುರ್ನಡತೆ"ಯ ಪ್ರಕರಣಗಳ ಸಂಖ್ಯೆ ಮತ್ತು ಸ್ವರೂಪ;

(ಬಿ) ಫಿರ್ಯಾದುದಾರರು ತಮ್ಮ ಫಿರ್ಯಾದಿನ ಸಂಬಂಧದಲ್ಲಿ ನಡೆಸಲಾದ ಇಲಾಖಾ ವಿಚಾರಣೆಯಿಂದ ತೃಪ್ತರಾಗದೆ ಅವರು ಪ್ರಾಧಿಕಾರಕ್ಕೆ ಕಳುಹಿಸಿದ "ಗಂಭೀರ ದುರ್ನಡತೆ"ಯ ಪ್ರಕರಣಗಳ ಸಂಖ್ಯೆ ಮತ್ತು ಸ್ವರೂಪ;

(ಸಿ) ಮೇಲಿನವುಗಳ ಪೈಕಿಯಿಂದ ಇದು ಮುಂದಿನ ಕ್ರಮಕ್ಕಾಗಿ ಪೊಲೀಸರಿಗೆ ಮಾರ್ಗದರ್ಶನ ಅಥವಾ ನಿರ್ದೇಶನಗಳನ್ನು ನೀಡಿದ ಪ್ರಕರಣಗಳ ಸಂಖ್ಯೆ ಮತ್ತು ಸ್ವರೂಪ;

(ಡಿ) ನಿಯಮಿಸಬಹುದಾದ ಅಂಥ ಇತರ ಆಡಳಿತಾತ್ಮಕ ಮತ್ತು ಹಣಕಾಸಿಗೆ ಸಂಬಂಧಿಸಿದ ಇತರ ವಿಷಯಗಳು,

– ಇವುಗಳನ್ನು ಒಳಗೊಂಡಿರತಕ್ಕದ್ದು.

20ಡಿ. ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರ.– (1) ಸರ್ಕಾರವು, ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ವಿಭಾಗದ ವಿಭಾಗೀಯ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವನ್ನು ರಚಿಸತಕ್ಕದ್ದು ಮತ್ತು ಅದು ಈ ಮುಂದಿನ ಇತರ ಮೂವರು ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಒಬ್ಬ ಸದಸ್ಯನು ನಾಗರಿಕ ಸೇವೆಗಳಿಂದ ನಿವೃತ್ತನಾದ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯಾಗಿರತಕ್ಕದ್ದು;

(ii) ಒಬ್ಬ ಸದಸ್ಯನು ನಾಗರಿಕ ಸಮಾಜದಿಂದ ಬಂದವನಾಗಿರತಕ್ಕದ್ದು. ನಾಗರಿಕ ಸಮಾಜದ ಸದಸ್ಯನನ್ನು ಮಾನವ ಹಕ್ಕುಗಳ ಆಯೋಗ, ಕರ್ನಾಟಕ ಲೋಕ ಸೇವಾ ಆಯೋಗ ಮತ್ತು ಲೋಕಾಯುಕ್ತ ಇವುಗಳಲ್ಲಿ ಪ್ರತಿಯೊಂದನ್ನು ಪ್ರತಿನಿಧಿಸುವ, ಮೂವರು ವ್ಯಕ್ತಿಗಳನ್ನು ಒಳಗೊಂಡ ಶೋಧನಾ ಸಮಿತಿಯು ಶಿಫಾರಸ್ಸು ಮಾಡಿದ ಮೂರು ಹೆಸರುಗಳುಳ್ಳ ಪಟ್ಟಿಯ ಪೈಕಿಯಿಂದ ರಾಜ್ಯ ಸರ್ಕಾರವು ಆಯ್ಕೆ ಮಾಡತಕ್ಕದ್ದು. ರಾಜ್ಯ ಸರ್ಕಾರವು ಈ ಸದಸ್ಯರುಗಳ ಪೈಕಿಯಿಂದ ಒಬ್ಬರನ್ನು ಶೋಧನಾ ಸಮಿತಿಯ ಅಧ್ಯಕ್ಷರನ್ನಾಗಿ ಮತ್ತು ಒಳಾಡಳಿತ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಸಮಿತಿಯ ಸಂಚಾಲಕರನ್ನಾಗಿ ನೇಮಕ ಮಾಡತಕ್ಕದ್ದು. ಪಟ್ಟಿಯಲ್ಲಿರುವ ವ್ಯಕ್ತಿಗಳು ಶಿಕ್ಷಣ, ಆರೋಗ್ಯ, ಬಡವರ ಏಳಿಗೆ ಮುಂತಾದ ಜನೋಪಕಾರಿ ಸೇವಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ

ಪ್ರಖ್ಯಾತರಾಗಿರುವ ಪ್ರತಿಷ್ಠಿತ ವ್ಯಕ್ತಿಯಾಗಿರತಕ್ಕದ್ದು ಮತ್ತು ಸ್ವತ: ಯಾವುದೇ ರಾಜಕೀಯ ಪಕ್ಷದೊಡನೆ ಅಥವಾ ಸೈದ್ಧಾಂತಿಕ ಗುಂಪಿನೊಂದಿಗೆ ಜೊತೆಗೂಡಿರದ ವ್ಯಕ್ತಿಯಾಗಿರತಕ್ಕದ್ದು;

(iii) ಜಿಲ್ಲೆಯ ಪ್ರಭಾರದಲ್ಲಿರುವ ಪೊಲೀಸು ಅಧೀಕ್ಷಕನು ಪ್ರಾಧಿಕಾರದ ಪದನಿಮಿತ್ತ ಸದಸ್ಯ ಮತ್ತು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು,-

(ಎ) ಸಮಾಜ ವಿರೋಧಿ ಅಥವಾ ರಾಷ್ಟ್ರ ವಿರೋಧಿ ಸಮೂಹ ಅಥವಾ ಸಂಸ್ಥೆಯೊಂದಿಗೆ ಸ್ವತ: ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸೇರಿಕೊಂಡಿದ್ದಲ್ಲಿ; ಅಥವಾ

(ಬಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧ:ಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದಲ್ಲಿ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದಲ್ಲಿ; ಅಥವಾ

(ಡಿ) ಅಸ್ವಸ್ಥ ಚಿತ್ತದವನಾಗಿದ್ದು ಮತ್ತು ಆ ಬಗ್ಗೆ ಸಕ್ಷಮ ನ್ಯಾಯಾಲಯವು ಹಾಗೆ ಘೋಷಿಸಿದ್ದಲ್ಲಿ; ಅಥವಾ

(ಇ) ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ಇತರ ಅನರ್ಹತೆಗಳೇನಾದರೂ ಇದ್ದಲ್ಲಿ,

– ಸದಸ್ಯನಾಗಿ ನೇಮಕನಾಗುವುದಕ್ಕೆ ಅನರ್ಹನಾಗಿರತಕ್ಕದ್ದು.

(3) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯನು ಮೂರು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು.

(4) ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಸರ್ಕಾರೇತರ ಸದಸ್ಯರಿಗೆ ಸಂದಾಯಮಾಡತಕ್ಕ ಸಂಬಳ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಹಾಗೂ ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ಜಿಲ್ಲಾ ಪೊಲೀಸು ಫಿರ್ಯಾದು ಪ್ರಾಧಿಕಾರದ ಎಲ್ಲಾ ಸದಸ್ಯರು ಮತ್ತು ತನ್ನ ಸಿಬ್ಬಂದಿ ವರ್ಗದವರು ಇತರ ವಿಷಯಗಳ ಜೊತೆಯಲ್ಲಿ ಈ ಮುಂದಿನ ವಿಷಯಗಳ ಬಗ್ಗೆ ಎಂದರೆ:-

(ಎ) ಇಲಾಖಾ ವಿಚಾರಣೆಗಳಿಗೆ ಸಂಬಂಧಿಸಿದ ತಾಂತ್ರಿಕ ಮತ್ತು ಕಾನೂನು ವಿಷಯಗಳ ಬಗ್ಗೆ;

(ಬಿ) ಮಾನವ ಹಕ್ಕುಗಳ ಉಲ್ಲಂಘನೆಯ ನಿರ್ದಿಷ್ಟ ನಮೂನೆಗಳ ಬಗ್ಗೆ; ಮತ್ತು

(ಸಿ) ಪೊಲೀಸ್ ದುರುಪಯೋಗಕ್ಕೆ ಗುರಿಯಾದವರನ್ನು ಸೂಕ್ತವಾಗಿ ನೋಡಿಕೊಳ್ಳುವುದರ ಬಗ್ಗೆ,

– ನಿರಂತರವಾಗಿ ತರಬೇತಿ ಹೊಂದಿರುತ್ತಾರೆಂಬುದನ್ನು ಖಚಿತ ಪಡಿಸಿಕೊಳ್ಳುವುದು ಇದರ ಕರ್ತವ್ಯವಾಗಿರತಕ್ಕದ್ದು.

(6) ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಪ್ರಕಾರ್ಯಗಳ ನಿರ್ವಹಣೆಗಾಗಿ ಅಗತ್ಯವಾದ ಸಿಬ್ಬಂದಿಯನ್ನು ಸರ್ಕಾರವು ಒದಗಿಸತಕ್ಕದ್ದು.

(7) ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು, ಪೊಲೀಸು ಉಪ ಅಧೀಕ್ಷಕ ದರ್ಜೆಯ ಮತ್ತು ಅದಕ್ಕಿಂತ ಕೆಳಗಿನ ದರ್ಜೆಯ ಪೊಲೀಸು ಅಧಿಕಾರಿಗಳ ವಿರುದ್ಧದ ದೂರುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪೊಲೀಸು ಅಭಿರಕ್ಷೆಯಲ್ಲಿ ಮರಣ, ಗಂಭೀರ ಗಾಯ ಅಥವಾ ಅತ್ಯಾಚಾರ ಘಟನೆಗಳನ್ನೊಳಗೊಂಡಂತೆ, ಪೊಲೀಸು ಅಧಿಕಾರಿಗಳು ಎಸಗಿದ ಗಂಭೀರ ದುರ್ನಡತೆಯ ಆಪಾದನೆಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದು.

(8) ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು,-

(ಎ) ಪೊಲೀಸು ಉಪ ಅಧೀಕ್ಷಕರ ದರ್ಜೆಯ ಅಥವಾ ಅದಕ್ಕಿಂತ ಕೆಳಗಿನ ದರ್ಜೆಯ ಪೊಲೀಸು ಅಧಿಕಾರಿಗಳು ಎಸಗಿದ ಅಥವಾ ಅವರ ವಿರುದ್ಧ ಮಾಡಲಾದ ದುರ್ನಡತೆಯ ಅಥವಾ ಅಧಿಕಾರ ದುರುಪಯೋಗದ ಬಗ್ಗೆ ಆತನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ವಿಚಾರಣೆ ನಡೆಸಲು ಅಧಿಕಾರವನ್ನು ಹೊಂದಿರತಕ್ಕದ್ದು. ಪ್ರಾಧಿಕಾರವು, ಯಾವುದೇ ಪ್ರಕರಣವನ್ನು ಸ್ವತ: ತನಿಖೆ ಮಾಡುವ ಅಥವಾ ಯಾವುದೇ ಇತರ ಏಜೆನ್ಸಿಗೆ ತನಿಖೆ ಮಾಡುವಂತೆ ಮತ್ತು ವರದಿಯನ್ನು ಸಲ್ಲಿಸುವಂತೆ ಕೇಳುವ ಅಧಿಕಾರವನ್ನು ಹೊಂದಿರತಕ್ಕದ್ದು. ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಗಳು ಆಪಾದಿತ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಶಿಸ್ತು ಪ್ರಾಧಿಕಾರಗಳಿಗೆ ತನ್ನ ವರದಿಯನ್ನು ಸಲ್ಲಿಸತಕ್ಕದ್ದು;

(ಬಿ) ಪೊಲೀಸು ಉಪಅಧೀಕ್ಷಕ ದರ್ಜೆಯ ಅಥವಾ ಅದಕ್ಕಿಂತ ಮೇಲಿನ ದರ್ಜೆಯ ಯಾವೊಬ್ಬ ಪೊಲೀಸು ಅಧಿಕಾರಿಯ ವಿರುದ್ಧದ ಆಪಾದನೆಗಳನ್ನು ಒಳಗೊಂಡ ಫಿರ್ಯಾದು ಇದ್ದಲ್ಲಿ, ಅದನ್ನು ಜಿಲ್ಲಾ ಪೊಲೀಸು ಫಿರ್ಯಾದು ಪ್ರಾಧಿಕಾರವು, ಮುಂದಿನ ಕ್ರಮಕ್ಕಾಗಿ ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು;

(ಸಿ) ಅದು ನೇರವಾಗಿ ಸ್ವೀಕರಿಸಿದ್ದ "ಗಂಭೀರ ದುರ್ನಡತೆ"ಯ ದೂರುಗಳನ್ನು, ಮುಂದಿನ ಕ್ರಮಕ್ಕಾಗಿ ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು;

ಪರಂತು, ಈ ಉದ್ದೇಶಕ್ಕಾಗಿ ಯಾವುದೇ ಇತರ ಅಧಿನಿಯಮದಲ್ಲಿ ಪ್ರತ್ಯೇಕ ಪ್ರಾಧಿಕಾರವನ್ನು ಸೃಜಿಸಿದ್ದಲ್ಲಿ, ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು ಅಂಥ ಪೊಲೀಸು ಅಧಿಕಾರಿಯ ವಿರುದ್ಧದ ಫಿರ್ಯಾದಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(9) ಪ್ರತಿಯೊಂದು ಜಿಲ್ಲಾ ಪೊಲೀಸು ಫಿರ್ಯಾದು ಪ್ರಾಧಿಕಾರವು, ಪ್ರತೀ ಕ್ಯಾಲೆಂಡರ್ ವರ್ಷದ ಮುಕ್ತಾಯಕ್ಕೆ ಮೊದಲು, ಇತರ ವಿಷಯಗಳೊಂದಿಗೆ,-

(ಎ) ವರ್ಷಾವಧಿಯಲ್ಲಿ ತಾನು ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಕ್ಕೆ ಕಳುಹಿಸಿದ "ಗಂಭೀರ ದುರ್ನಡತೆ" ಮತ್ತು "ದುರ್ನಡತೆ"ಯ ಪ್ರಕರಣಗಳ ಸಂಖ್ಯೆ ಮತ್ತು ಸ್ವರೂಪ;

(ಬಿ) ಫಿರ್ಯಾದುದಾರರು ತಮ್ಮ ಫಿರ್ಯಾದಿನ ಸಂಬಂಧದಲ್ಲಿ ನಡೆಸಲಾದ ಇಲಾಖಾ ವಿಚಾರಣೆಯಿಂದ ತೃಪ್ತರಾಗದೆ, ಅವರು ಪ್ರಾಧಿಕಾರಕ್ಕೆ ಕಳುಹಿಸಿದ "ದುರ್ನಡತೆ"ಯ ಪ್ರಕರಣಗಳ ಸಂಖ್ಯೆ ಮತ್ತು ಸ್ವರೂಪ;

(ಸಿ) ಮೇಲೆ (ಬಿ)ಯಲ್ಲಿ ಉಲ್ಲೇಖಿಸಿದ ಪ್ರಕರಣಗಳ ಪೈಕಿಯಿಂದ, ಇದು ಮುಂದಿನ ಕ್ರಮಕ್ಕಾಗಿ ಪೊಲೀಸರಿಗೆ ಮಾರ್ಗದರ್ಶನ ಅಥವಾ ನಿರ್ದೇಶನಗಳನ್ನು ನೀಡಿದ ಪ್ರಕರಣಗಳ ಸಂಖ್ಯೆ ಮತ್ತು ಸ್ವರೂಪ;

(ಡಿ) ನಿಯಮಿಸಬಹುದಾದ ಅಂಥ ಆಡಳಿತಾತ್ಮಕ ಮತ್ತು ಹಣಕಾಸಿಗೆ ಸಂಬಂಧಿಸಿದ ಇತರ ವಿಷಯಗಳು,

– ಇವುಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

20ಇ. ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರ ಮತ್ತು ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರಗಳ ಅಧಿಕಾರಗಳು.– ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು ಮತ್ತು ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು, ಈ ಅಧಿನಿಯಮದಡಿಯಲ್ಲಿ ಯಾವುದೇ ವಿಷಯವನ್ನು ತನಿಖೆ ಮಾಡುವಾಗ, ದಾವೆಯ ಅಧಿವಿಚಾರಣೆಯಲ್ಲಿ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಎಂದರೆ:–

(ಎ) ರಾಜ್ಯದ ಯಾವುದೇ ಭಾಗದಿಂದ ಯಾವೊಬ್ಬ ವ್ಯಕ್ತಿಯ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಿಸುವುದು ಹಾಗೂ ಪ್ರಮಾಣದ ಮೇಲೆ ಪರೀಕ್ಷೆ ಮಾಡುವುದು;

(ಬಿ) ಯಾವುದೇ ದಸ್ತಾವೇಜಿನ ಶೋಧನೆಯನ್ನು ಮತ್ತು ಹಾಜರುಪಡಿಸುವಿಕೆಯನ್ನು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಕೋರುವುದು;

(ಇ) ಸಾಕ್ಷ್ಯಗಳು ಮತ್ತು ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನುಗಳನ್ನು ಹೊರಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯಗಳ ಸಂಬಂಧದಲ್ಲಿ,

– ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

20ಎಫ್. ಪೊಲೀಸ್ ಠಾಣೆಗಳ, ವೃತ್ತದ, ಉಪವಿಭಾಗದ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಪದಾವಧಿ.– (1) ವಯೋನಿವೃತ್ತಿಗೆ ಒಳಪಟ್ಟು, ಕಾರ್ಯಾಚರಣೆ ಕರ್ತವ್ಯದ ಮತ್ತು ಪೊಲೀಸ್ ಠಾಣೆಯ, ವೃತ್ತದ, ಉಪವಿಭಾಗದ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಕನಿಷ್ಠ ಒಂದು ವರ್ಷಗಳ ಪದಾವಧಿಯನ್ನು ಹೊಂದಿರಬಹುದು:

ಪರಂತು, ಯಾವೊಬ್ಬ ಅಂಥ ಅಧಿಕಾರಿಯನ್ನು, ಪೊಲೀಸ್ ಸಿಬ್ಬಂದಿ ಮಂಡಳಿಯು ಅಥವಾ ಪೊಲೀಸ್ ಸಿಬ್ಬಂದಿ ಮಂಡಳಿಯೊಡನೆ ಸಮಾಲೋಚಿಸಿ ಸರ್ಕಾರವು, ಈ ಮುಂದಿನವುಗಳ ಪರಿಣಾಮವಾಗಿ, ಎಂದರೆ:–

(ಎ) ಉನ್ನತ ಹುದ್ದೆಗೆ ಬಡ್ತಿ ಹೊಂದಿದ್ದರೆ; ಅಥವಾ

(ಬಿ) ಕ್ರಿಮಿನಲ್ ಅಪರಾಧದಲ್ಲಿ ನ್ಯಾಯಾಲಯದಿಂದ ನಿರ್ಣೀತ ಅಪರಾಧಿಯಾಗಿದ್ದರೆ ಅಥವಾ ನ್ಯಾಯಾಲಯವು ಆರೋಪಗಳನ್ನು ರೂಪಿಸಿದ್ದರೆ; ಅಥವಾ

(ಸಿ) ಸಂಬಂಧಪಟ್ಟ ಶಿಸ್ತು ಮತ್ತು ಮೇಲ್ಮನವಿ ನಿಯಮಗಳ ಅಡಿಯಲ್ಲಿ ವಜಾ, ತೆಗೆದುಹಾಕುವುದು, ಬಿಡುಗಡೆ ಅಥವಾ ಸೇವೆಯಿಂದ ಕಡ್ಡಾಯ ನಿವೃತ್ತಿ ಅಥವಾ ಕಡಿಮೆ ದರ್ಜೆಗೆ ಇಳಿಸುವ ಶಿಕ್ಷೆಯನ್ನು ವಿಧಿಸುವ ಐತೀರ್ಪನ್ನು ನೀಡಿದ್ದರೆ; ಅಥವಾ

(ಡಿ) ಸದರಿ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸೇವೆಯಿಂದ ಅಮಾನತ್ತುಗೊಂಡಿದ್ದರೆ; ಅಥವಾ

(ಇ) ದೈಹಿಕ ಅಥವಾ ಮಾನಸಿಕ ಅನಾರೋಗ್ಯದಿಂದ ತನ್ನ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾಗಿದ್ದರೆ ಅಥವಾ ಅನ್ಯಥಾ ಅಶಕ್ತನಾಗಿದ್ದರೆ; ಅಥವಾ

(ಎಫ್) ಬಡ್ತಿ, ವರ್ಗಾವಣೆ ಅಥವಾ ನಿವೃತ್ತಿಯ ಮೂಲಕ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಅಗತ್ಯತೆಯನ್ನು ಹೊಂದಿದ್ದರೆ; ಅಥವಾ

(ಜಿ) ಸಂಬಂಧಪಟ್ಟ ಅಧಿಕಾರಿಯ ಲಿಖಿತ ಕೋರಿಕೆ ಇದ್ದರೆ,

– ಮೇಲಿನ ಕನಿಷ್ಠ ಪದಾವಧಿಯು ಮುಕ್ತಾಯವಾಗುವುದಕ್ಕೆ ಮೊದಲೇ ಆತನನ್ನು ವರ್ಗಾಯಿಸಬಹುದು:

ಮತ್ತು ಪರಂತು, ಪೊಲೀಸು ಸಿಬ್ಬಂದಿ ಮಂಡಳಿಯೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ಸರ್ಕಾರವು, ಒಬ್ಬ ಅಧಿಕಾರಿಯನ್ನು ದುರ್ನಡತೆ ಅಥವಾ ಅತೀವ ನಿರ್ಲಕ್ಷತೆ ಅಥವಾ ನೈತಿಕ ಅಧ:ಪತನದ ಕೃತ್ಯಗಳ ಕಾರಣದಿಂದಾಗಿ ಆತನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮೊದಲೇ ಆತನನ್ನು ವರ್ಗಾಯಿಸಬಹುದು.

(2) ವಯೋನಿವೃತ್ತಿಗೆ ಒಳಪಟ್ಟು, ಕ್ಷೇತ್ರದಲ್ಲಿನ ಕಾರ್ಯನಿರ್ವಹಣಾ ಕರ್ತವ್ಯಗಳ ಮೇಲಿರುವಂಥ ಪೊಲೀಸು ಅಪರ ಅಧೀಕ್ಷಕನೂ ಒಳಗೊಂಡಂತೆ, ವಲಯದ ಪ್ರಭಾರದಲ್ಲಿರುವ ಪೊಲೀಸು ಮಹಾ ನಿರೀಕ್ಷಕನು ಅಥವಾ ಜಿಲ್ಲೆಯ ಪ್ರಭಾರದಲ್ಲಿರುವ ಪೊಲೀಸು ಅಧೀಕ್ಷಕನು, ಕನಿಷ್ಠ ಒಂದು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು:

ಪರಂತು, ಸರ್ಕಾರವು, ತೀವ್ರ ದುರ್ನಡತೆ ಅಥವಾ ನಿರ್ಲಕ್ಷತೆ ಅಥವಾ ನೈತಿಕ ಅಧ:ಪತನದ ಕಾರಣಗಳಿಗಾಗಿ ಅಥವಾ (1)ನೇ ಉಪ ಪ್ರಕರಣದ ಪರಂತುಕದಲ್ಲಿ ಹೇಳಿದ ಸಂದರ್ಭಗಳಡಿಯಲ್ಲಿ ಮೇಲಿನ ಪ್ರವರ್ಗದ ಅಧಿಕಾರಿಯನ್ನು ಒಂದು ವರ್ಷಗಳ ಅವಧಿಯೊಳಗೆ ವರ್ಗಾಯಿಸಬಹುದು.

20ಜಿ. ಪೊಲೀಸು ಠಾಣೆಯಲ್ಲಿಯ ಘಟಕಗಳು.– (1) ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂತೆ, ಪೊಲೀಸು ನಿರೀಕ್ಷಕನ ಅಥವಾ ಪೊಲೀಸು ಉಪನಿರೀಕ್ಷಕನ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯು, ಠಾಣೆಯ ಅಧಿಕಾರಿಯಾಗಿ (ಸ್ಟೇಷನ್ ಹೌಸ್ ಆಫೀಸರ್) ಪೊಲೀಸು ಠಾಣೆಯ ಮುಖ್ಯಸ್ಥನಾಗಿರತಕ್ಕದ್ದು.

(2) ಪ್ರತಿಯೊಂದು ಪೊಲೀಸು ಠಾಣೆಯಲ್ಲಿ, ಎರಡು ಘಟಕಗಳಿರತಕ್ಕದ್ದು, ಎಂದರೆ:–

(ಎ) ಅಪರಾಧ ಪತ್ತೆ ಮತ್ತು ತನಿಖೆ ನಡೆಸುವುದಕ್ಕಾಗಿ, ಪೊಲೀಸು ಮಹಾ ನಿರ್ದೇಶಕರು ಮತ್ತು ಮಹಾನಿರೀಕ್ಷಕರು ಆದೇಶದ ಮೂಲಕ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಪೊಲೀಸು ಅಧಿಕಾರಿಗಳನ್ನು ಒಳಗೊಂಡಿರುವ ಒಂದು ಪ್ರತ್ಯೇಕವಾದ ಅಪರಾಧ ತನಿಖಾ ಘಟಕ; ಮತ್ತು

(ಬಿ) ಕಾನೂನು ಮತ್ತು ಸುವ್ಯವಸ್ಥೆ ಪಾಲನೆ, ಸಂಚಾರ ಮತ್ತು ಅಪರಾಧಗಳನ್ನು ಪ್ರತಿಬಂಧಿಸುವ ಉದ್ದೇಶಕ್ಕಾಗಿ, ಪೊಲೀಸು ಮಹಾ ನಿರ್ದೇಶಕರು ಮತ್ತು ಮಹಾನಿರೀಕ್ಷಕರು, ಆದೇಶದ ಮೂಲಕ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಪೊಲೀಸು ಅಧಿಕಾರಿಗಳನ್ನು ಒಳಗೊಂಡಿರುವ, ಕಾನೂನು ಮತ್ತು ಸುವ್ಯವಸ್ಥೆಯೊಂದಿಗೆ ವ್ಯವಹರಿಸುವ ಮತ್ತೊಂದು ಘಟಕ:

ಪರಂತು, ಯಾವುದೇ ಪೊಲೀಸು ಠಾಣೆಯಲ್ಲಿ ನೋಂದಾಯಿತವಾದ ಅಪರಾಧಗಳ ವಾರ್ಷಿಕ ಸರಾಸರಿ ಸಂಖ್ಯೆಯು ಗೊತ್ತುಪಡಿಸಲಾದಷ್ಟು ಸಂಖ್ಯೆಯನ್ನು ಮೀರಿದ್ದಲ್ಲಿ, ಅಪರಾಧ ತನಿಖೆಗೆ ಮತ್ತು ಕಾನೂನು ಹಾಗೂ ಸುವ್ಯವಸ್ಥೆಯ ಪ್ರತಿಯೊಂದು ಘಟಕಕ್ಕೆ ಪ್ರತ್ಯೇಕವಾಗಿ ಒಬ್ಬೊಬ್ಬರಂತೆ ಇಬ್ಬರು ಪೊಲೀಸು ಉಪ ನಿರೀಕ್ಷಕರು ಅಥವಾ ಸಂದರ್ಭಾನುಸಾರವಾಗಿ ಪೊಲೀಸು ನಿರೀಕ್ಷಕರು ಇರತಕ್ಕದ್ದು:

ಮತ್ತು ಪರಂತು, ಯಾವುದೊಂದು ಘಟಕಕ್ಕೆ ವಹಿಸಿಕೊಡಲಾದ ಪೊಲೀಸು ಸಿಬ್ಬಂದಿಯನ್ನು, ಜಿಲ್ಲೆಯ ಪೊಲೀಸು ಅಧೀಕ್ಷಕನ ಅಥವಾ ಸಂದರ್ಭಾನುಸಾರವಾಗಿ ಪೊಲೀಸ್ ಆಯುಕ್ತನ ಲಿಖಿತ ಅನುಮತಿ ಇಲ್ಲದೇ, ಯಾವುದೇ ಇತರ ಉದ್ದೇಶಕ್ಕೆ ನಿಯೋಜಿಸತಕ್ಕದ್ದಲ್ಲ."

4. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ಪೊಲೀಸು (ತಿದ್ದುಪಡಿ) ಅಧ್ಯಾದೇಶ, 2012ನ್ನು (2012ರ ಕರ್ನಾಟಕ ಅಧ್ಯಾದೇಶ 2) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪೊಲೀಸು ಸುಧಾರಣೆಗಳ ಸಂಬಂಧದಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:310/1996ರಲ್ಲಿ (ಶ್ರೀ ಪ್ರಕಾಶ್ ಸಿಂಗ್ ಮತ್ತು ಇತರರು ವಿರುದ್ಧ ರಾಜ್ಯ) ನೀಡಿದ ನಿರ್ದೇಶನಗಳನ್ನು ಅನುಸರಿಸುವ ಉದ್ದೇಶಕ್ಕಾಗಿ, ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 4) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಪೊಲೀಸು (ತಿದ್ದುಪಡಿ) ಅಧ್ಯಾದೇಶ, 2012ನ್ನು (2012ರ ಕರ್ನಾಟಕ ಅಧ್ಯಾದೇಶ 2) ದಿನಾಂಕ:01–06–2012ರಂದು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕ.

ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಗಳ ನಿಯಮ 77ರ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ಪೊಲೀಸು ಸುಧಾರಣೆಗಳ ಸಂಬಂಧದಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:310/1996ರಲ್ಲಿ (ಶ್ರೀ ಪ್ರಕಾಶ್ ಸಿಂಗ್ ಮತ್ತು ಇತರರು ವಿರುದ್ಧ ರಾಜ್ಯ) ನೀಡಿದ ನಿರ್ದೇಶನಗಳನ್ನು ಅನುಸರಿಸುವ ಉದ್ದೇಶಕ್ಕಾಗಿ, ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 4) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಪೊಲೀಸು (ತಿದ್ದುಪಡಿ) ಅಧ್ಯಾದೇಶ, 2012ನ್ನು (2012ರ ಕರ್ನಾಟಕ ಅಧ್ಯಾದೇಶ 2) ದಿನಾಂಕ:01–06–2012ರಂದು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ವಾರ್ಷಿಕ 5.3 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಉಂಟಾಗಬಹುದು.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ ಪತ್ರ

ಖಂಡ 3: 1) 20 ಎ ಪ್ರಕರಣವು,–

(ಎ) ರಾಜ್ಯ ಭದ್ರತಾ ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಿಕೊಂಡಂಥ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಅವರಿಗೆ ಸಂದಾಯ ಮಾಡಬಹುದಾದ ಭತ್ಯೆಗಳಿಗೆ ಸಂಬಂಧಿಸಿದಂತೆ; ಮತ್ತು

(ಬಿ) ಆಯೋಗದ ಯಾವುದೇ ಇತರ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ,

– ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(2) 20 ಬಿ ಪ್ರಕರಣವು, ಪೊಲೀಸು ಸಿಬ್ಬಂದಿ ಮಂಡಳಿಯು ನಿರ್ವಹಿಸಬೇಕಾದಂಥ ಇತರ ಪ್ರಕಾರ್ಯಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(3) 20 ಸಿ ಪ್ರಕರಣವು,–

(i) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಸದಸ್ಯರಾಗಿ ನೇಮಕವಾಗುವುದಕ್ಕೆ ಇರುವ ಅಂಥ ಇತರೆ ಅನರ್ಹತೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(ii) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಸದಸ್ಯರಗಳಿಗೆ ಸಂದಾಯ ಮಾಡತಕ್ಕ ಸಂಬಳ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಹಾಗೂ ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(iii) ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು ವಾರ್ಷಿಕ ವರದಿಯಲ್ಲಿ ಒಳಗೊಳ್ಳಬೇಕಾದ ಆಡಳಿತಾತ್ಮಕ ಮತ್ತು ಹಣಕಾಸು ವಿಷಯಗಳ ಕುರಿತಂತೆ ಅಂಥ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(4) 20 ಡಿ ಪ್ರಕರಣವು,–

(i) ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಸದಸ್ಯರಾಗಿ ನೇಮಕವಾಗುವುದಕ್ಕೆ ಇರುವ ಅಂಥ ಇತರೆ ಅನರ್ಹತೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(ii) ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರದ ಸದಸ್ಯರುಗಳಿಗೆ ಸಂದಾಯ ಮಾಡತಕ್ಕ ಸಂಬಳ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಹಾಗೂ ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(iii) ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು ವಾರ್ಷಿಕ ವರದಿಯಲ್ಲಿ ಒಳಗೊಳ್ಳಬೇಕಾದ ಆಡಳಿತಾತ್ಮಕ ಮತ್ತು ಹಣಕಾಸು ವಿಷಯಗಳ ಕುರಿತಂತೆ ಅಂಥ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(5) 20 ಇ ಪ್ರಕರಣವು, ಈ ಅಧಿನಿಯಮದ ಅಡಿಯಲ್ಲಿ ತನಿಖೆ ನಡೆಸುವಾಗ, ಸಿವಿಲ್ ನ್ಯಾಯಾಲಯಗಳ ಅಧಿಕಾರಗಳನ್ನು ಹೊಂದಿರುವ ರಾಜ್ಯ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು ಮತ್ತು ಜಿಲ್ಲಾ ಪೊಲೀಸು ಫಿರ್ಯಾದುಗಳ ಪ್ರಾಧಿಕಾರವು ತನಿಖೆ ನಡೆಸುವ ಇತರ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಆರ್. ಅಶೋಕ
ಉಪ ಮುಖ್ಯಮಂತ್ರಿಗಳು
(ಗೃಹ ಮತ್ತು ಸಾರಿಗೆ ಸಚಿವರು)

ವಿ. ಶ್ರೀಶ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಅನುಬಂಧ

ಕರ್ನಾಟಕ ಪೊಲೀಸು ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ 4)

ಉದ್ಧೃತ ಭಾಗ

XX XX XX

6. ಇನ್ಸ್‌ಪೆಕ್ಟರ್ ಜನರಲ್ ಮತ್ತು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್.– (1) ಸರಕಾರವು, ಪೊಲೀಸು ದಳದ ನಿರ್ದೇಶನಕ್ಕಾಗಿ ಮತ್ತು ಮೇಲ್ವಿಚಾರಣೆಗಾಗಿ ಇನ್ಸ್‌ಪೆಕ್ಟರ್ ಜನರಲ್, ಪೊಲೀಸನನ್ನು ನೇಮಕ ಮಾಡತಕ್ಕದ್ದು ಮತ್ತು ಅವನು ರಾಜ್ಯ ಸರಕಾರದ ನಿಯಂತ್ರಣಕ್ಕೊಳಪಟ್ಟು ಈ ಅಧಿನಿಯಮದ ಅಥವಾ ಅದರ ಮೇರೆಗೆ ಉಪಬಂಧಿಸಲಾಗುವಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು; ಮತ್ತು ಅಂಥ ಪ್ರಕಾರ್ಯಗಳನ್ನು ಮತ್ತು ಅಂಥ ಪ್ರಾಧಿಕಾರವನ್ನು ಹೊಂದಿರತಕ್ಕದ್ದು.

(2) (ಎ) ಸರಕಾರವು ತಾನು ಉಚಿತವೆಂದು ಭಾವಿಸುವಷ್ಟು ಸಂಖ್ಯೆಯ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್‌ಗಳನ್ನು ನೇಮಿಸಬಹುದು.

(ಬಿ) ಇನ್ಸ್‌ಪೆಕ್ಟರ್–ಜನರಲ್‌ನ ಯಾವುದೇ ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಮತ್ತು ಪ್ರಾಧಿಕಾರವನ್ನು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್‌ನು ಚಲಾಯಿಸಬಹುದು, ನೆರವೇರಿಸಬಹುದು ಅಥವಾ ನಿರ್ವಹಿಸಬಹುದೆಂದು ಸರಕಾರವು ನಿರ್ದೇಶಿಸಬಹುದು.

(ಸಿ) ಸರಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್‌ನು ಇನ್ಸ್‌ಪೆಕ್ಟರ್ ಜನರಲ್‌ನಿಗೆ ಅವನ ಅಧಿಕಾರಗಳನ್ನು, ಪ್ರಕಾರ್ಯಗಳನ್ನು, ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಾಧಿಕಾರವನ್ನು ನೆರವೇರಿಸುವುದರಲ್ಲಿ, ಚಲಾಯಿಸುವುದರಲ್ಲಿ ಮತ್ತು ನಿರ್ವಹಿಸುವುದರಲ್ಲಿ ಆದೇಶದಲ್ಲಿ ನಿರ್ದೇಶಿಸಬಹುದಾದ ರೀತಿಯಲ್ಲಿ ಮತ್ತು ಆದಷ್ಟು ಮಟ್ಟಿಗೆ ಸಹಾಯ ಮಾಡತಕ್ಕದ್ದು ಮತ್ತು ನೆರವು ನೀಡತಕ್ಕದ್ದು ಎಂದು ಕೂಡಾ ನಿರ್ದೇಶಿಸಬಹುದು.

XX XX XX

KARNATAKA LEGISLATIVE COUNCIL

ONE HUNDRED AND NINETEENTH SESSION

(ADJOURNED MEETINGS)

KARNATAKA POLICE (AMENDMENT) BILL, 2012

(L.C. Bill No. 01 of 2012)

A Bill further to amend the Karnataka Police Act, 1963.

Whereas it is expedient further to amend the Karnataka Police Act, 1963 (Karnataka Act No. 4 of 1964) for the purposes hereinafter appearing;

Be it enacted by the Karnataka State Legislature in the sixty-third year of the Republic of India, as follows:-

1. Short title and commencement.- (1) This Act may be called the Karnataka Police (Amendment) Act, 2012.

(2) It shall be deemed to have come into force with effect from the 2nd day of June, 2012.

2. Substitution of section 6.- In the Karnataka Police Act, 1963 (Karnataka Act 4 of 1964) (hereinafter referred to as the principal Act), for section 6, the following shall be substituted, namely:-

"6. Director General and Inspector General of Police.- (1) For the direction, control and supervision of the Police service, the Government shall appoint a Director General and Inspector General of Police, who shall subject to the control of the Government, exercise such powers and perform such functions and duties and shall have such responsibilities and such authority as may be provided by or under this Act.

(2) The Director General and Inspector General of Police shall be selected by the State Government from amongst officers of the Indian Police Service in the rank of Director General of Police who have been empanelled for promotion to that rank on the basis of their length of service, very good history of service, professional knowledge and ability to lead Police Force in the State.

(3) The Director General and Inspector General of Police so appointed shall have a tenure of not less than two years subject to superannuation:

Provided that the Government may transfer the Director General and Inspector General of Police before completion of two years of his tenure, if he is,–

(a) convicted by a court of law in a criminal case or where charges have been framed against him by a court in a case involving corruption or offences which amounts to moral turpitude; or

(b) incapacitation by physical or mental illness or otherwise becoming unable to discharge his functions as the Director General and Inspector General of police; or

(c) appointed to another post with his consent; or

(d) imposed punishment of dismissal, removal, or compulsory retirement from service or of reduction to a lower post, awarded under the provisions of the All India Services (Discipline and Appeal) Rules, 1969 or any other relevant rule; or

(e) under suspension from service; or

(f) when a prima-facie case of misconduct or gross negligence is established after a preliminary enquiry.

(4) The Government, may by notification, delegate such powers or give such directions as it deems necessary to the Director General and Inspector General of Police who shall exercise the powers and discharge the functions so entrusted to him by or under this Act."

3. Insertion of new chapter IIA.- In the principal Act, after Chapter II and entries relating thereto, the following new chapter shall be inserted, namely:-

"CHAPTER IIA

ESTABLISHMENT OF STATE SECURITY COMMISSION, POLICE ESTABLISHMENT BOARD, STATE POLICE COMPLAINT AUTHORITY AND DISTRICT POLICE COMPLAINT AUTHORITY

20A. The State Security Commission.- (1) The State Government may, by notification in the official Gazette, establish a Commission to be called the State Security Commission for the purpose of exercising such functions and discharging such duties as may be assigned to the Commission, by or under this Act.

(2) The State Security Commission shall consist of the following members, namely:-

(a)	The Chief Minister	-	Chairman
(b)	The Home Minister	-	Vice Chairman
(c)	Leader of the Opposition in the Legislative Assembly	-	Member
(d)	A Retired judge of the High Court nominated by the Chief justice of Karnataka	-	Member
(e)	Chief Secretary to Government	-	Member
(f)	Additional Chief Secretary/Principal Secretary, in charge of Home Department	-	Member
(g)	Director General of Police and Inspector General of Police	-	Member Secretary

(3) The terms and conditions of appointment and allowance payable thereof to the retired judge shall be such as may be prescribed.

(4) The functions of the Commission shall include,-

(a) laying down the broad policy guidelines for ensuring that the State Police always acts according to the laws of the land and the constitution of India;

(b) laying down the broad principles and giving directions for the performance of the preventive tasks and service oriented functions of the police;

(c) evaluation of the performance of the State Police and submission of report thereon to the Government for placing before the State Legislature; and

(d) any other functions as may be prescribed.

(5) The recommendations of the Commission shall be binding on the Government.

20B. Police Establishment Board.- (1) The State Government shall, by notification in the official Gazette, establish a Police Establishment Board with the Director General and Inspector General of Police as Chairman and three senior most police officers not below the rank of Additional Director General of Police working within the police department as members. Additional Director General of Police (Administration) shall be the convener.

(2) The functions of the Police Establishment Board shall be as follows, namely:-

(a) Subject to the provisions of section 20F, it shall decide on transfers, postings, promotions and other service related matters of officers of and below the rank of Deputy Superintendent of Police.

(b) It shall also make recommendation for promotion to the rank of Deputy Superintendents of Police after duly verifying reservation and quota prescribed for direct recruitment and promotion. For this purpose a separate register shall be maintained by Director General and Inspector General of Police, as per orders or guidelines prescribed by Government from time to time.

(c) It shall make appropriate recommendations to the Government regarding postings and transfers of officers of and above the rank of Additional Superintendent of Police.

(d) Generally review the functioning of the police force in the State.

(e) Perform such other functions as may be prescribed.

(3) Subject to its control and directions, the Police Establishment Board may authorize the Superintendent of Police to effect transfers of Group C and D officials within the district and the Inspector General of Police within the Range.

(4) The Government may modify the decision of the Police Establishment Board in exceptional cases only after recording its reasons for doing so. The Government shall give due weightage and shall normally accept the recommendations made by the Board, regarding postings and transfers of officers of and above the rank of Additional Superintendent of Police.

(5) The transfers decided and effected by the Police establishment Board shall be strictly in accordance with section 20F and the general transfer guidelines issued by Government from time to time.

(6) The cases pertaining to transfer of Police officers or personnel on complaints shall be considered by the Police Establishment Board and action taken in this regard shall be reported to Government.

(7) Copies of proceedings of the Police Establishment Board and the transfer orders issued thereon shall be sent to Government forthwith.

20C. State Police Complaints Authority.- (1) The State Government shall, by notification in the official Gazette, constitute the State Police Complaints Authority consisting of five persons, namely:-

(i) One shall be the Chairman selected from among the panel of three retired High Court Judges recommended by the Chief Justice of High Court of Karnataka.

(ii) one member shall be from among the retired Civil Service who shall be an officer not below the rank of Principal Secretary to Government;

(iii) one member shall be from Civil Society. The Civil Society member shall be chosen by the State Government from amongst the panel of three names recommended by the Search Committee consisting of three persons nominated by the State Government one each representing the Human Rights Commission, the Karnataka Public Service Commission and the Lokayukta. The State Government shall appoint one of the members as the Chairman of the Search Committee and an officer not below the rank of Deputy Secretary to Government, Home Department as the convener of the Search Committee. The persons in the panel shall be a person of repute who has rendered humanitarian service in the field of education, health, upliftment of the poor etc. and had not aligned himself with any political party or ideological group;

(iv) one women IPS Officer of not below the rank of Deputy Inspector General of Police; and

(v) the Additional General of Police (Grievance) nominated by the State Government as the Ex-officio member and member Secretary of the Authority.

(2) A person shall be disqualified for being appointed as member, if he,–

(a) has directly or indirectly associated himself with any Anti Social or Anti National group or body;

(b) has been convicted and sentenced to imprisonment for an offence which, in the opinion of the State Government, involves moral turpitude; or

(c) is an undischarged insolvent; or

(d) is of unsound mind and stands so declared by a competent court;

(e) has such other disqualifications as may be prescribed.

(3) Every non-official member of the State Police Complaints Authority shall hold office for a period of three years.

(4) The salary or honorarium and other allowances payable to, and the other terms and conditions of service of the non-official members of the State Police Complaints Authority shall be such as may be prescribed.

(5) The Government shall provide such number of staff as is necessary for assisting the functions of the State Police Complaints Authority.

(6) The State Police Complaints Authority shall look into complaints against officers of the rank of Superintendent of Police and above, including Additional Superintendent of Police, and take cognizance of allegations of serious misconduct by the police officers which would include incidents involving death, grievous hurt or rape in police custody.

(7) The State Police Complaints Authority shall inquire into allegations of serious misconduct against police officers, after providing an opportunity of being heard to the alleged police officer either *suo moto or* on a complaint received from any of the following, namely:-

(a) a victim or any person on his behalf; or

(b) the National or the State Human Rights Commission; or

(c) the police; or

(d) any other source.

Explanation.- (1) “Serious misconduct” for the purpose of this Chapter, shall mean any act or omission of a police officer that leads to or amounts to,-

(a) death in police custody; or

(b) grievous hurt, as defined in section 320 of the Indian Penal Code, 1860 ; or

(c) rape or attempt to commit rape; or

(d) arrest or detention without due process of law.

(2) “Misconduct” in this context, shall mean any willful breach or neglect by a police officer of any law, rule, regulation applicable to the police that adversely affects the rights of any member of the public, excluding “serious misconduct” as defined in explanation (1).

(8) In the cases *suo moto* inquired by the State police Complaints Authority, it may, issue notice to Director General and Inspector General of Police and direct him to file his views on the complaint during the enquiry. The State

Police Complaints Authority may take into account the views and facts furnished by the Director General and Inspector General of Police that may have a material bearing on the cases:

Provided that the State Police Complaints Authority shall not have jurisdiction on the complaint against police officer where a separate authority is created by any other Act for this purpose.

(9) On completion of the enquiry, if the allegations are proved partly or fully, the State Police Complaints Authority shall forward its report to the disciplinary authority for appropriate action against the accused officers.

(10) The State Police Complaints Authority shall also supervise, monitor and control the functioning of District Police Complaints Authorities. It shall compile Annual Report of the functioning of State Police Complaints Authority and District Police Complaints Authorities and submit to the Government. The annual report shall contain,-

(a) the numbers and types of cases of "serious misconduct" and "misconduct" considered by the State Police Complaints Authority during the year;

(b) the number and types of cases of "serious misconduct" referred to it by the complainants upon being dissatisfied by the departmental inquiry into his complaint ;

(c) the number and types of cases referred to above in which advice or direction was issued by it to the police for further action;

(d) such other related Administrative and financial matters as may be prescribed.

20D. District Police Complaints Authority.- (1) The Government shall in consultation with State Police Complaints Authority, by notification in the official Gazette, constitute the District Police Complaints Authority under the chairmanship of the Regional Commissioner of the Region and three other members, namely:-

(i) one member of retired Civil Service shall be an officer not below the rank of Joint Secretary to Government;

(ii) one member shall be from the Civil Society. The Civil Society member shall be chosen by the State Government from amongst the panel of three names recommended by the Search Committee consisting of three persons one each representing the Human Rights Commission, Karnataka Public Service Commission and the Lokayukta. The State Government shall appoint one of the members as Chairman of the Search Committee and an officer not below the rank of Deputy Secretary to Government, Home Department as convener of the Committee. The persons in the panel shall be a person of repute who has rendered humanitarian service in the field of education, Health, upliftment of the poor etc. and had not aligned himself with any political party or ideological group; and

(iii) the Superintendent of Police in charge of the District shall be ex-officio member and member Secretary of the Authority.

(2) A person shall be disqualified for being appointed as member if he,–

(a) has directly or indirectly associated himself with any Anti Social or Anti National group or body;

(b) has been convicted and sentenced to imprisonment for an offence which, in the opinion of the State Government, involves moral turpitude; or

(c) is an undischarged insolvent; or

(d) is of unsound mind and stands so declared by a competent court; or

(e) has such other disqualifications as may be prescribed by the State Government.

(3) Every member of the District Police Complaints Authority other than the ex-officio member shall hold office for a period of three years.

(4) The salary or honorarium and other allowances payable to, and the other terms and conditions of service of the non-official members of the District police Complaints Authority shall be such as may be prescribed.

(5) It shall be the duty of the district police complaints authority to ensure that all its members and their staff are regularly trained, interalia about,-

(a) technical and legal issues related to departmental inquiries;

(b) specific forms of human rights violation; and

(c) appropriate handling of victims of police abuse.

(6) Necessary staff required for the functioning of the District Police Complaints Authority shall be provided by Government.

(7) The District Police Complaints Authority shall look into complaints against police officers of and below the rank of Deputy Superintendent of Police and take cognizance of allegations of serious misconduct by the police officers, which would include incidents involving death, grievous hurt or rape in police custody.

(8) The District Police Complaints Authority shall,-

(a) have the power to enquire into misconduct or abuse of power by or against police officers of and below the rank of Deputy Superintendent of Police after giving an opportunity of being heard to him. The Authority shall have the power to investigate any case itself or ask any other agency to investigate and submit a report. The District Police Complaints Authorities shall submit its report to the competent disciplinary authority for appropriate action against the accused officers;

(b) if the complaint contains allegations against any police officer of or above the rank of Deputy Superintendent of Police the District Police Complaints Authority, shall forward the same to the State Complaints Authority, for further action;

(c) forward the complaints of "serious misconduct", received directly by it, to the State Police Complaints Authority for further action:

Provided that District Police Complaints Authority shall not have jurisdiction on the complaints against the police offices where a separate authority is created by any other Act for this purpose.

(9) Each District police Complaints Authority shall prepare and submit to the State police complaints Authority an annual report before the end of each calendar year, inter alia, containing,-

(a) the numbers and types of cases of "serious misconduct" and "misconduct" forwarded by it to the State Police Complaints Authority during the year;

(b) the number and types of cases of "misconduct" referred to it by the complainants upon being dissatisfied by the departmental inquiry into his complaint ;

(c) the number and types of cases referred to in clause (b) above in which advice or direction was issued by it to the police for further action;

(d) such other related administrative and financial matters as may be prescribed.

20E. Powers of the State Police Complaints Authority and District Police Complaints Authority.- The State Police Complaints Authority and District Police Complaints Authority shall, while investigating any matter under this Act, have all the powers of a civil court in trying a suit and in particular, in respect of the following matters, namely:-

(a) summoning and enforcing the attendance of any person from any part of the State and examining him on oath;

(b) requiring the discovery and production of any document;

(c) receiving evidence on affidavits;

(d) requisitioning any public record or copy there of from any court or office;

(e) issuing Commissions for the examination of witnesses and documents; and

(f) any other matter which may be prescribed."

20F. Tenure of officers incharge of police stations, circle, sub-division, district and range - (1) Subject to superannuation, the officers who are in operational duties and incharge of Police station, Circle, Sub-division may have a minimum tenure of one year:

Provided that any such officer may be transferred by the Police Establishment Board or by the Government in consultation with the Police Establishment Board, from his post before the expiry of the above minimum tenure consequent upon,-

(a) promotion to a higher post; or

(b) on conviction, or charges having been framed by a court of Law in a criminal offence;

(c) imposition of punishment of dismissal, removal, discharge or compulsory retirement from service or of reduction to a lower rank awarded under the relevant discipline and Appeal Rules; or

(d) suspension from the Service in accordance with the provisions of the said rules; or

(e) incapacitation by physical or mental illness or otherwise becoming unable to discharge his functions and duties; or

(f) the need to fill up a vacancy caused by promotion, transfer or retirement; or

(g) on request of the officer concerned in writing:

Provided further that the Government may, after consultation with the Police Establishment Board, may transfer an officer before the expiry of his tenure on account of misconduct or gross negligence or an act of moral turpitude.

(2) Subject to superannuation, the Inspector General of Police in charge of Range or Superintendent of Police in charge of a District including Additional Superintendent of Police who are on operational duties in the field shall have a minimum tenure of one year:

Provided that the Government may transfer an officer of the above category within a period of one year for reasons of gross misconduct or negligence or an act of moral turpitude or under circumstances enumerated in the proviso to sub-section (1).

20G. Units in a Police station.- (1) The Police station shall be headed by a Station House officer not below the rank of an Inspector of Police or Sub-inspector of Police as the Government may by order determine.

(2) In each police station there shall be two units, namely:-

(a) one exclusively dealing with crime investigation consisting of such number of police officers as Director General of Police and Inspector General of Police may by order determine to deal with detection and investigation of crime; and

(b) another unit dealing with Law and Order consisting of such number of police officers as may be determined by the Director General of Police and Inspector General of Police by order, for the purpose of maintenance of Law and Order, traffic and prevention of crimes:

Provided that in any Police Station where the average annual number of crimes registered exceeds such number as prescribed, there shall be two Police Sub-Inspectors or Inspectors of Police, as the case may be one each for crime investigation and law and order units separately:

Provided further that the police personnel assigned to either of the unit shall not be deployed for any other purpose without the written permission of the Superintendent of Police of the District or the Commissioner of Police as the case may be."

4. Repeal and savings.- (1) The Karnataka Police (Amendment) Ordinance, 2012 (Karnataka Ordinance No.2 of 2012) is hereby repealed.

(2) Notwithstanding such repeal anything done or any action taken under the principal Act as amended by the said Ordinance shall be deemed to have been done or taken under the principal Act as amended by this Act.

STATEMENT OF OBJECTS AND REASONS

In order to comply with the directions of the Hon'ble Supreme Court of India in writ application No. 310/1996 (Shri. Prakash Singh and others v/s State) in respect of Police Reforms, it was considered necessary to amend the Karnataka Police Act, 1963 (Karnataka Act 4 of 1964).

As the matter was urgent and both the Houses of the Karnataka State Legislature were not in session, the Karnataka Police (Amendment) Ordinance, 2012 (Karnataka Ordinance No.2 of 2012) was promulgated on 01.06.2012.

This Bill seeks to replace the said Ordinance.

Hence the Bill.

FINANCIAL MEMORANDUM

There will be a probable recurring expenditure of Rupees 5.3 crores per Annum.

EXPLANATORY STATEMENT AS REQUIRED BY RULE 77 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE COUNCIL

In order to comply with the directions of the Hon'ble Supreme Court of India in writ application No. 310/1996 (Shri. Prakash Singh and others v/s State) in respect of Police Reforms, it was considered necessary to amend the Karnataka Police Act, 1963 (Karnataka Act 4 of 1964).

As the matter was urgent and both the Houses of the Karnataka State Legislature were not in session, the Karnataka Police (Amendment) Ordinance, 2012 (Karnataka Ordinance No.2 of 2012) was promulgated on 01.06.2012.

MEMORANDUM REGARDING DELEGATED LEGISLATION

Clause 3: (1) Section 20A empowers the Government to make rules regarding,-

(a) the terms and conditions of appointment and allowances payable to a retired judge of the High Court, who is appointed as a member of the State Security Commission; and

(b) regarding any other functions of the Commission.

(2) Section 20B empowers the Government to make rules regarding such other functions to be performed by the Police Establishment Board.

(3) Section 20C,-

(i) empowers the Government to make rules regarding such other disqualifications for being appointed as a member of the State Police Complaints Authority;

(ii) empowers the Government to make rules regarding the salary or honorarium and other allowances and the other terms and conditions of service of the members of the State Police Complaints Authority;

(iii) empowers the Government to make rules regarding such other related administrative and financial matters to be included in the Annual Report of the State Police Complaints Authority.

(4) Section 20D,-

(i) empowers the Government to make rules regarding such other disqualifications for being appointed as a member of the District Police Complaints Authority;

(ii) empowers the Government to make rules regarding the salary or honorarium and other allowances payable to and the other terms and conditions of service of the members of the District Police Complaints Authority;

(iii) empowers the Government to make rules regarding such other related administrative and financial matters to be included in the Annual Report of the District Police Complaints Authority.

(5) Section 20E empowers the Government to make rules regarding any other matter with respect to which the State Police Complaints Authority and the District Police Complaints Authority shall have the powers of a Civil Court while investigating any matter under the Act.

The above delegation is normal in character.

R. ASHOK
Deputy Chief Minister
(Minister for Home and Transport)

V. SHREESH
Secretary
Karnataka Legislative Council

ANNEXURE

Extract from the Karnataka Police Act, 1963

(Karnataka Act 4 of 1964)

xx **xx** **xx**

(4) ಮೊದಲ ಕುಲಾಧಿಪತಿಯವರು, ಮೊದಲ ಕುಲಪತಿಯವರು, ಪ್ರಬಂಧಕ ಮಂಡಳಿಯ ಮೊದಲ ಸದಸ್ಯರುಗಳು, ವ್ಯವಸ್ಥಾಪನಾ ಮಂಡಳಿಯ ಹಾಗೂ ಶೈಕ್ಷಣಿಕ ಪರಿಷತ್ತಿನ ಮೊದಲ ಸದಸ್ಯರುಗಳು ಮತ್ತು ಇನ್ನು ಮುಂದೆ, ಅಂಥ ಅಧಿಕಾರಿಗಳು ಅಥವಾ ಸದಸ್ಯರುಗಳಾಗಬಹುದಾದಂಥ ಎಲ್ಲಾ ವ್ಯಕ್ತಿಗಳು, ಅಂಥ ಪದ ಅಥವಾ ಸದಸ್ಯತ್ವವನ್ನು ಹೊಂದಿರುವುದು ಮುಂದುವರೆಯುವವರೆಗೆ, ಒಂದು ನಿಗಮಿತ ನಿಕಾಯವನ್ನು ರಚಿಸತಕ್ಕದ್ದು ಮತ್ತು ಅದು ವಿಶ್ವವಿದ್ಯಾಲಯದ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೊಳಗಾಗಬಹುದು.

(5) (2)ನೇ ಉಪಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾಲಯವು ಸ್ಥಾಪನೆಗೆ ಮಂಜೂರಾತಿಯಾದ ಮೇಲೆ, ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ, ನ್ಯಾಸವು ಆರ್ಜಿಸಿದ, ಸೃಜಿಸಿದ, ಏರ್ಪಾಟು ಮಾಡಿಕೊಂಡ ಅಥವಾ ಕಟ್ಟಲ್ಪಟ್ಟ ಭೂಮಿ ಮತ್ತು ಇತರ ಸ್ಥಿರ ಮತ್ತು ಚರ ಸ್ವತ್ತು, ವಿಶ್ವವಿದ್ಯಾಲಯದಲ್ಲಿ ನಿಹಿತವಾಗಿರತಕ್ಕದ್ದು.

(6) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(7) ವಿಶ್ವವಿದ್ಯಾಲಯದಲ್ಲಿನ ಭೂಮಿ, ಕಟ್ಟಡ ಮತ್ತು ಇತರ ಸ್ವತ್ತುಗಳನ್ನು ವಿಶ್ವವಿದ್ಯಾಲಯದ ಉದ್ದೇಶಗಳಿಗೆ ಆನುಷಂಗಿಕವಾಗಿರುವುದನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

5. ಅನುದಾನಗಳು ಮತ್ತು ಹಣಕಾಸು ನೆರವು.– ವಿಶ್ವವಿದ್ಯಾಲಯವು ಸ್ವಂತ ಧನಮೂಲ ಉಳ್ಳದ್ದಾಗಿರತಕ್ಕದ್ದು ಮತ್ತು ರಾಜ್ಯದಿಂದ ಅಥವಾ ರಾಜ್ಯದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಇತರ ಸಂಸ್ಥೆ ಅಥವಾ ನಿಗಮದಿಂದ ಯಾವುದೇ ನಿರ್ವಹಣಾ ಸಹಾಯ ಅನುದಾನ ಅಥವಾ ಯಾವುದೇ ಹಣಕಾಸು ನೆರವನ್ನು ಹಕ್ಕಿನಿಂದ ಕೇಳತಕ್ಕದ್ದಲ್ಲ ಅಥವಾ ಅದನ್ನು ಪಡೆಯಲು ಹಕ್ಕನ್ನು ಹೊಂದಿರತಕ್ಕದ್ದಲ್ಲ:

ಪರಂತು, ರಾಜ್ಯವು,–

(ಎ) ಇತರ ರಾಜ್ಯ ಸರ್ಕಾರದ ಸಂಘಟನೆಗಳಿಗೆ ಹಣಕಾಸು ನೆರವನ್ನು ಒದಗಿಸುತ್ತಿರುವಂಥದ್ದೇ ಸಂಶೋಧನೆ, ಅಭಿವೃದ್ಧಿ ಮತ್ತಿತರ ಚಟುವಟಿಕೆಗಳಿಗಾಗಿ; ಅಥವಾ

(ಬಿ) ಸರ್ಕಾರದಿಂದ ನೆರವನ್ನು ಪಡೆಯುವ ಯಾವುದೇ ನಿರ್ದಿಷ್ಟ ಸಂಶೋಧನೆ ಅಥವಾ ಕಾರ್ಯಕ್ರಮಗಳಿಗಾಗಿ; ಮತ್ತು

(ಸಿ) ರಾಜ್ಯ ಕಾರ್ಯನೀತಿಯ ಬದಲಾವಣೆಗೆ ಒಳಪಟ್ಟು ಅಥವಾ ಅನ್ಯಥಾ ಇದೇ ಬಗೆಯ ವಿಶ್ವವಿದ್ಯಾಲಯಗಳಿಗಾಗಿ ಅಥವಾ ಅವುಗಳ ಪ್ರಯೋಜನಕ್ಕಾಗಿ,

–ಅನುದಾನದ ಮೂಲಕ ಅಥವಾ ಅನ್ಯಥಾ ಹಣಕಾಸು ಬೆಂಬಲವನ್ನು ಒದಗಿಸಬಹುದು:

ಮತ್ತು ಪರಂತು, ವಿಶ್ವವಿದ್ಯಾಲಯವು, ಯಾವುದೇ ಇತರ ಮೂಲದಿಂದ ಯಾವುದೇ ಆರ್ಥಿಕ ನೆರವನ್ನು ಸ್ವೀಕರಿಸಬಹುದು.

6. ಘಟಕ ಕಾಲೇಜು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ.–ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯವು ಸ್ಥಾಪನೆಯಾದ ತರುವಾಯ ಐದು ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ಇತರ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಗುಣಮಟ್ಟಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯವು, ರಾಜ್ಯದಲ್ಲಿ ತನಗೆ ಸೂಕ್ತವೆನಿಸುವಂಥ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಹೊಂದಿರಬಹುದು.

7. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.– ವಿಶ್ವವಿದ್ಯಾಲಯವು, ತನ್ನ ಭವಿಷ್ಯದ್‌ದೃಷ್ಟಿ ಮತ್ತು ಧ್ಯೇಯೋದ್ದೇಶಗಳನ್ನು ಸಾಧಿಸಲು ಈ ಮುಂದಿನ ವಿಸ್ತೃತ ಕಾರ್ಯತಂತ್ರಗಳನ್ನು ಕೈಗೊಳ್ಳಬಹುದು.–

(i) ತಾಂತ್ರಿಕ ಶಿಕ್ಷಣ, ಹಣಕಾಸು, ವ್ಯವಸ್ಥಾಪನೆ, ಬೋಧನೆ–ಕಲಿಕೆ, ವೃತ್ತಿ ಶಿಕ್ಷಣದಲ್ಲಿಯ ತಾಂತ್ರಿಕತೆ, ವೈದ್ಯಕೀಯ, ದಂತವೈದ್ಯಕೀಯ, ಔಷಧಶಾಸ್ತ್ರ, ನರ್ಸಿಂಗ್, ತತ್ಸಬಂಧಿ ಆರೋಗ್ಯ ವಿಷಯಗಳನ್ನು ಒಳಗೊಂಡ ಆರೋಗ್ಯ ಪಾಲನೆಯಂಥ ಕ್ಷೇತ್ರಗಳಲ್ಲಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ಇತರೆ ಸಂಬಂಧಪಟ್ಟ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ವಿಷಯಗಳಲ್ಲಿ ಶಿಕ್ಷಣ, ಬೋಧನೆ, ತರಬೇತಿ, ಸಂಶೋಧನೆ, ಸಮಾಲೋಚನೆ ಮತ್ತು ಅಭಿವೃದ್ಧಿಗೆ ಅವಕಾಶವನ್ನು ಕಲ್ಪಿಸುವುದು ಮತ್ತು ಈ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಲು, ಪ್ರಗತಿಯನ್ನು ಸಾಧಿಸಲು ಮತ್ತು ಜ್ಞಾನವನ್ನು ಪ್ರಸಾರ ಮಾಡಲು ಉಪಬಂಧಗಳನ್ನು ಕಲ್ಪಿಸುವುದು;

(ii) ಉನ್ನತ ಹಾಗೂ ವೃತ್ತಿ ಶಿಕ್ಷಣ ಕ್ಷೇತ್ರಗಳಲ್ಲಿನ ಬೋಧಕರಿಗಾಗಿ, ಸರ್ಕಾರದಲ್ಲಿ, ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಕಾರ್ಯ ನಿರ್ವಹಿಸುವ ಆಡಳಿತಗಾರರು ಮತ್ತು ವೃತ್ತಿಪರರಿಗಾಗಿ ಹಾಗೂ ಇತರ ವ್ಯವಸ್ಥೆಗಳಲ್ಲಿನ ಅಭಿವೃದ್ಧಿಶೀಲ ವೃತ್ತಿಪರರಿಗಾಗಿ ಉನ್ನತ ಗುಣಮಟ್ಟದ ತರಬೇತಿ, ಸಾಮರ್ಥ್ಯ ನಿರ್ಮಾಣ ಮತ್ತು ಅಭಿವೃದ್ಧಿ ಪದ್ಧತಿಗಳನ್ನು ವಿನ್ಯಾಸಗೊಳಿಸುವುದು ಮತ್ತು ನೀಡುವುದು;

(iii) ಗುಣಮಟ್ಟದ ಶಿಕ್ಷಣಕ್ಕೆ ಕೊಡುಗೆಯನ್ನು ನೀಡುವುದಕ್ಕಾಗಿ ಸಂಶೋಧನಾ ಕೇಂದ್ರಗಳನ್ನು ಅಭಿವೃದ್ಧಿ ಪಡಿಸುವುದು;

(iv) ವಿಶ್ವವಿದ್ಯಾಲಯ ಅನುದಾನಗಳ ಆಯೋಗದ ಗುಣಮಟ್ಟಗಳಿಗೆ ಅನುಸಾರವಾಗಿ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಕರ್ನಾಟಕದಲ್ಲಿನ ವಿವಿಧ ಸ್ಥಳಗಳಲ್ಲಿ ಕ್ಯಾಂಪಸ್ಸುಗಳನ್ನು ಸ್ಥಾಪಿಸುವುದು ಮತ್ತು ಅಧ್ಯಯನ ಕೇಂದ್ರಗಳನ್ನು, ಘಟಕ ಕಾಲೇಜುಗಳನ್ನು ಮತ್ತು ಪ್ರಾದೇಶಿಕ ಕೇಂದ್ರಗಳನ್ನು ಹೊಂದುವುದು ಮತ್ತು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಮತ್ತು ಸಾಮಾಜಿಕ ಹಾಗೂ ಮಾನವ ಅಭಿವೃದ್ಧಿಯಲ್ಲಿಯ ಶೈಕ್ಷಣಿಕ ಬದಲಾವಣೆಗಳ ಬಗ್ಗೆ ಅರಿವನ್ನುಂಟು ಮಾಡುವುದು ಮತ್ತು ಆ ಬಗ್ಗೆ ಕೊಡುಗೆಯನ್ನು ನೀಡುವುದು.

(v) ಸಂಬಂಧಪಟ್ಟ ರಾಜ್ಯ ಸರ್ಕಾರವು ಕಾಲಕಾಲಕ್ಕೆ ತಿಳಿಸಲಾದ ಗುಣಮಟ್ಟಗಳಿಗೆ ಅನುಸಾರವಾಗಿ ಲಕ್ಷಾಂತರ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಶೈಕ್ಷಣಿಕ ಆಡಳಿತಗಾರರಿಗೆ ಮತ್ತು ಅಭಿವೃದ್ಧಿಶೀಲ ವೃತ್ತಿಪರರಿಗೆ ಕೈಗೆಟುಕುವಂತೆ ನಿರಂತರ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು;

(vi) ನಿರ್ಧರಣೆಯ ವಿವಿಧ ವಿಧಾನಗಳ ಮೂಲಕ ಮೌಲ್ಯಮಾಪನ ಮಾಡಿದ ಶೈಕ್ಷಣಿಕ ಕಾರ್ಯವನ್ನು ಅನುಸಾರವಾಗಿ ಯಶಸ್ವಿಯಾಗಿ ಪೂರ್ಣಗೊಳಿಸಿದುದರ ಆಧಾರದ ಮೇಲೆ ಪದವಿಗಳನ್ನು, ಡಿಪ್ಲೋಮೊಗಳನ್ನು, ಪ್ರಮಾಣಪತ್ರಗಳನ್ನು ಮತ್ತು ಯಶೋಪತ್ರ ಪ್ರದಾನದಂಥ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು;

(vii) ವಿದ್ಯಾರ್ಥಿಗಳಿಗೆ, ಬೋಧಕ ಸದಸ್ಯರಿಗೆ ಮತ್ತು ಇತರರಿಗೆ ನಿರ್ದಿಷ್ಟ ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಕ್ರಮಗಳು, ತರಬೇತಿ ಕಾರ್ಯಕ್ರಮಗಳು ಮತ್ತು ವಿಚಾರ ವಿನಿಯಮಯ ಕಾರ್ಯಕ್ರಮಗಳನ್ನು ಪರಿಕಲ್ಪಿಸಲು, ವಿನ್ಯಾಸಗೊಳಿಸಲು, ಅಭಿವೃದ್ಧಿಪಡಿಸಲು ಮತ್ತು ನೀಡಲು ಯಾವುವೇ ಇತರ ವಿಶ್ವವಿದ್ಯಾಲಯಗಳು ಸಂಶೋಧನಾ ಸಂಸ್ಥೆಗಳು, ಲಾಭರಹಿತ ಸಂಘಟನೆಗಳು, ಕೈಗಾರಿಕಾ ಸಂಘ, ವೃತ್ತಿಪರ ಸಂಘಗಳು ಅಥವಾ ಇತರ ಸಂಘಗಳೊಂದಿಗೆ ಸಹಯೋಗವನ್ನು ಕಲ್ಪಿಸುವುದು;

(viii) ವಿಚಾರ ಸಂಕೀರ್ಣಗಳು, ಸಮ್ಮೇಳನಗಳು, ಕಾರ್ಯಾಂಗ ಶಿಕ್ಷಣ ಕಾರ್ಯಕ್ರಮಗಳು, ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು, ಪ್ರಕಟಣೆಗಳು ಮತ್ತು ತರಬೇತಿ ಕಾರ್ಯಕ್ರಮಗಳು ಮತ್ತು ಕಾರ್ಯಸೂಚಿಗಳ ಮೂಲಕ ಜ್ಞಾನ ಪ್ರಸಾರ ಮಾಡುವುದು ಮತ್ತು ಶಿಕ್ಷಣ ಮತ್ತು ತತ್ಸಂಬಂಧಿತ ಅಭಿವೃದ್ಧಿ ಕ್ಷೇತ್ರಗಳ ವಿಷಯಗಳ ಬಗ್ಗೆ ಸಾರ್ವಜನಿಕ ಚರ್ಚೆಯನ್ನು ಏರ್ಪಡಿಸುವುದು;

(ix) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಇತರ ಯಾವುವೇ ಉತ್ತಮ ಗುಣಮಟ್ಟದ ಸಂಸ್ಥೆಗಳೊಂದಿಗೆ ಸಹಭಾಗಿಗಳಾಗಿ ವಿಶ್ವವಿದ್ಯಾಲಯದ ಬೋಧಕ ವೃಂದ (ಫ್ಯಾಕಲ್ಟಿ) ಮತ್ತು ಸಂಶೋಧಕರ ಅಭಿವೃದ್ಧಿ ಮತ್ತು ತರಬೇತಿಗಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು;

(x) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಯಾವುದೇ ಸಂಸ್ಥೆಯೊಂದಿಗೆ ಜೊತೆಗೂಡಿ ಸಂಶೋಧನೆಯನ್ನು ನಡೆಸುವುದು ಮತ್ತು ಸಮರ್ಥನೆಗೊಳಿಸುವುದು.

(xi) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಮುಂದುವರಿಸುವುದಕ್ಕಾಗಿ ಮತ್ತು ಉತ್ತೇಜಿಸುವುದಕ್ಕಾಗಿ ಅವಶ್ಯಕವಾದ ಮತ್ತು ಯುಕ್ತವಾದ ಕ್ರಮಗಳನ್ನು ಕೈಗೊಳ್ಳುವುದು;

(xii) ಶಿಕ್ಷಣ ಮತ್ತು ಇತರ ಅಭಿವೃದ್ಧಿ ವಲಯಗಳನ್ನು ವಿಸ್ತರಿಸುವುದಕ್ಕಾಗಿ ಸರ್ಕಾರವು ಅನುಮೋದಿಸಬಹುದಾದಂತೆ ಯಾವುವೇ ಧ್ಯೇಯೋದ್ದೇಶಗಳನ್ನು ಮುಂದುವರಿಸುವುದು.

8. ವಿಶ್ವವಿದ್ಯಾಲಯದ ಅಧಿಕಾರಗಳು.– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯದ ಅನುದಾನ ಆಯೋಗದ ಗುಣಮಟ್ಟಗಳಿಗೆ ಅನುಸಾರವಾಗಿ ಪರಿನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿರ್ಧರಿಸಬಹುದಾದ ಅಂಥ ಕ್ಯಾಂಪಸ್ಸುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಕರ್ನಾಟಕದಲ್ಲಿ ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ii) ವಿಶ್ವವಿದ್ಯಾಲಯದ ಉದ್ದೇಶವನ್ನು ಕಾರ್ಯರೂಪಕ್ಕೆ ತರುವಲ್ಲಿ ಅಗತ್ಯವಾಗಬಹುದಾದ ಅಥವಾ ಕಾರ್ಯಸಾಧ್ಯವಾಗಬಹುದಾದ ಎಲ್ಲಾ ಅಂಥ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದು;

(iii) ಪರಿನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ಮತ್ತು ಷರತ್ತುಗಳಿಗೊಳಪಟ್ಟು ಪದವಿಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನಮಾಡುವುದು;

(iv) ಪರಿನಿಯಮಗಳನ್ವಯ ಸಂಶೋಧನಾ ವೇತನಗಳು (ಫೆಲೋಶಿಪ್‌ಗಳು), ವಿದ್ಯಾರ್ಥಿ ವೇತನಗಳು ಮತ್ತು ಬಹುಮಾನಗಳು, ಅವಾರ್ಡುಗಳು, ಪಾರಿತೋಷಕಗಳು ಇತ್ಯಾದಿಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(v) ಪರಿನಿಯಮಗಳಲ್ಲಿ ಅಥವಾ ಸಂದರ್ಭಾನುಸಾರವಾಗಿ ನಿಯಮಗಳಲ್ಲಿ ನಿಗದಿಪಡಿಸಬಹುದಾದ ಅಂಥ ಶುಲ್ಕಗಳು, ಬಿಲ್ಲುಗಳು, ಖರೀದಿ ಪಟ್ಟಿಗಳನ್ನು ಕೇಳಿಪಡೆದುಕೊಳ್ಳುವುದು ಮತ್ತು ಸ್ವೀಕರಿಸುವುದು ಹಾಗೂ ಚಾರ್ಜುಗಳನ್ನು ವಸೂಲು ಮಾಡುವುದು;

(vi) ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪಠ್ಯೇತರ ಚಟುವಟಿಕೆಗಳಿಗೆ ಅವಕಾಶಗಳನ್ನು ಕಲ್ಪಿಸುವುದು;

(vii) ವಿಶ್ವವಿದ್ಯಾಲಯದ ಅಥವಾ ಘಟಕ ಕಾಲೇಜಿನ, ಕ್ಯಾಂಪಸುಗಳ, ಪ್ರಾದೇಶಿಕ ಕೇಂದ್ರಗಳ, ಅಧ್ಯಯನ ಕೇಂದ್ರಗಳ ಫ್ಯಾಕಲ್ಟಿ, ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದು;

(viii) ವಿಶ್ವವಿದ್ಯಾಲಯದ ಅಥವಾ ಒಂದು ಘಟಕ ಕಾಲೇಜಿನ ಅಥವಾ ಕ್ಯಾಂಪಸ್ಸಿನ, ಪ್ರಾದೇಶಿಕ ಕೇಂದ್ರದ, ಅಧ್ಯಯನ ಕೇಂದ್ರದ ಉದ್ದೇಶಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದಿರುವ, ಯಾವುದೇ ರೀತಿಯ ಸ್ವಯಂ ದೇಣಿಗೆಗಳು ಮತ್ತು ಕೊಡುಗೆಗಳನ್ನು ಸ್ವೀಕರಿಸುವುದು ಮತ್ತು ನ್ಯಾಸ ಮತ್ತು ದತ್ತಿ ಸ್ವತ್ತುಗಳೂ ಸೇರಿದಂತೆ, ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಆರ್ಜಿಸುವುದು, ಹೊಂದಿರುವುದು, ನಿರ್ವಹಿಸುವುದು, ನಡೆಸುವುದು ಮತ್ತು ಹಸ್ತಾಂತರ ಮಾಡುವುದು;

(ix) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು ಹಾಗೂ ವಿಶ್ವವಿದ್ಯಾಲಯದ ಅಥವಾ ಘಟಕ ಕಾಲೇಜಿನ ವಿದ್ಯಾರ್ಥಿಗಳಿಗೆ ವಸತಿ ಸ್ಥಳಗಳನ್ನು ಗುರುತು ಮಾಡುವುದು;

(x) ವಸತಿಯ ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಣ ಮಾಡುವುದು ಹಾಗೂ ವಿದ್ಯಾರ್ಥಿಗಳು ಮತ್ತು ಎಲ್ಲಾ ಪ್ರವರ್ಗಗಳ ಸಿಬ್ಬಂದಿಗಳಲ್ಲಿ ಶಿಸ್ತು ನಿಯಂತ್ರಣ ಮಾಡುವುದು ಮತ್ತು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ನಡತೆ ಸಂಹಿತೆಯನ್ನು ರೂಪಿಸುವುದೂ ಒಳಗೊಂಡಂತೆ, ಅಂಥ ಸಿಬ್ಬಂದಿಗಳ ಸೇವಾಷರತ್ತುಗಳನ್ನು ನಿರೂಪಿಸುವುದು;

(xi) ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಬೆಂಬಲ ಸಿಬ್ಬಂದಿಯ ಹುದ್ದೆಗಳನ್ನು ಮತ್ತು ಇತರ ಅವಶ್ಯ ಹುದ್ದೆಗಳನ್ನು ಸೃಜಿಸುವುದು;

(xii) ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳೊಡನೆ ಸಹಕರಿಸುವುದು ಮತ್ತು ಸಹಯೋಗ ಹೊಂದುವುದು;

(xiii) ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಯಾವ ರೀತಿಯಲ್ಲಿ ಸಂಘಟಿಸಬಹುದು ಎಂಬುದಕ್ಕೆ ಉಪಬಂಧ ಕಲ್ಪಿಸುವುದು;

(xiv) ಶಿಕ್ಷಕರಿಗೆ, ಪಾಠಗಳನ್ನು ರಚಿಸುವವರಿಗೆ, ಮೌಲ್ಯಮಾಪಕರಿಗೆ ಮತ್ತಿತರ ಶೈಕ್ಷಣಿಕ ಸಿಬ್ಬಂದಿಗೆ ಪುನರ್ಮನನ ವ್ಯಾಸಂಗಕ್ರಮಗಳು, ಅಭಿಮುಖ ವ್ಯಾಸಂಗ ಕ್ರಮಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮತ್ತಿತರ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ನಡೆಸುವುದು;

(xv) ಶೈಕ್ಷಣಿಕ ಪರಿಷತ್ತಿನ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯಕ್ಕೆ ಅಥವಾ ಘಟಕ ಕಾಲೇಜಿಗೆ, ಪ್ರಾದೇಶಿಕ ಕೇಂದ್ರಗಳಿಗೆ, ಅಧ್ಯಯನ ಕೇಂದ್ರಗಳಿಗೆ ಪ್ರವೇಶವನ್ನು ನೀಡುವುದಕ್ಕೆ ಮತ್ತು ಈ ಅಧಿನಿಯಮದಲ್ಲಿ ಕಲ್ಪಿಸಿದ ವ್ಯಾಪ್ತಿಗಿಂತ ಕಡಿಮೆಯಿಲ್ಲದಂತೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡುವುದಕ್ಕೆ ಮಾನಕ ಗುಣಮಟ್ಟಗಳನ್ನು ನಿರ್ಧರಿಸುವುದು;

(xvi) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಅವಶ್ಯವಾಗಬಹುದಾದಂಥ ಇತರ ಎಲ್ಲಾ ಕ್ರಮಗಳನ್ನು ಅಥವಾ ಕಾರ್ಯಗಳನ್ನು, ಅವು ಮೇಲೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಅಥವಾ ಇಲ್ಲದಿರಲಿ, ಕೈಗೊಳ್ಳುವುದು;

(xvii) ಪರೀಕ್ಷೆಗಳ ಆಧಾರದ ಮೇಲೆ ಅಥವಾ ಸರ್ಕಾರದಿಂದ ಅನುಮೋದಿತವಾದ ಇತರ ಯಾವುದೇ ಮೌಲ್ಯಮಾಪನ ವಿಧಾನದ ಆಧಾರದ ಮೇಲೆ ನೀಡಲು ಪದವಿಗಳು, ಡಿಪ್ಲೋಮಾಗಳು, ಪ್ರಮಾಣಪತ್ರಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಸ್ಥಾಪಿಸುವುದು;

(xviii) ಫಿಲಂಗಳು, ಕ್ಯಾಸೆಟ್‌ಗಳು, ಧ್ವನಿಸುರುಳಿಗಳು, ದೃಶ್ಯಸುರುಳಿಗಳು, ಸಿ.ಡಿ., ವಿ.ಸಿ.ಡಿ. ಮತ್ತು ಇತರ ತಂತ್ರಾಂಶಗಳೂ ಹಾಗೂ ಇತರ ಸಂಬಂಧಿತ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ ಸೇರಿದಂತೆ ಬೋಧಕ ಸಾಮಗ್ರಿಗಳನ್ನು ತಯಾರಿಸುವುದಕ್ಕಾಗಿ ಅವಕಾಶ ಕಲ್ಪಿಸುವುದು;

(xix) ಪ್ರಬಂಧಕ ಮಂಡಳಿಯ ಅನುಮೋದನೆಯೊಡನೆ ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ಸ್ವತ್ತುಗಳನ್ನು ಭದ್ರತೆಯಾಗಿ ನೀಡಿ ಅಥವಾ ನೀಡದೆ ಹಣವನ್ನು ಪಡೆಯುವುದು, ಸಂಗ್ರಹಿಸುವುದು, ಚಂದಾದಾರರಾಗುವುದು ಮತ್ತು ಸಾಲ ಪಡೆಯುವುದು;

(xx) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಯಾವುವೇ ಇತರ ಶೈಕ್ಷಣಿಕ ಸಂಸ್ಥೆಗಳ ಆಡಳಿತವನ್ನು ಪಡೆದುಕೊಳ್ಳುವುದು, ವಹಿಸಿಕೊಳ್ಳುವುದು ಮತ್ತು ನಡೆಸುವುದು;

(xxi) ವ್ಯವಸ್ಥಾಪನಾ ಮಂಡಳಿಯ ಪೂರ್ವಾನುಮೋದನೆಯೊಂದಿಗೆ ಸ್ವತ್ತುಗಳನ್ನು ಆರ್ಜಿಸುವುದು;

(xxii) ವಿಶ್ವವಿದ್ಯಾಲಯದ ಮೇಲಿನ ಉದ್ದೇಶಗಳಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಯಾವುದೇ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದು.

9. ವಿಶ್ವವಿದ್ಯಾಲಯವು ಎಲ್ಲಾ ವರ್ಗಗಳು, ಜಾತಿಗಳು, ಮತ, ಲಿಂಗ ಅಥವಾ ರಾಷ್ಟ್ರ ಭೇದವಿಲ್ಲದೆ ಎಲ್ಲರಿಗೂ ಮುಕ್ತವಾಗಿರತಕ್ಕದ್ದು.– ವಿಶ್ವವಿದ್ಯಾಲಯದ ಪ್ರವೇಶಗಳು ವರ್ಗ, ಜಾತಿ, ಮತ, ಲಿಂಗ ಅಥವಾ ರಾಷ್ಟ್ರ ಭೇದವಿಲ್ಲದೆ ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು. ಎಲ್ಲಾ ಪ್ರವೇಶಗಳನ್ನು ಅರ್ಹತಾ ಪರೀಕ್ಷೆಗಳಲ್ಲಿನ ಅರ್ಹತೆಯ ಆಧಾರದ ಮೇಲೆ ಮಾಡತಕ್ಕದ್ದು:

ಪರಂತು, ವಿಶ್ವವಿದ್ಯಾಲಯದ ಎಲ್ಲಾ ವೃತ್ತಿಪರ ಮತ್ತು ತಾಂತ್ರಿಕ ವ್ಯಾಸಂಗ ಕ್ರಮಗಳಿಗೆ ಪ್ರವೇಶಗಳ ಶೇಕಡಾ ಐವತ್ತು ಅನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮೀಸಲಿಡತಕ್ಕದ್ದು ಮತ್ತು ರಾಜ್ಯ ಸರ್ಕಾರದ ಮೂಲಕವಾಗಲೀ ಅಥವಾ ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಅಥವಾ ವಿಶ್ವವಿದ್ಯಾಲಯಗಳ ಸಂಘದ ಮೂಲಕವಾಗಲೀ ನೆಡಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕವಾಗಲೀ ಪ್ರವೇಶವನ್ನು ನೀಡತಕ್ಕದ್ದು.

ಮತ್ತು ಪರಂತು, ವಿಶ್ವವಿದ್ಯಾಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿನ ಒಟ್ಟು ಸೀಟುಗಳ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದ ಸೀಟುಗಳಿಗೆ ಪ್ರವೇಶವನ್ನು ಕರ್ನಾಟಕ ರಾಜ್ಯದಲ್ಲಿ ನಿವಾಸಿಗಳಾಗಿರುವ ವಿದ್ಯಾರ್ಥಿಗಳಿಗೆ ಕಾಯ್ದಿರಿಸತಕ್ಕದ್ದು.

ಅಲ್ಲದೆ ಪರಂತು ವಿಶ್ವವಿದ್ಯಾಲಯವು ಒಪ್ಪಿಗೆಯ ಕರಾರಿನ ಮೂಲಕ ಸರ್ಕಾರವು ನಿರ್ಧರಿಸಬಹುದಾದಂತೆ ಅಷ್ಟರ ಮಟ್ಟಿಗೆ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಅಥವಾ ಅಶಕ್ತ ವರ್ಗದ ವಿದ್ಯಾರ್ಥಿಗಳಿಗೆ ರಿಯಾಯಿತಿ ಸೀಟುಗಳನ್ನು ಒದಗಿಸತಕ್ಕದ್ದು.

10. ರಾಷ್ಟ್ರೀಯ ಅಧಿಮಾನ್ಯತೆ.– ವಿಶ್ವವಿದ್ಯಾಲಯವು ಪ್ರಾರಂಭವಾದ ತರುವಾಯ ಆದಷ್ಟು ಬೇಗನೆ ಸಂಬಂಧಪಟ್ಟ ಶಾಸನಾತ್ಮಕ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳಿಂದ ಅಧಿಮಾನ್ಯತೆಯನ್ನು ಕೋರತಕ್ಕದ್ದು ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ನಡೆಸುವ ಎಲ್ಲಾ ವ್ಯಾಸಂಗ ಕ್ರಮಗಳು ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ವಿನಿಯಮಗಳಿಗೆ ಅನುಸಾರವಾಗಿ ಇರತಕ್ಕದ್ದು.

11. ಪ್ರಾಯೋಜಕ ಸಂಸ್ಥೆಯ ಅಧಿಕಾರಗಳು.– ಪ್ರಾಯೋಜಕ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಇವುಗಳಲ್ಲಿ ಪ್ರತಿಯೊಂದನ್ನು ಪ್ರಾಯೋಜಕ ಸಂಸ್ಥೆಯು ತನ್ನ ವಿವೇಚನಾನುಸಾರ ಚಲಾಯಿಸಬಹುದು, ಎಂದರೆ:–

(i) ಕುಲಾಧಿಪತಿಯವರನ್ನು ನೇಮಿಸುವುದು ಅಥವಾ ಪುನರ್‌ನೇಮಿಸುವುದು ಅಥವಾ ಅವರ ನೇಮಕಾತಿಯನ್ನು ಅಂತ್ಯಗೊಳಿಸುವುದು;

(ii) ವಿಶ್ವವಿದ್ಯಾಲಯದ ಪ್ರಥಮ ಪ್ರಬಂಧಕ ಮಂಡಳಿಯನ್ನು ರಚಿಸುವುದು;

(iii) ಪ್ರಬಂಧಕ ಮಂಡಳಿಯ ಅಧ್ಯಕ್ಷರನ್ನು ನಾಮನಿರ್ದೇಶಿಸುವುದು;

(iv) ಪ್ರಬಂಧಕ ಮಂಡಳಿಯ ಸದಸ್ಯರಾಗಿ ಮೂರು ವ್ಯಕ್ತಿಗಳನ್ನು ನಾಮನಿರ್ದೇಶಿಸುವುದು;

(v) ವ್ಯವಸ್ಥಾಪನಾ ಮಂಡಳಿಯ ಸದಸ್ಯರಾಗಿ ಇಬ್ಬರು ವ್ಯಕ್ತಿಗಳನ್ನು ನಾಮ ನಿರ್ದೇಶಿಸುವುದು;

(vi) ವಿಶ್ವವಿದ್ಯಾಲಯದ ದತ್ತಿ ನಿಧಿಗೆ ದೇಣಿಗೆ ನೀಡಲು ನಿಧಿ ಮೂಲಗಳನ್ನು ನಿರ್ಧರಿಸುವುದು;

(vii) ವಿಶ್ವವಿದ್ಯಾಲಯದ ಹಣದ ವಿನಿಯೋಗ ಮತ್ತು ವೆಚ್ಚ ಮಾಡುವುದನ್ನು ನಿರ್ಧರಿಸುವುದು;

(viii) ಈ ಅಧಿನಿಯಮದಲ್ಲಿ ಉಪಬಂಧಿಸಿರುವ ವಿಧಾನದಲ್ಲಿ ಪ್ರಬಂಧಕ ಮಂಡಳಿಯ ಸಭೆಯಲ್ಲಿಯ ಯಾವುವೇ ವಿವಾದಗಳನ್ನು ಬಗೆಹರಿಸುವುದು;

ಅಧ್ಯಾಯ –III

ವಿಶ್ವವಿದ್ಯಾಲಯದ ಅಧಿಕಾರಿಗಳು

12. ವಿಶ್ವವಿದ್ಯಾಲಯದ ಅಧಿಕಾರಿಗಳು.– ಈ ಮುಂದಿನವರು ವಿಶ್ವವಿದ್ಯಾಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(i) ಸಂದರ್ಶಕರು;

(ii) ಸಹ–ಸಂದರ್ಶಕರು;

(iii) ಕುಲಾಧಿಪತಿಗಳು;

(iv) ಕುಲಪತಿಗಳು;

(v) ಸಹಕುಲಪತಿಗಳು;

(vi) ಕುಲಸಚಿವರು;

(vii) ಹಣಕಾಸು ಅಧಿಕಾರಿ; ಮತ್ತು

(viii) ಪರಿನಿಯಮಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸಬಹುದಾದಂಥ ಇತರ ಅಧಿಕಾರಿಗಳು.

13. ಸಂದರ್ಶಕರು.– (1) ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ವಿಶ್ವವಿದ್ಯಾಲಯದ ಸಂದರ್ಶಕರಾಗಿರತಕ್ಕದ್ದು ಮತ್ತು ಸಂದರ್ಶಕರು ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಯ ಸುಧಾರಣೆಗಾಗಿ ಸಲಹೆಗಳನ್ನು ನೀಡಬಹುದು.

(2) ಸಂದರ್ಶಕರು, ಪದವಿಗಳನ್ನು ಮತ್ತು ಡಿಪ್ಲೋಮೊಗಳನ್ನು ಪ್ರದಾನ ಮಾಡಲು ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಸಂದರ್ಶಕರು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ, ಯಾವುದೇ ಪತ್ರ ಅಥವಾ ಮಾಹಿತಿಯನ್ನು ತರಿಸಿಕೊಳ್ಳುವುದು;

(ii) ಸಂದರ್ಶಕರು, ಅವರು ಸ್ವೀಕರಿಸಿದ ಮಾಹಿತಿಯ ಆಧಾರದ ಮೇಲೆ ವಿಶ್ವವಿದ್ಯಾಲಯಗಳ ಯಾವುದೇ ಪ್ರಾಧಿಕಾರವು ಮಾಡಿದ ಯಾವುದೇ ಆದೇಶ, ನಡೆಸಿದ ವ್ಯವಹರಣೆಗಳು ಅಥವಾ ಕೈಗೊಂಡ ತೀರ್ಮಾನಗಳು, ಈ ಅಧಿನಿಯಮ, ವಿನಿಯಮಗಳು ಅಥವಾ

ನಿಯಮಗಳಿಗೆ ಪೂರಕವಾಗಿಲ್ಲವೆಂದು ಮನಗಂಡರೆ ಅವರು ವಿಶ್ವವಿದ್ಯಾಲಯದ ಹಿತಾಸಕ್ತಿಯಿಂದ ತಾವು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಹೊರಡಿಸಬಹುದು ಮತ್ತು ಹಾಗೆ ಹೊರಡಿಸಿದ ನಿರ್ದೇಶನಗಳನ್ನು ಸಂಬಂಧಪಟ್ಟವರೆಲ್ಲರೂ ಪಾಲಿಸತಕ್ಕದ್ದು.

14. ಸಹ-ಸಂದರ್ಶಕರು.– (1) ಕರ್ನಾಟಕ ಸರ್ಕಾರದ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಶ್ವವಿದ್ಯಾಲಯದ ಸಹ-ಸಂದರ್ಶಕರಾಗಿರತಕ್ಕದ್ದು.

(2) ಸಂದರ್ಶಕರ ಅನುಪಸ್ಥಿತಿಯಲ್ಲಿ ಸಹ-ಸಂದರ್ಶಕರು ಪದವಿಗಳನ್ನು ಮತ್ತು ಡಿಪ್ಲೋಮೊಗಳನ್ನು ಪ್ರದಾನ ಮಾಡಲು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

15. ಕುಲಾಧಿಪತಿಗಳು.– (1) ಕುಲಾಧಿಪತಿಯವರನ್ನು ಪ್ರಾಯೋಜಕ ಸಂಸ್ಥೆಯು ನೇಮಿಸತಕ್ಕದ್ದು.

(2) ಪ್ರಾಯೋಜಕ ಸಂಸ್ಥೆಯ ಸಂಸ್ಥಾಪಿತ ನ್ಯಾಸಧಾರಿಯು ಮೊದಲನೇ ಕುಲಾಧಿಪತಿಗಳಾಗಿರತಕ್ಕದ್ದು, ಅವರು ತಮ್ಮ ಜೀವನಪರ್ಯಂತ ಅಥವಾ ಅವರು ತಮ್ಮ ಪದವನ್ನು ಬಿಟ್ಟುಕೊಡುವವರೆಗೆ ಕುಲಾಧಿಪತಿಗಳಾಗಿ ಪದಧಾರಣ ಮಾಡಿರತಕ್ಕದ್ದು.

(3) ತದನಂತರದ ಕುಲಾಧಿಪತಿಗಳು, ಅಂಥ ನೇಮಕಾತಿಯನ್ನು ಪರಿಗಣಿಸುವ ಸಂದರ್ಭದಲ್ಲಿ ಪ್ರಾಯೋಜಕ ಸಂಸ್ಥೆಯು ನಿರ್ಧರಿಸಬಹುದಾದಂತೆ, ಪ್ರಾಯೋಜಕ ಸಂಸ್ಥೆಯ ನ್ಯಾಸಧಾರಿಯಾಗಿರತಕ್ಕದ್ದು ಅಥವಾ ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಅಥವಾ ಸಾರ್ವಜನಿಕ ಜೀವನ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಮಟ್ಟದ ಛಾಪನ್ನು ಪಡೆದಿರುವ ಅಂಥ ಇತರ ವ್ಯಕ್ತಿಯಾಗಿರತಕ್ಕದ್ದು.

(4) ಹಾಗೆ ನೇಮಕಗೊಂಡ ತದನಂತರದ ಕುಲಾಧಿಪತಿಗಳು ಪ್ರಾಯೋಜಕ ಸಂಸ್ಥೆಯು ನಿರ್ಧರಿಸಬಹುದಾದಂತೆ ಪದಧಾರಣ ಮಾಡತಕ್ಕದ್ದು.

(5) ಕುಲಾಧಿಪತಿಗಳು ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಪರಿನಿಯಮಗಳ ಅಡಿಯಲ್ಲಿ ಅವರಿಗೆ ಪ್ರದಾನ ಮಾಡಬಹುದಾದಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು, ಅವುಗಳಲ್ಲಿ ಈ ಮುಂದಿನ ಅಧಿಕಾರಗಳು ಒಳಗೊಂಡಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುವುದು;

(ii) ಸಂದರ್ಶಕರ ಮತ್ತು ಸಹ-ಸಂದರ್ಶಕರಿಬ್ಬರ ಗೈರುಹಾಜರಿಯಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಘಟಿಕೋತ್ಸವಗಳಲ್ಲಿ ಅಧ್ಯಕ್ಷತೆಯನ್ನು ವಹಿಸುವುದು;

(iii) ವಿಶ್ವವಿದ್ಯಾಲಯದ ಪ್ರಬಂಧಕ ಮಂಡಳಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದು;

(iv) ಈ ಅಧಿನಿಯಮ ಮತ್ತು ಪರಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಕುಲಪತಿಗಳನ್ನು ನೇಮಿಸುವುದು ಅಥವಾ ಪುನರ್ನೇಮಿಸುವುದು ಅಥವಾ ಅವರ ನೇಮಕಾತಿಯನ್ನು ಅಂತ್ಯಗೊಳಿಸುವುದು;

(v) ಈ ಅಧಿನಿಯಮದ 16ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಾಮನಿರ್ದೇಶಕ ಸಮಿತಿಯ ಸದಸ್ಯರಾಗಿ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವುದು;

(vi) ಸಹಕುಲಪತಿಗಳು, ಡೀನ್, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳ ನೇಮಕಾತಿಯನ್ನು ಪೂರ್ವಾನುಮೋದಿಸುವುದು;

(vii) ಪ್ರಬಂಧಕ ಮಂಡಳಿಯ ಸದಸ್ಯರನ್ನಾಗಿ ಇಬ್ಬರು ಶಿಕ್ಷಣ ತಜ್ಞರನ್ನು ನಾಮನಿರ್ದೇಶಿಸುವುದು;

(viii) ಮೊದಲ ಸಹಕುಲಪತಿಗಳು ಮತ್ತು ಹಣಕಾಸು ಅಧಿಕಾರಿಗಳನ್ನು ನೇಮಿಸುವುದು;

(ix) ಮೊದಲ ವ್ಯವಸ್ಥಾಪನಾ ಮಂಡಳಿ, ಹಣಕಾಸು ಸಮಿತಿ, ಸಂಶೋಧನಾ ಪರಿಷತ್ತು ಹಾಗೂ ಶೈಕ್ಷಣಿಕ ಪರಿಷತ್ತುಗಳನ್ನು ರಚಿಸುವುದು;

(x) ಈ ಅಧಿನಿಯಮದಲ್ಲಿ ಉಪಬಂಧಿಸಿದ ವಿಧಾನದಲ್ಲಿ ಕಾರ್ಯಸೂಚಿ ವಿಷಯಗಳನ್ನು ಪೂರ್ವಾನುಮೋದಿಸುವುದು;

(xi) ಈ ಅಧಿನಿಯಮದಲ್ಲಿ ಉಪಬಂಧಿಸಿದ ವಿಧಾನದಲ್ಲಿ (ಪ್ರಬಂಧಕ ಮಂಡಳಿಯ ಸಭೆಯಲ್ಲಿ ಉಂಟಾದ ವಿವಾದಗಳನ್ನು ಹೊರತುಪಡಿಸಿ) ವಿವಾದಗಳನ್ನು ಪರಿಹರಿಸುವುದು.

(6) ಪದಾಧಿಕಾರಿ ಅಥವಾ ಸಂಸ್ಥೆ ಮತ್ತು ವಿಶ್ವವಿದ್ಯಾಲಯದ ಯಾವುದೇ ಇತರ ಪದಾಧಿಕಾರಿ ಅಥವಾ ಸಂಸ್ಥೆಗಳ ನಡುವೆ ವಿವಾದಗಳು ಉಂಟಾದಲ್ಲಿ, ಆ ವಿವಾದವನ್ನು ಕುಲಾಧಿಪತಿಯವರ ಪರ್ಯಾಲೋಚನೆಗೆ ಕಳುಹಿಸತಕ್ಕದ್ದು ಮತ್ತು ಅಂಥ ವಿವಾದದ ಸಂದರ್ಭದಲ್ಲಿ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ ವಿಶ್ವವಿದ್ಯಾಲಯವು ಬದ್ಧವಾಗಿರತಕ್ಕದ್ದು.

16. ಕುಲಪತಿಗಳು.– (1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಾಮನಿರ್ದೇಶಕ ಸಮಿತಿಯು ಶಿಫಾರಸ್ಸು ಮಾಡಿದ ಮೂರು ವ್ಯಕ್ತಿಗಳ ಪೈಕಿಯಿಂದ ಒಬ್ಬರನ್ನು ಕುಲಪತಿಗಳಾಗಿ, ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ

ಕುಲಾಧಿಪತಿಯವರು ನೇಮಿಸತಕ್ಕದ್ದು. ಮೂರು ವರ್ಷಗಳ ಅವಧಿಯು ಮುಗಿದ ತರುವಾಯ, ಇದನ್ನು ಮೂರು ವರ್ಷಗಳ ಮತ್ತೊಂದು ಅವಧಿಗೆ ನವೀಕರಿಸಬಹುದು:

ಪರಂತು, ಕುಲಪತಿಯವರು, ತಮ್ಮ ಅವಧಿ ಮುಗಿದ ನಂತರವೂ ಹೊಸ ಕುಲಪತಿಯವರು ಸೇರಿಕೊಳ್ಳುವವರೆಗೆ ಪದದಲ್ಲಿ ಮುಂದುವರೆಯತಕ್ಕದ್ದು. ಆದಾಗ್ಯೂ ಈ ಅವಧಿಯು ಯಾವುದೇ ಸಂದರ್ಭದಲ್ಲಿ ಒಂದು ವರ್ಷವನ್ನು ಮೀರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಹೇಳಿರುವ ನಾಮನಿರ್ದೇಶಕ ಸಮಿತಿಯಲ್ಲಿ ಈ ಮುಂದಿನ ವ್ಯಕ್ತಿಗಳು ಇರತಕ್ಕದ್ದು, ಎಂದರೆ:–

(i) ಕುಲಾಧಿಪತಿಯವರು ನಾಮನಿರ್ದೇಶಿಸಿದ ಒಬ್ಬ ವ್ಯಕ್ತಿ;

(ii) ಪ್ರಬಂಧಕ ಮಂಡಳಿಯ ಇಬ್ಬರು ನಾಮ ನಿರ್ದೇಶಿತರು, ಇವರಲ್ಲಿ ಒಬ್ಬರನ್ನು ಪ್ರಬಂಧಕ ಮಂಡಳಿಯು ಸಮಿತಿಯ ಸಂಚಾಲಕರೆಂದು ನಾಮನಿರ್ದೇಶಿಸತಕ್ಕದ್ದು.

(3) ನಾಮನಿರ್ದೇಶಕ ಸಮಿತಿಯು, ಅರ್ಹತೆಯ ಆಧಾರದ ಮೇಲೆ ಕುಲಪತಿಯ ಹುದ್ದೆಗೆ ಸೂಕ್ತವಾದ ಮೂರು ವ್ಯಕ್ತಿಗಳ ಹೆಸರನ್ನು ಶಿಫಾರಸ್ಸು ಮಾಡತಕ್ಕದ್ದು ಮತ್ತು ಅದನ್ನು ಪ್ರತಿಯೊಬ್ಬ ವ್ಯಕ್ತಿಯ ವಿದ್ಯಾರ್ಹತೆ ಮತ್ತಿತರ ವಿಶಿಷ್ಟ ಪ್ರಶಸ್ತಿಗಳನ್ನು ತಿಳಿಸುವ ಒಂದು ಸಂಕ್ಷಿಪ್ತ ವರದಿಯೊಂದಿಗೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು.

(4) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ಶೈಕ್ಷಣಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ವ್ಯವಹಾರಗಳ ಬಗ್ಗೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೊಳಿಸತಕ್ಕದ್ದು:

ಪರಂತು, ಶಿಕ್ಷಕರ ನೇಮಕಾತಿಯನ್ನು ಹೊರತುಪಡಿಸಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕಾದ ತುರ್ತು ಸ್ವರೂಪದ ಯಾವುದೇ ಇತರ ವಿಷಯಗಳಲ್ಲಿ ಮತ್ತು ಅದನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಶ್ವವಿದ್ಯಾಲಯವು ಇದಕ್ಕಾಗಿ ಅಧಿಕೃತಗೊಳಿಸಿದ್ದ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ಇತರ ಸಂಸ್ಥೆಯು ಕೂಡಲೇ ಕ್ರಮಕೈಗೊಳ್ಳುವುದು ಸಾಧ್ಯವಿರದಿರುವಾಗ ಕುಲಪತಿಯವರು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಕ್ರಮವನ್ನು ಕುಲಾಧಿಪತಿಯವರ ಲಿಖಿತ ಪೂರ್ವಾನುಮೋದನೆಯನ್ನು ಪಡೆದು ಕೈಗೊಳ್ಳತಕ್ಕದ್ದು.

(5) ಕುಲಪತಿಯವರು ಪರಿನಿಯಮಗಳು ಅಥವಾ ನಿಯಮಗಳಲ್ಲಿ ಹೇಳಲಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ಕುಲಪತಿಗಳ ಅಭಿಪ್ರಾಯದಲ್ಲಿ, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಯಾವುದೇ ನಿರ್ಣಯವು, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಿದ ಪರಿನಿಯಮಗಳು, ವಿನಿಯಮಗಳು ಅಥವಾ ನಿಯಮಗಳ ಮೂಲಕ ಪ್ರದತ್ತವಾದ ಅಧಿಕಾರದ ಹೊರಗಿದ್ದರೆ ಅಥವಾ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಪ್ರತಿಕೂಲವಾಗಬಹುದಾಗಿದ್ದರೆ, ಅದರ ನಿರ್ಣಯದ ದಿನಾಂಕದಿಂದ ಹದಿನೈದು ದಿನಗಳ ಒಳಗೆ ತನ್ನ ನಿರ್ಣಯವನ್ನು ಪರಿಷ್ಕರಿಸಲು ಸಂಬಂಧಪಟ್ಟ ಪ್ರಾಧಿಕಾರವನ್ನು ಆತನು ಕೋರತಕ್ಕದ್ದು ಮತ್ತು ಪ್ರಾಧಿಕಾರವು ಅಂಥ ನಿರ್ಣಯವನ್ನು ಸಂಪೂರ್ಣವಾಗಿ ಅಥವಾ ಭಾಗಶ:ವಾಗಿ ಪರಿಷ್ಕರಿಸಲು ನಿರಾಕರಿಸಿದ ಸಂದರ್ಭದಲ್ಲಿ ಅಥವಾ ಹದಿನೈದು ದಿನಗಳೊಳಗೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲು ವಿಫಲವಾದಲ್ಲಿ, ನಂತರ ಅಂಥ ವಿಷಯವನ್ನು ಕುಲಾಧಿಪತಿಗಳಿಗೆ ಕಳುಹಿಸತಕ್ಕದ್ದು ಮತ್ತು ಈ ಬಗ್ಗೆ ಇವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(6) ಕುಲಪತಿಯವರ ಸೇವೆಗಳನ್ನು, ಪ್ರಬಂಧಕ ಮಂಡಳಿಯ ಅನುಮೋದನೆಯೊಂದಿಗೆ ಮತ್ತು ಸಹಜ ನ್ಯಾಯದ ತತ್ವಗಳನ್ನು ಅನುಸರಿಸಿದ ನಂತರ ಹಾಗೂ ಶಿಸ್ತಿನ ಆಧಾರದ ಮೇಲೆ ಅಂತ್ಯಗೊಳಿಸುವ ಸಂದರ್ಭವೂ ಸೇರಿದಂತೆ, ಪ್ರಕರಣದ ಬಗ್ಗೆ ಕುಲಪತಿಯು ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ, ಕುಲಾಧಿಪತಿಯವರು ಅಂತ್ಯಗೊಳಿಸಬಹುದು.

(7) ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಸಂದರ್ಶಕರು, ಸಹ–ಸಂದರ್ಶಕರು ಮತ್ತು ಕುಲಾಧಿಪತಿಯವರು ಇವರುಗಳ ಗೈರು ಹಾಜರಿಯ ಸಂದರ್ಭದಲ್ಲಿ ಕುಲಪತಿಯವರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

17. ಸಹಕುಲಪತಿಗಳು.– ಕುಲಪತಿಯವರು, ಕುಲಾಧಿಪತಿಯವರ ಲಿಖಿತ ಅನುಮೋದನೆಯನ್ನು ಪಡೆದುಕೊಂಡು ಮೂರು ಜನರನ್ನು ಮೀರದಂತೆ ಸಹಕುಲಪತಿಗಳನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ನೇಮಕಮಾಡತಕ್ಕದ್ದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

18. ವ್ಯಾಸಂಗ ವಿಭಾಗಗಳ ಡೀನ್‌ಗಳು.– ಕುಲಪತಿಯವರು, ಕುಲಾಧಿಪತಿಯವರ ಲಿಖಿತ ಅನುಮೋದನೆಯನ್ನು ಪಡೆದುಕೊಂಡು ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ವ್ಯಾಸಂಗ ವಿಭಾಗಗಳ ಡೀನ್‌ಗಳನ್ನು ನೇಮಕಮಾಡತಕ್ಕದ್ದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

19. ಕುಲಸಚಿವರು.– (1) ಕುಲಾಧಿಪತಿಯವರು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಕುಲಾಧಿಪತಿಯವರ ಲಿಖಿತ ಅನುಮೋದನೆಯೊಂದಿಗೆ, ಕುಲಸಚಿವರನ್ನು ನೇಮಕ ಮಾಡತಕ್ಕದ್ದು.

(2) ಪರಿನಿಯಮಗಳಲ್ಲಿ ಪರಿಭಾಷಿಸಿರುವಂಥ ಎಲ್ಲಾ ಕರಾರುಗಳನ್ನು ವಿಶ್ವವಿದ್ಯಾಲಯದ ಪರವಾಗಿ ಕುಲಸಚಿವರು ಮಾಡಿಕೊಳ್ಳತಕ್ಕದ್ದು ಮತ್ತು ಅದಕ್ಕೆ ಸಹಿ ಹಾಕತಕ್ಕದ್ದು.

(3) ಕುಲಸಚಿವರು ವಿಶ್ವವಿದ್ಯಾಲಯದ ಪರವಾಗಿ ದಾಖಲೆಗಳನ್ನು ಅಧಿಕೃತಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಪರಿನಿಯಮಗಳಿಂದ ಪ್ರದತ್ತಗೊಳಿಸಬಹುದಾದಂಥ ಅಥವಾ ಕುಲಾಧಿಪತಿಯವರು ಮತ್ತು ಕುಲಪತಿಯವರು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(4) ಕುಲಸಚಿವರು ವಿಶ್ವವಿದ್ಯಾಲಯದ ದಾಖಲೆಗಳು ಮತ್ತು ಸಾಮಾನ್ಯ ಮೊಹರನ್ನು ಸರಿಯಾದ ರೀತಿಯಲ್ಲಿ ರಕ್ಷಿಸಿಕೊಂಡು ಬರುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು ಮತ್ತು ಕುಲಾಧಿಪತಿಯವರು, ಕುಲಪತಿಯವರು ಅಥವಾ ಇತರ ಯಾವುದೇ ಪ್ರಾಧಿಕಾರವು ಕೋರಿದಂಥ ಎಲ್ಲಾ ಅಂಥ ಮಾಹಿತಿಯನ್ನು ಮತ್ತು ದಾಖಲೆಗಳನ್ನು ಅವರ ಮುಂದೆ ಮಂಡಿಸಲು ಬದ್ಧರಾಗಿತಕ್ಕದ್ದು.

20. ಹಣಕಾಸು ಅಧಿಕಾರಿ.– ಕುಲಪತಿಯವರು, ಕುಲಾಧಿಪತಿಯವರ ಲಿಖಿತ ಅನುಮೋದನೆಯನ್ನು ಪಡೆದುಕೊಂಡು, ಪರಿನಿಯಮಗಳ ಮೂಲಕ ಪ್ರದತ್ತಗೊಳಿಸಬಹುದಾದ ಅಂಥ ವಿಧಾನದಲ್ಲಿ ಹಣಕಾಸು ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

21. ಇತರ ಅಧಿಕಾರಿಗಳು.– ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ ನೇಮಕಾತಿಯ ವಿಧಾನ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಅವರ ಅಧಿಕಾರಗಳು ಮತ್ತು ಕರ್ತವ್ಯಗಳು ಪರಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

ಅಧ್ಯಾಯ – IV

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

22. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.– ಈ ಮುಂದಿನವುಗಳು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(i) ಪ್ರಬಂಧಕ ಮಂಡಳಿ;

(ii) ವ್ಯವಸ್ಥಾಪನ ಮಂಡಳಿ;

(iii) ಶೈಕ್ಷಣಿಕ ಪರಿಷತ್ತು;

(iv) ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು;

(v) ಹಣಕಾಸು ಸಮಿತಿ; ಮತ್ತು

(vi) ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಅಂಥ ಇತರ ಪ್ರಾಧಿಕಾರಗಳು.

23. ಪ್ರಬಂಧಕ ಮಂಡಳಿ ಮತ್ತು ಇದರ ಅಧಿಕಾರಗಳು.– (1) ಪ್ರಬಂಧಕ ಮಂಡಳಿಯು ಈ ಮುಂದಿನವರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಾಧಿಪತಿಯವರು – ಅಧ್ಯಕ್ಷರು;

(ii) ಕುಲಪತಿಯವರು – ಸದಸ್ಯರು;

(iii) ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ;

(iv) ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ;

(v) ನಿರ್ದೇಶಕರು, ಕಾಲೇಜು ಶಿಕ್ಷಣ;

(vi) ನಿರ್ದೇಶಕರು, ತಾಂತ್ರಿಕ ಶಿಕ್ಷಣ;

(vii) ನಿರ್ದೇಶಕರು, ವೈದ್ಯಕೀಯ ಶಿಕ್ಷಣ;

(viii) ವಿಶ್ವವಿದ್ಯಾಲಯ ಅನುದಾನಗಳ ಆಯೋಗವು ನಾಮನಿರ್ದೇಶನ ಮಾಡಿದ ಒಬ್ಬರು ಸುಪ್ರಸಿದ್ಧ ಶಿಕ್ಷಣ ತಜ್ಞರು;

(ix) ಸಂದರ್ಶಕರು ಶಿಫಾರಸ್ಸು ಮಾಡಿದ ಹೆಸರುಗಳ ಪಟ್ಟಿಯಿಂದ ಸುಪ್ರಸಿದ್ಧ ಶಿಕ್ಷಣ ತಜ್ಞರು ಮತ್ತು ಶೈಕ್ಷಣಿಕ ತಜ್ಞರು ಆಗಿರುವ ಒಬ್ಬರು ಮಹಿಳೆ;

(x) ಪ್ರಾಯೋಜಕ ಸಂಸ್ಥೆಯು ನಾಮನಿರ್ದೇಶಿಸಿದ ಮೂರು ವ್ಯಕ್ತಿಗಳು ಅವರಲ್ಲಿ ಒಬ್ಬರು ಕಾನೂನು ವಿಷಯಕ ಹಿನ್ನೆಲೆಯನ್ನುಳ್ಳವರಿರತಕ್ಕದ್ದು;

(2) ಕುಲಸಚಿವರು ಪ್ರಬಂಧಕ ಮಂಡಳಿಯ ಮತ ದಾನದ ಹಕ್ಕಿರದ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಪ್ರಬಂಧಕ ಮಂಡಳಿಯ ಸದಸ್ಯರ ಪದಾವಧಿ, ಸರ್ಕಾರದಿಂದ ನಾಮನಿರ್ದೇಶಿತರಾದ ಇಬ್ಬರು ಸದಸ್ಯರನ್ನು ಹೊರತುಪಡಿಸಿ, ಸದಸ್ಯರ ನೇಮಕಾತಿ, ನವೀಕರಣ ಮತ್ತು ತೆಗೆದುಹಾಕುವುದು ಮುಂತಾದವುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಪ್ರಬಂಧಕ ಮಂಡಳಿಯ ಎಲ್ಲಾ ಸಭೆಗಳಲ್ಲಿ ಕುಲಾಧಿಪತಿಯವರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ ಕುಲಾಧಿಪತಿಯವರಿಂದ ನಾಮನಿರ್ದೇಶಿತರಾದ ಯಾರಾದರೂ ಒಬ್ಬರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸುವುದಕ್ಕೆ ಕುಲಾಧಿಪತಿಯವರು ಯಾವೊಬ್ಬ ವ್ಯಕ್ತಿಯನ್ನೂ ನಾಮನಿರ್ದೇಶನ ಮಾಡಿರದಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ಸದಸ್ಯರು ಸರಳ ಬಹುಮತದ ಮೂಲಕ ಅವರುಗಳ ಪೈಕಿಯಿಂದಲೇ ಆ ಸಭೆಗೆ ಮಾತ್ರವೇ ಅಧ್ಯಕ್ಷನನ್ನು ಚುನಾಯಿಸತಕ್ಕದ್ದು.

(5) ಪ್ರಬಂಧಕ ಮಂಡಳಿಯ ಎಲ್ಲಾ ಸಭೆಗಳಿಗೆ, ಅಂಥ ಸಭೆಯಲ್ಲಿ ಹಾಜರಾಗುವ ಮತ್ತು ಮತದಾನ ನೀಡುವ ಮೂರು ಜನ ಸದಸ್ಯರು ಗಣಪೂರ್ತಿ (ಕೋರಂ) ಆಗಿರತಕ್ಕದ್ದು:

ಪರಂತು, ಪ್ರಬಂಧಕ ಮಂಡಳಿಯ ಯಾವುದೇ ಸಭೆಯ ಕೋರಂ ಪೂರ್ಣವಾಗಬೇಕಾದರೆ ಕುಲಾಧಿಪತಿಯವರು ಅಥವಾ ಪ್ರಾಯೋಜಕ ಸಂಸ್ಥೆಯ ಒಬ್ಬ ನಾಮನಿರ್ದೇಶಿತರು ಹಾಜರಿರುವುದು ಮತ್ತು ಕುಲಾಧಿಪತಿಯವರು ಅಥವಾ ಪ್ರಾಯೋಜಕ ಸಂಸ್ಥೆಯ ನಾಮನಿರ್ದೇಶಿತರು ಹಾಜರಾಗದೇ ಇದ್ದಾಗ ಕುಲಪತಿಯವರು ಹಾಜರಿರುವುದು ಯಾವಾಗಲೂ ಅವಶ್ಯವಾಗಿರತಕ್ಕದ್ದು.

(6) ಪ್ರಬಂಧಕ ಮಂಡಳಿಯು ವಿಶ್ವವಿದ್ಯಾಲಯದ ಪ್ರಧಾನ ಪ್ರಬಂಧಕ ಸಂಸ್ಥೆಯಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕಗೊಳಿಸುವುದು;

(ii) ವಿಶ್ವವಿದ್ಯಾಲಯವು ಅನುಸರಿಸಬೇಕಾದ ಕಾರ್ಯನೀತಿಗಳನ್ನು ರಚಿಸುವುದು;

(iii) ಈ ಅಧಿನಿಯಮದ ಅಥವಾ ಪರಿನಿಯಮಗಳ ಅಥವಾ ನಿಯಮಗಳ ಉಪಬಂಧಗಳಿಗೆ ಅನುಗುಣವಾಗಿ ಇರದ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ತೀರ್ಮಾನಗಳನ್ನು ಪುನರೀಕ್ಷಿಸುವುದು;

(iv) ವಿಶ್ವವಿದ್ಯಾಲಯದ ಆಯವ್ಯಯ ಮತ್ತು ವಾರ್ಷಿಕ ವರದಿಗಳನ್ನು ಅನುಮೋದಿಸುವುದು;

(v) ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸುವುದು ಅಥವಾ ಈಗಾಗಲೇ ಇರುವ ಪರಿನಿಯಮಗಳು ಮತ್ತು ನಿಯಮಗಳನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

(vi) ವಿಶ್ವವಿದ್ಯಾಲಯವನ್ನು ಸ್ವಯಂಸಮಾಪನಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳುವುದು;

(vii) ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವಗಳನ್ನು ಅನುಮೋದಿಸುವುದು;

(viii) ಶುಲ್ಕ ನಿಯಂತ್ರಣ ಸಮಿತಿಗೆ ಮೂವರು ಸದಸ್ಯರನ್ನು ನಾಮನಿರ್ದೇಶನ ಮಾಡುವುದು;

(ix) ವಿಶ್ವವಿದ್ಯಾಲಯದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಅಪೇಕ್ಷಣೀಯವೆಂದು ಕಂಡುಬರುವಂಥ ತೀರ್ಮಾನಗಳನ್ನು ಮತ್ತು ಕ್ರಮಗಳನ್ನು ಕೈಗೊಳ್ಳುವುದು.

(7) ಪ್ರಬಂಧಕ ಮಂಡಳಿಯು ಒಂದು ವರ್ಷದಲ್ಲಿ ಕನಿಷ್ಠ ಮೂರು ಸಲ ಸಭೆ ಸೇರತಕ್ಕದ್ದು.

(8) ಪ್ರಬಂಧಕ ಮಂಡಳಿಯು ಶಾಸನದ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು.

24. ವ್ಯವಸ್ಥಾಪನಾ ಮಂಡಳಿ.– (1) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಪತಿಗಳು;

(ii) ಸಹಕುಲಪತಿಗಳು;

(iii) ಕುಲಸಚಿವರು;

(iv) ಪ್ರಾಯೋಜಕ ಸಂಸ್ಥೆಯ ಇಬ್ಬರು ನಾಮನಿರ್ದೇಶಿತರು;

(v) ಕುಲಪತಿಗಳು ನಾಮನಿರ್ದೇಶಿಸಬಹುದಾದ ವ್ಯಾಸಂಗ ವಿಭಾಗಗಳ ಇಬ್ಬರು ಡೀನ್‌ಗಳು;

(2) ಕುಲಪತಿಯವರು ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರಾಗಿರತಕ್ಕದ್ದು ಮತ್ತು ಕುಲಸಚಿವರು ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ವ್ಯವಸ್ಥಾಪನಾ ಮಂಡಳಿಯು ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಸಂಸ್ಥೆಯಾಗಿರತಕ್ಕದ್ದು. ವ್ಯವಸ್ಥಾಪನಾ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಪರಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

(4) ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸಭೆಗಳಲ್ಲಿ ಯಾವಾಗಲೂ ಕುಲಪತಿಯವರು ಅಧ್ಯಕ್ಷತೆ ವಹಿಸತಕ್ಕದ್ದು ಹಾಗೂ ಕುಲಪತಿಯವರ ಗೈರುಹಾಜರಿಯಲ್ಲಿ ಪ್ರಾಯೋಜಕ ಸಂಸ್ಥೆಯು ನಾಮನಿರ್ದೇಶನ ಮಾಡಿದವರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪ್ರಾಯೋಜಕ ಸಂಸ್ಥೆಯು ಯಾರನ್ನೂ ನಾಮನಿರ್ದೇಶನ ಮಾಡದೇ ಇದ್ದ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರು ಚುನಾಯಿಸಿದ ಯಾವುದೇ ಇತರ ಸದಸ್ಯರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(5) ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಯಾವುದೇ ವಿಷಯವನ್ನು ಕುರಿತು ವಿವಾದ ಉಂಟಾದಲ್ಲಿ ಸದರಿ ವಿಷಯವನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯದ ಬಗ್ಗೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ ವಿಶ್ವವಿದ್ಯಾಲಯವು ಬದ್ಧವಾಗಿರತಕ್ಕದ್ದು.

25. ಶೈಕ್ಷಣಿಕ ಪರಿಷತ್ತು.–(1) ಶೈಕ್ಷಣಿಕ ಪರಿಷತ್ತು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಪತಿಯವರು – ಅಧ್ಯಕ್ಷರು

(ii) ಸಹಕುಲಪತಿಯವರು – ಸದಸ್ಯರು

(iii) ಕುಲಸಚಿವರು – ಕಾರ್ಯದರ್ಶಿಗಳು

(iv) ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.

(2) ಶೈಕ್ಷಣಿಕ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ ಸಂಸ್ಥೆಯಾಗಿರತಕ್ಕದ್ದು ಮತ್ತು ಈ ಅಧಿನಿಯಮದ, ಪರಿನಿಯಮಗಳ, ವಿನಿಯಮಗಳ ಹಾಗೂ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯನೀತಿಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಅದರ ಬಗ್ಗೆ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

26. ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು.– (1) ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಸಂಶೋಧನೆ ಮತ್ತು ಅನ್ವೇಷಣಾ ಸಮಿತಿಯಾಗಿರತಕ್ಕದ್ದು ಹಾಗೂ ಸಂಶೋಧನೆ ಮತ್ತು ಅನ್ವೇಷಣಾ ಕ್ಷೇತ್ರಗಳ ಆದ್ಯತೆಯೂ ಒಳಗೊಂಡಂತೆ, ವಿಶ್ವವಿದ್ಯಾಲಯವು ಕೈಗೊಳ್ಳಬೇಕಾದ ಸಂಶೋಧನೆ ಮತ್ತು ಅನ್ವೇಷಣೆಯ ಬಗ್ಗೆ ಒಂದು ವ್ಯಾಪಕವಾದ ಪರಿಪೂರ್ಣ ಭವಿಷ್ಯದ್ ದೃಷ್ಟಿಯನ್ನು ಒದಗಿಸತಕ್ಕದ್ದು. ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು, ಈ ಅಧಿನಿಯಮದ, ಪರಿನಿಯಮಗಳ, ವಿನಿಯಮಗಳ ಮತ್ತು ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಸಂಶೋಧನೆ ಮತ್ತು ಅನ್ವೇಷಣಾ ಕಾರ್ಯನೀತಿಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಅದರ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

(2) ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಪತಿಯವರು – ಅಧ್ಯಕ್ಷರು

(ii) ಸಹಕುಲಪತಿಯವರು – ಸದಸ್ಯರು

(iii) ಸಂಶೋಧನೆಯ ಡೀನ್ – ಕಾರ್ಯದರ್ಶಿ

(iv) ಅನ್ವೇಷಣಾ ವಿಭಾಗದ ಮುಖ್ಯಸ್ಥರು – ಸದಸ್ಯರು

(v) ಎಲ್ಲಾ ವ್ಯಾಸಂಗ ವಿಭಾಗಗಳ ಡೀನ್‌ಗಳು – ಸದಸ್ಯರು ಮತ್ತು

(vi) ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.

27. ಹಣಕಾಸು ಸಮಿತಿ.– (1) ಹಣಕಾಸು ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಾಧಿಪತಿಯವರು ಅಥವಾ ಅವರ ನಾಮನಿರ್ದೇಶಿತರು	–	ಅಧ್ಯಕ್ಷರು
(ii) ಕುಲಪತಿಯವರು	–	ಸದಸ್ಯರು
(iii) ಕುಲಸಚಿವರು	–	ಸದಸ್ಯರು
(iv) ಹಣಕಾಸು ಅಧಿಕಾರಿ	–	ಕಾರ್ಯದರ್ಶಿ
(v) ಪ್ರಾಯೋಜಕ ಸಂಸ್ಥೆಯ ಒಬ್ಬ ನಾಮನಿರ್ದೇಶಿತರು	–	ಸದಸ್ಯರು; ಮತ್ತು

(vi) ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.

(2) ಹಣಕಾಸು ಸಮಿತಿಯು ಹಣಕಾಸಿನ ವಿಷಯಗಳನ್ನು ಕೈಗೊಳ್ಳುವ ವಿಶ್ವವಿದ್ಯಾಲಯದ ಪ್ರಧಾನ ಹಣಕಾಸು ಸಂಸ್ಥೆಯಾಗಿರತಕ್ಕದ್ದು ಹಾಗೂ ಅದು ಈ ಅಧಿನಿಯಮ, ನಿಯಮಗಳು ಮತ್ತು ಪರಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಹಣಕಾಸು ವಿಷಯಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

28. ಇತರ ಪ್ರಾಧಿಕಾರಗಳು.– ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಹಾಗೂ ಪ್ರಕಾರ್ಯಗಳು ಪರಿನಿಯಮಗಳಿಂದ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

29. ಒಂದು ಪ್ರಾಧಿಕಾರ ಅಥವಾ ಸಂಸ್ಥೆಯ ಸದಸ್ಯತ್ವಕ್ಕೆ ಅನರ್ಹತೆ.– ವಿಶ್ವವಿದ್ಯಾಲಯದ ಯಾವುವೇ ಸಂಸ್ಥೆಗಳ ಅಥವಾ ಪ್ರಾಧಿಕಾರಗಳ ಒಬ್ಬ ವ್ಯಕ್ತಿಯು,–

(ಎ) ಅಸ್ವಸ್ಥ ಚಿತ್ತನಾಗಿದ್ದು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದ್ದರೆ;

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ;

(ಸಿ) ನೈತಿಕ ಅಧ:ಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದರೆ;

(ಡಿ) ಖಾಸಗಿ ಬೋಧನಾ ತರಗತಿಗಳನ್ನು ನಡೆಸುತ್ತಿದ್ದರೆ ಅಥವಾ ಸ್ವತ: ನಿರತನಾಗಿದ್ದರೆ;

(ಇ) ಯಾವುದೇ ವಿಧದಲ್ಲಿ, ಎಲ್ಲಿಯೇ, ಯಾವುದೇ ಪರೀಕ್ಷೆಯನ್ನು ನಡೆಸುವಲ್ಲಿ ಅನುಚಿತ ಅಭ್ಯಾಸದಲ್ಲಿ ತೊಡಗಿದ್ದಕ್ಕಾಗಿ ಅಥವಾ ಉತ್ತೇಜಿಸಿದ್ದಕ್ಕಾಗಿ ದಂಡಿತನಾಗಿದ್ದರೆ;

(ಎಫ್) ಪ್ರಾಯೋಜಿತ ಸಂಸ್ಥೆಯು ಯಾವುವೇ ಪ್ರಾಧಿಕಾರಗಳ ಅಥವಾ ಸಂಸ್ಥೆಗಳ ಯಾವೊಬ್ಬ ಸದಸ್ಯನನ್ನು ಆ ಪದವನ್ನು ಹೊಂದಿರುವುದಕ್ಕೆ ಅರ್ಹನಲ್ಲನೆಂದು ಲಿಖಿತದಲ್ಲಿ ಅಭಿಪ್ರಾಯ ನೀಡಿದಾಗಲೆಲ್ಲಾ,

– ಸದಸ್ಯನಾಗಿರುವುದಕ್ಕೆ ಅನರ್ಹನಾಗತಕ್ಕದ್ದು.

30. ಖಾಲಿಸ್ಥಾನ ಇರುವ ಕಾರಣದಿಂದಾಗಿ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಕಾರ್ಯ ಅಥವಾ ವ್ಯವಹರಣೆಗಳು ಕೇವಲ ಅದರಲ್ಲಿ ಯಾವುದೇ ಖಾಲಿಸ್ಥಾನ ಇದೆ ಎಂಬ ಕಾರಣದಿಂದ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿದೆ ಎಂಬ ಕಾರಣದಿಂದ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

31. ಕಾರ್ಯಸೂಚಿ ವಿಷಯಗಳ ಬಗ್ಗೆ ಉಪಬಂಧಗಳು.– (1) ಯಾವುವೇ ಕಾರ್ಯಸೂಚಿ ವಿಷಯಗಳನ್ನು ಕುಲಾಧಿಪತಿಯವರ ಪೂರ್ವಾನುಮೋದನೆಯನ್ನು ಪಡೆಯದೇ ಪ್ರಬಂಧಕ ಮಂಡಳಿಯ ಅಥವಾ ವ್ಯವಸ್ಥಾಪನಾ ಮಂಡಳಿಯ ಅಥವಾ ಯಾವುದೇ ಸಮಿತಿಯ ಸಭೆಗಳ ಕಾರ್ಯಸೂಚಿ ವಿಷಯಗಳಲ್ಲಿ ಸೇರಿಸತಕ್ಕದ್ದಲ್ಲ ಅಥವಾ ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ತೀರ್ಮಾನಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಪಾಲಿಸದೆ ಇರುವ ಉಲ್ಲಂಘನೆಯ ಸಂದರ್ಭದಲ್ಲಿ, ಕುಲಾಧಿಪತಿಯವರು ವಿಶ್ವವಿದ್ಯಾಲಯದ ಯಾವುದೇ ಪದಾಧಿಕಾರಿ ಅಥವಾ ಸಂಸ್ಥೆಯು ತೆಗೆದುಕೊಂಡ ಎಲ್ಲಾ ತೀರ್ಮಾನಗಳನ್ನು ವಿಪರ್ಯಯಗೊಳಿಸುವ ಮೂಲಕ ಪರಿಹಾರ ಕ್ರಮಗಳನ್ನು ಕೂಡಲೇ ಕೈಗೊಳ್ಳಲು ಅಧಿಕಾರವನ್ನು ಎಲ್ಲಾ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಅಂಥ ಪರಿಹಾರ ಕ್ರಮದ ಪರಿಣಾಮವಾಗಿ ಅಧಿನಿಯಮದ ಉಪಬಂಧಗಳನ್ನು ಪಾಲಿಸದೇ ವಿಶ್ವವಿದ್ಯಾಲಯದ ಪದಾಧಿಕಾರಿ ಅಥವಾ ಸಂಸ್ಥೆಯು ಕೈಗೊಂಡಿದ್ದ ಎಲ್ಲಾ ಅಂಥ ಕ್ರಮಗಳು, ಮೊದಲಿನಿಂದಲೂ ಶೂನ್ಯ ಮತ್ತು ಅಕೃತ ಎಂದು ಭಾವಿಸತಕ್ಕದ್ದು ಹಾಗೂ ತತ್ಪರಿಣಾಮವಾಗಿ, ಉಪಬಂಧ ಪಾಲಿಸದೇ ಇದ್ದ ವಿಷಯ ಅಥವಾ ನಿರ್ಧಾರದ ಸಂಬಂಧದಲ್ಲಿ ಅದಕ್ಕೆ ಮುಂಚೆ ಇದ್ದ ವಸ್ತುಸ್ಥಿತಿಯೇ ಮುಂದುವರಿಯತಕ್ಕದ್ದು.

ಅಧ್ಯಾಯ – V

ಪರಿನಿಯಮಗಳು ಮತ್ತು ವಿನಿಯಮಗಳು

32. ಪರಿನಿಯಮಗಳು.– ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಪರಿನಿಯಮಗಳು, ವಿಶ್ವವಿದ್ಯಾಲಯಕ್ಕೆ ಮತ್ತು ಸಿಬ್ಬಂದಿಗೆ ಸಂಬಂಧಿಸಿದ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಈ ಕೆಳಗಿನಂತೆ ಉಪಬಂಧ ಕಲ್ಪಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಕಾರ್ಯಕಲಾಪಗಳನ್ನು ನಡೆಸುವ ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸದಿರುವ ಸಂಸ್ಥೆಗಳ ರಚನೆಯ ಕಾರ್ಯವಿಧಾನ;

(ii) ಶಾಶ್ವತ ಶಾಸನಬದ್ಧ ದತ್ತಿ ನಿಧಿ, ವಿಶ್ವವಿದ್ಯಾಲಯ ದತ್ತಿ ನಿಧಿ, ಸಾಮಾನ್ಯ ನಿಧಿ ಹಾಗೂ ಅಭಿವೃದ್ಧಿ ನಿಧಿಗಳ ನಿರ್ವಹಣೆ;

(iii) ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿ ಇವರ ನೇಮಕಾತಿಯ ನಿಬಂಧನೆಗಳು ಹಾಗೂ ಷರತ್ತುಗಳು ಹಾಗೂ ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(iv) ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ, ಅಧ್ಯಾಪಕರ ಮತ್ತು ನೌಕರರ ನೇಮಕಾತಿ ವಿಧಾನ ಹಾಗೂ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(v) ವಿಶ್ವವಿದ್ಯಾಲಯ ಹಾಗೂ ಅದರ ಅಧಿಕಾರಿಗಳು, ವ್ಯಾಸಂಗ ವಿಭಾಗದ (ಫ್ಯಾಕಲ್ಟಿ) ಸದಸ್ಯರು, ನೌಕರರು ಹಾಗೂ ವಿದ್ಯಾರ್ಥಿಗಳ ನಡುವೆ ಉಂಟಾದ ವಿವಾದಗಳನ್ನು ಪರಿಹರಿಸುವ ಕಾರ್ಯವಿಧಾನ;

(vi) ವಿಭಾಗಗಳು ಮತ್ತು ವ್ಯಾಸಂಗ ವಿಭಾಗಗಳ (ಫ್ಯಾಕಲ್ಟಿಗಳ) ಸೃಜನೆ, ರದ್ಧತಿ ಅಥವಾ ಪುನಾರಚನೆ;

(vii) ಇತರ ವಿಶ್ವವಿದ್ಯಾಲಯಗಳು ಅಥವಾ ಉನ್ನತ ಕಲಿಕಾ ಸಂಸ್ಥೆಗಳ ಜೊತೆಯಲ್ಲಿ ಸಹಕರಿಸಬೇಕಾದ ರೀತಿ;

(viii) ಗೌರವ ಪದವಿಗಳ ನೀಡಿಕೆಯ ಕಾರ್ಯವಿಧಾನ;

(ix) ಉಚಿತ ಶಿಕ್ಷಣ (ಫ್ರೀಶಿಪ್) ಮತ್ತು ವಿದ್ಯಾರ್ಥಿವೇತನ ಮಂಜೂರಾತಿಗೆ ಸಂಬಂಧಿಸಿದ ಉಪಬಂಧಗಳು;

(x) ವಿವಿಧ ವ್ಯಾಸಂಗ ಕ್ರಮಗಳಲ್ಲಿನ ಸೀಟುಗಳ ಸಂಖ್ಯೆಗೆ ಸಂಬಂಧಿಸಿದ ಕಾರ್ಯನೀತಿಗಳು ಮತ್ತು ಅಂಥ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಕಾರ್ಯವಿಧಾನ;

(xi) ವಿವಿಧ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳಿಗೆ ವಿಧಿಸಬಹುದಾದ ಶುಲ್ಕಕ್ಕೆ ಸಂಬಂಧಿಸಿದ ಕಾರ್ಯನೀತಿ;

(xii) ಸಂಶೋಧನಾ ವೇತನಗಳು (ಫೆಲೋಶಿಪ್‌ಗಳು), ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ಉಚಿತ ಶಿಕ್ಷಣ, ಪದಕಗಳು ಹಾಗೂ ಬಹುಮಾನಗಳನ್ನು ಪ್ರಾರಂಭಿಸುವುದು;

(xiii) ಪ್ರಬಂಧಕ ಮಂಡಳಿಯು ನಿರ್ಧರಿಸಬಹುದಾದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಪರಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬೇಕಾದ ಅಗತ್ಯತೆಯುಳ್ಳ ಯಾವುದೇ ಇತರ ವಿಷಯಗಳು.

33. ಪರಿನಿಯಮಗಳ ರಚನೆ ವಿಧಾನ.– (1) ವ್ಯವಸ್ಥಾಪನಾ ಮಂಡಳಿಯು ರಚಿಸಿದ ಮೊದಲ ಶಾಸನಗಳನ್ನು ಅನುಮೋದನೆಗಾಗಿ ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(2) ವ್ಯವಸ್ಥಾಪನಾ ಮಂಡಳಿಯು ಸಲ್ಲಿಸಿದ ಮೊದಲ ಪರಿನಿಯಮಗಳನ್ನು ಪ್ರಬಂಧಕ ಮಂಡಳಿಯು ಪರಿಗಣಿಸತಕ್ಕದ್ದು ಹಾಗೂ ತಾನು ಅವಶ್ಯವೆಂದು ಭಾವಿಸಬಹುದಾದ ಅಂಥ ಮಾರ್ಪಾಡುಗಳು, ಯಾವುದಾದರು ಇದ್ದಲ್ಲಿ, ಅವುಗಳೊಡನೆ ತನ್ನ ಅನುಮೋದನೆಯನ್ನು ನೀಡತಕ್ಕದ್ದು.

(3) ವಿಶ್ವವಿದ್ಯಾಲಯವು, ಪ್ರಬಂಧಕ ಮಂಡಳಿಯು ಅನುಮೋದಿಸಿದ ಮೊದಲ ಪರಿನಿಯಮಗಳನ್ನು ವಿಶ್ವವಿದ್ಯಾಲಯದ ಅಧಿಸೂಚನೆಯಲ್ಲಿ ಪ್ರಕಟಿಸತಕ್ಕದ್ದು ಮತ್ತು ತದನಂತರ ಮೊದಲ ಶಾಸನವು ಅದರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

34. ಪರಿನಿಯಮಗಳ ತಿದ್ದುಪಡಿಯ ಅಧಿಕಾರ.– ಪ್ರಬಂಧಕ ಮಂಡಳಿಯು ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸಬಹುದು ಅಥವಾ ಪರಿನಿಯಮಗಳ ತಿದ್ದುಪಡಿ ಮಾಡಬಹುದು ಅಥವಾ ಅವನ್ನು ನಿರಸನಗೊಳಿಸಬಹುದು.

35. ವಿನಿಯಮಗಳು.– ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ವಿನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಗಳನ್ನು ಕಲ್ಪಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ ಮತ್ತು ವಿದ್ಯಾರ್ಥಿ ಪಟ್ಟಿಯಲ್ಲಿ ಅವರುಗಳ ದಾಖಲಾತಿ ಹಾಗೂ ಮುಂದುವರಿಕೆ;

(ii) ವಿಶ್ವವಿದ್ಯಾಲಯದ ಎಲ್ಲಾ ಪದವಿಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ನಿಗದಿಪಡಿಸತಕ್ಕ ವ್ಯಾಸಂಗ ಕ್ರಮಗಳು;

(iii) ಪದವಿಗಳ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳ ಪ್ರದಾನ;

(iv) ಸಂಶೋಧನಾ ವೇತನಗಳು (ಫೆಲೋಶಿಪ್), ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ಪದಕಗಳು ಮತ್ತು ಬಹುಮಾನಗಳನ್ನು ನೀಡಲು ಷರತ್ತುಗಳು;

(v) ಪರೀಕ್ಷೆಗಳನ್ನು ನಡೆಸುವುದು ಹಾಗೂ ಪರೀಕ್ಷೆ ನಡೆಸುವ ಸಂಸ್ಥೆಗಳು, ಪರೀಕ್ಷಕರು, ಪರೀಕ್ಷಾ ಮೇಲ್ವಿಚಾರಕರು, ಟ್ಯಾಬುಲೇಟರ್‌ಗಳು ಮತ್ತು ಮಾಡರೇಟರ್‌ಗಳ ನೇಮಕಾತಿ ಷರತ್ತುಗಳು ಮತ್ತು ವಿಧಾನ ಹಾಗೂ ಅವರ ಕರ್ತವ್ಯಗಳು;

(vi) ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ, ಪದವಿಗಳಿಗೆ ಹಾಗೂ ಇತರ ಶೈಕ್ಷಣಿಕ ಪ್ರಶಸ್ತಿಗಳಿಗೆ ಪ್ರವೇಶಕ್ಕೆ ವಿಧಿಸತಕ್ಕ ಶುಲ್ಕ;

(vii) ವಿಶ್ವವಿದ್ಯಾಲಯ ಅಥವಾ ಒಂದು ಘಟಕ ಕಾಲೇಜಿನಲ್ಲಿ ವಿದ್ಯಾರ್ಥಿಗಳ ನಿವಾಸಕ್ಕಾಗಿ ಷರತ್ತುಗಳು;

(viii) ವಿಶ್ವವಿದ್ಯಾಲಯ ಅಥವಾ ಒಂದು ಘಟಕ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಶಿಸ್ತು ಪಾಲನೆ;

(ix) ಈ ಅಧಿನಿಯಮದ ಅಡಿಯಲ್ಲಿನ ಪರಿನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದಾಂಥ ಇತರ ಎಲ್ಲಾ ವಿಷಯಗಳು.

36. ವಿನಿಯಮಗಳ ರಚನೆ ವಿಧಾನ.– ವಿನಿಯಮಗಳನ್ನು ಶೈಕ್ಷಣಿಕ ಪರಿಷತ್ತು ರಚಿಸತಕ್ಕದ್ದು ಹಾಗೂ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸತಕ್ಕದ್ದು.

37. ವಿನಿಯಮಗಳ ತಿದ್ದುಪಡಿಗೆ ಅಧಿಕಾರ.– ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಡನೆ ಶೈಕ್ಷಣಿಕ ಪರಿಷತ್ತು ಹೊಸ ವಿನಿಯಮಗಳನ್ನು ಅಥವಾ ಹೆಚ್ಚುವರಿ ವಿನಿಯಮಗಳನ್ನು ರಚಿಸಬಹುದು ಅಥವಾ ವಿನಿಯಮಗಳ ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

38. ಶುಲ್ಕ ನಿಯಂತ್ರಣ ಸಮಿತಿ.– (1) ಸರ್ಕಾರವು ರಚಿಸಿದ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮುಖ್ಯಸ್ಥರಾಗಿರುವ ಮತ್ತು ವಿಶ್ವವಿದ್ಯಾಲಯದ ಕುಲಪತಿಯು, ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು/ ಸಂದರ್ಭಾನುಸಾರವಾಗಿ ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು, ರಾಜ್ಯ/ಕೇಂದ್ರ ವಿಶ್ವವಿದ್ಯಾಲಯಗಳ ನಿವೃತ್ತ ಉಪಕುಲಪತಿಗಳು ಮತ್ತು ವಿಶ್ವವಿದ್ಯಾಲಯದ ಒಬ್ಬರು ಪ್ರತಿನಿಧಿಗಳು ಇವರುಗಳನ್ನು ಒಳಗೊಂಡ ಒಂದು ಫೀಜು ನಿಯಂತ್ರಣ ಸಮಿತಿಯು ಇದ್ದು ಇದು ವಿಶ್ವವಿದ್ಯಾಲಯದ ಶುಲ್ಕವನ್ನು ನಿಯಂತ್ರಿಸತಕ್ಕದ್ದು. ಸಮಿತಿಯಲ್ಲಿ ಈ ಉದ್ದೇಶಕ್ಕಾಗಿ ಒಬ್ಬರು ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ ಇವರು ಸಹಆಯ್ಕೆ (ಕೋಆಪ್ಟ್) ಮಾಡಿಕೊಳ್ಳತಕ್ಕದ್ದು.

(2) ಸಮಿತಿಯು ವಿಶ್ವವಿದ್ಯಾಲಯದ ಪ್ರವೇಶಗಳ ಮತ್ತು ಶುಲ್ಕದ ಸಂಗ್ರಹಣೆಯ ಅನುಪಾಲನೆಯನ್ನು ನೋಡಿಕೊಳ್ಳತಕ್ಕದ್ದು.

(3) ಸಮಿತಿಯು ಹಾಗೆ ಪ್ರಸ್ತಾಪಿಸಿದ ಶುಲ್ಕದ ಸ್ವರೂಪವನ್ನು ಪ್ರಬಂಧಕ ಮಂಡಳಿಯ ಮುಂದೆ ಅದರ ಅನುಮೋದನೆಗಾಗಿ ಮಂಡಿಸತಕ್ಕದ್ದು.

ಅಧ್ಯಾಯ – VI

ಸಂಕೀರ್ಣ

39. ನೌಕರರ ಸೇವಾ ಷರತ್ತುಗಳು.– (1) ಪರಿನಿಯಮಗಳ ಮತ್ತು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಥವಾ ನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳು, ಯಾವುದಾದರೂ ಇದ್ದಲ್ಲಿ, ಅವುಗಳಿಗೆ ಒಳಪಟ್ಟು ಪ್ರತಿಯೊಬ್ಬ ನೌಕರನು ಲಿಖಿತ ಕರಾರಿನ ಅಡಿಯಲ್ಲಿ ನೇಮಕಗೊಳ್ಳತಕ್ಕದ್ದು ಮತ್ತು ಅದನ್ನು ವಿಶ್ವವಿದ್ಯಾಲಯದಲ್ಲಿ ಇಟ್ಟುಕೊಳ್ಳತಕ್ಕದ್ದು ಹಾಗೂ ಅದರ ಪ್ರತಿಯನ್ನು ಸಂಬಂಧಪಟ್ಟ ನೌಕರನಿಗೆ ನೀಡತಕ್ಕದ್ದು.

(2) ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಕಾರ್ಯವಿಧಾನಗಳ ಮೂಲಕ ನಿಯಂತ್ರಿಸತಕ್ಕದ್ದು.

(3) ಕರಾರಿನಿಂದಾಗಿ ವಿಶ್ವವಿದ್ಯಾಲಯ ಮತ್ತು ನೌಕರನ ಮಧ್ಯದಲ್ಲಿ ಉದ್ಭವಿಸಬಹುದಾದ ಯಾವುದೇ ವಿವಾದವನ್ನು, ಲಿಖಿತ ಕರಾರಿನಲ್ಲಿ ಉಪಬಂಧಿಸಿದ ವಿಧಾನದಲ್ಲಿ ಹಾಗೂ ಪರಿನಿಯಮಗಳ ಅನುಸಾರವಾಗಿ ಪರಿಹರಿಸತಕ್ಕದ್ದು.

40. ಮೇಲ್ಮನವಿ ಹಕ್ಕು.– ವಿಶ್ವವಿದ್ಯಾಲಯವು ತನ್ನ ನೌಕರರ ಅಥವಾ ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡ ಸಂದರ್ಭದಲ್ಲಿ, ಬಾಧಿತ ನೌಕರ ಅಥವಾ ವಿದ್ಯಾರ್ಥಿಗಳು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

41. ಭವಿಷ್ಯ ಅಥವಾ ನಿವೃತ್ತಿ ವೇತನ ನಿಧಿ .– ವಿಶ್ವವಿದ್ಯಾಲಯವು, ತನ್ನ ನೌಕರರ ಪ್ರಯೋಜನಕ್ಕಾಗಿ, ಪರಿನಿಯಮಗಳು ಮತ್ತು ಜಾರಿಯಲ್ಲಿರುವ ಕಾನೂನುಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಭವಿಷ್ಯ ಅಥವಾ ನಿವೃತ್ತಿ ವೇತನ ನಿಧಿಯನ್ನು ರಚಿಸತಕ್ಕದ್ದು ಹಾಗೂ ಅಂಥ ವಿಮಾ ಯೋಜನೆಗಳನ್ನು ಒದಗಿಸತಕ್ಕದ್ದು.

42. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಸಂಸ್ಥೆಗಳ ರಚನೆಯ ವಿವಾದಗಳು.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ಸಂಸ್ಥೆಯ ಸದಸ್ಯನಾಗಿ ಯಾವೊಬ್ಬ ವ್ಯಕ್ತಿಯು ಸೂಕ್ತವಾಗಿ ಆಯ್ಕೆಯಾಗಿದ್ದಾನೆಯೇ ಅಥವಾ ನೇಮಕಗೊಂಡಿದ್ದಾನೆಯೇ ಅಥವಾ ಅದಕ್ಕೆ ಅರ್ಹನಾಗಿದ್ದಾನೆಯೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಆ ವಿಷಯವನ್ನು ತೀರ್ಮಾನಕ್ಕಾಗಿ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

43. ಸಮಿತಿಗಳ ರಚನೆ.– 22ನೇ ಪ್ರಕರಣದಲ್ಲಿ ನಮೂದಿಸಿದ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅಧಿಕಾರವನ್ನು ಹೊಂದಿರುವ ಅಂಥ ಸದಸ್ಯರನ್ನು ಒಳಗೊಂಡ ಅಂಥ ಪ್ರಾಧಿಕಾರದ ಒಂದು ಸಮಿತಿಯನ್ನು ರಚಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

44. ಆಕಸ್ಮಿಕವಾಗಿ ಖಾಲಿಯಾದ ಸ್ಥಾನಗಳನ್ನು ತುಂಬುವುದು.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಸಂಸ್ಥೆಯ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಸದಸ್ಯರ ಪೈಕಿ ಯಾವುದೇ ಸ್ಥಾನವು ಆಕಸ್ಮಿಕವಾಗಿ ಖಾಲಿಯಾದರೆ, ಯಾರ ಸ್ಥಾನವು ಖಾಲಿಯಾಗಿ ತುಂಬಬೇಕಾಗಿ ಬಂದಿದೆಯೋ ಆ ಸದಸ್ಯನನ್ನು ಯಾವ ರೀತಿಯಲ್ಲಿ ಆರಿಸಲಾಗಿತ್ತೋ ಅದೇ ರೀತಿಯಲ್ಲಿ ಹೊಸ ಸದಸ್ಯನನ್ನು ಆರಿಸಿ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ಖಾಲಿ ಸ್ಥಾನವನ್ನು ಭರ್ತಿ ಮಾಡಿದ ವ್ಯಕ್ತಿಯು ಆತನು ಯಾವ ಸದಸ್ಯನ ಸ್ಥಾನದಲ್ಲಿ ಭರ್ತಿಯಾಗಿರುವನೋ ಆ ಸದಸ್ಯನು ಪ್ರಾಧಿಕಾರ ಅಥವಾ ಸಂಸ್ಥೆಯ ಸದಸ್ಯನಾಗಿ ಉಳಿಯುತ್ತಿದ್ದ ಬಾಕಿ ಅವಧಿಯವರೆಗೆ ಮಾತ್ರ ಸದಸ್ಯನಾಗಿರತಕ್ಕದ್ದು.

45. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮ ಅಥವಾ ಪರಿನಿಯಮಗಳು ಅಥವಾ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ನಡೆಸಲು ಅವಕಾಶ ಇರತಕ್ಕದ್ದಲ್ಲ.

46. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮ ಮತ್ತು ಪರಿನಿಯಮಗಳ ಯಾವುದೇ ಇತರ ಉಪಬಂಧಗಳಲ್ಲಿ ಏನೇ ಇದ್ದರೂ,–

(i) ಮೊದಲ ಕುಲಪತಿ ಮತ್ತು ಸಹಕುಲಪತಿ, ಯಾರಾದರೂ ಇದ್ದರೆ, ಅವರನ್ನು ಕುಲಾಧಿಪತಿಯವರು ನೇಮಕಮಾಡತಕ್ಕದ್ದು;

(ii) ಮೊದಲ ಕುಲಸಚಿವರನ್ನು ಮತ್ತು ಮೊದಲ ಹಣಕಾಸು ಅಧಿಕಾರಿಯವರನ್ನು ಕುಲಾಧಿಪತಿಯವರು ನೇಮಕಮಾಡತಕ್ಕದ್ದು; ಮತ್ತು

(iii) ಮೊದಲ ವ್ಯವಸ್ಥಾಪನ ಮಂಡಳಿ, ಮೊದಲ ಹಣಕಾಸು ಸಮಿತಿ, ಮೊದಲ ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು ಹಾಗೂ ಮೊದಲ ಶೈಕ್ಷಣಿಕ ಪರಿಷತ್ತನ್ನು ಕುಲಾಧಿಪತಿಯವರು ರಚಿಸತಕ್ಕದ್ದು.

47. ಶಾಶ್ವತ ಶಾಸನಬದ್ಧ ದತ್ತಿ ನಿಧಿ.– (1) ವಿಶ್ವವಿದ್ಯಾಲಯವು, ಕನಿಷ್ಠ ಇಪ್ಪತ್ತೈದು ಕೋಟಿ ರೂಪಾಯಿಗಳನ್ನುಳ್ಳ ಒಂದು ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಈ ನಿಧಿಯನ್ನು ಸ್ವಪ್ರೇರಣೆಯಿಂದ ಹೆಚ್ಚಿಸಬಹುದು ಆದರೆ ಅದಕ್ಕಿಂತ ಕಡಿಮೆ ಮಾಡತಕ್ಕದ್ದಲ್ಲ.

(2) ವಿಶ್ವವಿದ್ಯಾಲಯವು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಶಾಶ್ವತ ಶಾಸನಬದ್ಧ ದತ್ತಿ ನಿಧಿಯ ಹಣವನ್ನು ಹೂಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ವಿಶ್ವವಿದ್ಯಾಲಯವು ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿಗೆ ವರ್ಗಾವಣೆ ಮಾಡಬಹುದು. ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸುವ ಸಂದರ್ಭವನ್ನು ಹೊರತುಪಡಿಸಿ, ಇತರ ಯಾವ ಸಂದರ್ಭಗಳಲ್ಲೂ ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಯಾವುದೇ ಮೊಬಲಗನ್ನೂ ಇತರ ಉದ್ದೇಶಗಳಿಗಾಗಿ ವರ್ಗಾಯಿಸತಕ್ಕದ್ದಲ್ಲ.

(4) ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಸ್ವೀಕರಿಸಿದ ವರಮಾನದ ಶೇಕಡಾ ಎಪ್ಪತ್ತೈದರಷ್ಟನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಅಥವಾ ಸಾಮಾನ್ಯ ಕೆಲಸಗಳ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು. ಉಳಿದ ಶೇಕಡಾ ಇಪ್ಪತ್ತೈದರಷ್ಟನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿಯಲ್ಲಿ ಪುನ: ತೊಡಗಿಸತಕ್ಕದ್ದು.

48. ವಿಶ್ವವಿದ್ಯಾಲಯದ ದತ್ತಿ ನಿಧಿ.– (1) ವಿಶ್ವವಿದ್ಯಾಲಯವು, ಕನಿಷ್ಠ ಇಪ್ಪತ್ತೈದು ಕೋಟಿ ರೂಪಾಯಿಗಳನ್ನುಳ್ಳ ಒಂದು ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸತಕ್ಕದ್ದು ಇದರ ಪೈಕಿ ಕನಿಷ್ಠ ಐದಿನೈದು ಕೋಟಿ ರೂಪಾಯಿಗಳನ್ನು ನಗದು ರೂಪದಲ್ಲಿ ಮತ್ತು ಇನ್ನೂಳಿದಿದ್ದನ್ನು ಬ್ಯಾಂಕ್ ಗ್ಯಾರೆಂಟಿ ರೂಪದಲ್ಲಿ ಇದ್ದು ಇದನ್ನು ತಾನಾಗಿಯೆ ಹೆಚ್ಚಿಸಬಹುದಾಗಿದ್ದು ಆದರೆ ಕಡಿಮೆ ಮಾಡತಕ್ಕದ್ದಲ್ಲ.

(2) ವಿಶ್ವವಿದ್ಯಾಲಯವು, ಪರಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ವಿಧಾನದಲ್ಲಿ ವಿಶ್ವವಿದ್ಯಾಲಯದ ದತ್ತಿನಿಧಿಯನ್ನು ಹೂಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ವಿಶ್ವವಿದ್ಯಾಲಯ ದತ್ತಿ ನಿಧಿಯು, ವಿಶ್ವವಿದ್ಯಾಲಯವು ತನ್ನ ಸಾಮಾಜಿಕ ಧ್ಯೇಯೋದ್ದೇಶಗಳನ್ನು ನೆರವೇರಿಸುವ ಸಂದರ್ಭದಲ್ಲಿ ಮತ್ತು/ಅಥವಾ ಮುಂಗಾಣದ ಸನ್ನಿವೇಶದಲ್ಲಿ ಉದ್ಭವಿಸಬಹುದಾದ ಹಣಕಾಸು ಸವಾಲುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ, ಸ್ವಇಚ್ಛೆಯಿಂದ ನಿರ್ವಹಿಸಿಕೊಂಡು ಬರಲು ಮತ್ತು ಜವಾಬ್ದಾರಿಯಿಂದ ಹಣ ಹೂಡಿಕೆ ಮಾಡಲು ಇಚ್ಛೆಯುಳ್ಳವರಾಗಿ ಸ್ವಯಂ ವಿಧಿಸಿಕೊಂಡ ನಿಧಿಯಾಗಿರತಕ್ಕದ್ದು.

(4) ವಿಶ್ವವಿದ್ಯಾಲಯವು, ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು ವಿಶ್ವವಿದ್ಯಾಲಯದ ದತ್ತಿ ನಿಧಿಗೆ ವರ್ಗಾಯಿಸಬಹುದು. ವಿಶ್ವವಿದ್ಯಾಲಯದ ಸಮಾಪಣೆಗೊಳಿಸುವ ಸಂದರ್ಭವನ್ನು ಹೊರತುಪಡಿಸಿ, ಇತರ ಯಾವ ಸಂದರ್ಭಗಳಲ್ಲೂ ವಿಶ್ವವಿದ್ಯಾಲಯದ ದತ್ತಿ ನಿಧಿಯಿಂದ ಯಾವುದೇ ಮೊಬಲಗನ್ನು ಇತರ ಉದ್ದೇಶಗಳಿಗಾಗಿ ವರ್ಗಾಯಿಸತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ದತ್ತಿ ನಿಧಿಯಿಂದ ಬರುವ ವರಮಾನದ ಶೇಕಡಾ ಎಂಭತ್ತರಷ್ಟನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಅಥವಾ ಸಾಮಾನ್ಯ ಕೆಲಸದ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು. ಉಳಿದ ಶೇಕಡಾ ಇಪ್ಪತ್ತರಷ್ಟನ್ನು ವಿಶ್ವವಿದ್ಯಾಲಯದ ದತ್ತಿ ನಿಧಿಯಲ್ಲಿ ಪುನಃ ತೊಡಗಿಸತಕ್ಕದ್ದು.

49. ಸಾಮಾನ್ಯ ನಿಧಿ.– (1) ವಿಶ್ವವಿದ್ಯಾಲಯವು, ಒಂದು ಸಾಮಾನ್ಯ ನಿಧಿಯನ್ನು ಸ್ಥಾಪಿಸತಕ್ಕದ್ದು. ಇದರಲ್ಲಿ ಈ ಮುಂದಿನ ಮೊಬಲಗುಗಳನ್ನು ಜಮಾ ಮಾಡತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯವು ವಿಧಿಸಬಹುದಾದ ಎಲ್ಲಾ ಶುಲ್ಕಗಳು;

(ii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೆ ಇರುವ ಯಾವುದೇ ಇತರ ಮೂಲದಿಂದ ಸ್ವೀಕರಿಸಲಾದ ಎಲ್ಲಾ ಮೊತ್ತ;

(iii) ವಿಶ್ವವಿದ್ಯಾಲಯಕ್ಕೆ ಮಾಡಿದ ಎಲ್ಲಾ ದೇಣಿಗೆಗಳು;

(iv) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ ಯಾವೊಬ್ಬ ಇತರ ವ್ಯಕ್ತಿ ಅಥವಾ ಸಂಸ್ಥೆಯು ಈ ಸಂಬಂಧದಲ್ಲಿ ಕೊಟ್ಟ ಎಲ್ಲಾ ದೇಣಿಗೆಗಳು/ವಂತಿಗೆಗಳು;

(2) ಸಾಮಾನ್ಯ ನಿಧಿಗೆ ಜಮಾ ಮಾಡುವ ನಿಧಿಗಳನ್ನು ವಿಶ್ವವಿದ್ಯಾಲಯದ ಎಲ್ಲಾ ಆವರ್ತಕ ವೆಚ್ಚಗಳನ್ನು ಭರಿಸಲು ಉಪಯೋಗಿಸಕೊಳ್ಳತಕ್ಕದ್ದು.

50. ಅಭಿವೃದ್ಧಿ ನಿಧಿ.– (1) ವಿಶ್ವವಿದ್ಯಾಲಯವು, ಒಂದು ಅಭಿವೃದ್ಧಿ ನಿಧಿಯನ್ನು ಸಹ ಸ್ಥಾಪಿಸತಕ್ಕದ್ದು. ಇದರಲ್ಲಿ ಈ ಮುಂದಿನ ಮೊಬಲಗುಗಳನ್ನು ಜಮಾ ಮಾಡತಕ್ಕದ್ದು, ಎಂದರೆ:–

(i) ವಿದ್ಯಾರ್ಥಿಗಳಿಗೆ ವಿಧಿಸಬಹುದಾದ ಅಭಿವೃದ್ಧಿ ಶುಲ್ಕಗಳು;

(ii) ವಿಶ್ವವಿದ್ಯಾಲಯದ ಅಭಿವೃದ್ಧಿಯ ಉದ್ದೇಶಗಳಿಗಾಗಿ ಯಾವುದೇ ಇತರ ಮೂಲಗಳಿಂದ ಸ್ವೀಕರಿಸಿದ ಎಲ್ಲಾ ಮೊತ್ತ;

(iii) ವಿಶ್ವವಿದ್ಯಾಲಯಕ್ಕೆ ಮಾಡಿದ ಎಲ್ಲಾ ವಂತಿಗೆಗಳು;

(iv) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ ಯಾವೊಬ್ಬ ಇತರ ವ್ಯಕ್ತಿ ಅಥವಾ ಸಂಸ್ಥೆಯು ಈ ಸಂಬಂಧದಲ್ಲಿ ಕೊಟ್ಟ ಎಲ್ಲಾ ದೇಣಿಗೆಗಳು/ವಂತಿಗೆಗಳು; ಮತ್ತು

(v) ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಸ್ವೀಕರಿಸಲಾದ ಎಲ್ಲಾ ವರಮಾನಗಳು.

(2) ಅಭಿವೃದ್ಧಿ ನಿಧಿಗೆ ಕಾಲಕಾಲಕ್ಕೆ ಜಮಾ ಮಾಡಿದ ನಿಧಿಯನ್ನು ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಉಪಯೋಗಿಸಕೊಳ್ಳತಕ್ಕದ್ದು.

51. ನಿಧಿಗಳ ನಿರ್ವಹಣೆ.– 47, 48, 49 ಮತ್ತು 50ನೇ ಪ್ರಕರಣಗಳಡಿಯಲ್ಲಿ ಸ್ಥಾಪಿಸಲಾದ ನಿಧಿಗಳನ್ನು ಪ್ರಬಂಧಕ ಮಂಡಳಿಯ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿಯಂತ್ರಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು.

52. ವಾರ್ಷಿಕ ವರದಿ.– (1) ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನದಲ್ಲಿ ತಯಾರಿಸತಕ್ಕದ್ದು ಮತ್ತು ಅದರ ಅನುಮೋದನೆಗಾಗಿ ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(2) ಪ್ರಬಂಧಕ ಮಂಡಳಿಯು ವಾರ್ಷಿಕ ವರದಿಯನ್ನು ತನ್ನ ಸಭೆಯಲ್ಲಿ ಪರಿಗಣಿಸತಕ್ಕದ್ದು ಹಾಗೂ ಅದನ್ನು ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡುಗಳಿಲ್ಲದೆ ಅನುಮೋದಿಸಬಹುದು.

(3) ಪ್ರಬಂಧಕ ಮಂಡಳಿಯು ಸೂಕ್ತವಾಗಿ ಅನುಮೋದಿಸಿದ ವಾರ್ಷಿಕ ವರದಿಯ ಒಂದು ಪ್ರತಿಯನ್ನು ಪ್ರತಿವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ತರುವಾಯ ಬರುವ ಡಿಸೆಂಬರ್ 31ಕ್ಕೆ ಮೊದಲು ಸಂದರ್ಶಕರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

53. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪತ್ರ ಮತ್ತು ಜಮಾ ಖರ್ಚು ಪಟ್ಟಿಯನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನದಲ್ಲಿ ತಯಾರಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಎಲ್ಲಾ ಮೂಲಗಳಿಂದ ಪ್ರಾಪ್ತವಾಗುವ ಅಥವಾ ಸ್ವೀಕರಿಸಲಾಗುವ ಎಲ್ಲಾ ನಿಧಿಗಳು ಹಾಗೂ ವಿತರಿಸಿದ ಅಥವಾ ಸಂದಾಯ ಮಾಡಿದ ಎಲ್ಲಾ ಮೊಬಲಗುಗಳನ್ನು ವಿಶ್ವವಿದ್ಯಾಲಯವು ನಿರ್ವಹಿಸುವ ಲೆಕ್ಕಪತ್ರದಲ್ಲಿ ನಮೂದಿಸತಕ್ಕದ್ದು.

(2) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರತಿ ವರ್ಷವೂ ಭಾರತದ ಚಾರ್ಟೆಡ್ ಅಕೌಂಟೆಂಟ್‌ಗಳ ಸಂಸ್ಥೆಯ ಸದಸ್ಯರಾಗಿರುವ ಒಬ್ಬ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(3) ವಾರ್ಷಿಕ ಲೆಕ್ಕಪತ್ರಗಳು ಮತ್ತು ಜಮಾ ಖರ್ಚು ಪಟ್ಟಿಯನ್ನು ಲೆಕ್ಕಪರಿಶೋಧನಾ ವರದಿಯೊಡನೆ, ಪ್ರತಿ ವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ತರುವಾಯ ಬರುವ ನವೆಂಬರ್ 30ಕ್ಕೆ ಮೊದಲು ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(4) ವಾರ್ಷಿಕ ಲೆಕ್ಕಪತ್ರಗಳು, ಜಮಾಖರ್ಚು ಪಟ್ಟಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪ್ರಬಂಧಕ ಮಂಡಳಿಯು ತನ್ನ ಸಭೆಯಲ್ಲಿ ಪರ್ಯಾಲೋಚಿಸತಕ್ಕದ್ದು ಮತ್ತು ಪ್ರಬಂಧಕ ಮಂಡಳಿಯು ಅದನ್ನು ತನ್ನ ಅಭಿಪ್ರಾಯಗಳೊಡನೆ ಸಂದರ್ಶಕರಿಗೆ ಹಾಗೂ ಸರ್ಕಾರಕ್ಕೆ ಪ್ರತಿ ವರ್ಷದ ಡಿಸೆಂಬರ್ 31ಕ್ಕೆ ಮೊದಲು ಕಳುಹಿಸತಕ್ಕದ್ದು.

54. ವಿಶ್ವವಿದ್ಯಾಲಯ ದಾಖಲೆಗಳ ರುಜುವಾತಿನ ಮಾದರಿ.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಸಮಿತಿಯ ಯಾವುದೇ ರಶೀದಿ, ಅರ್ಜಿ, ಸೂಚನೆ, ಆದೇಶ, ವ್ಯವಹರಣೆ ಅಥವಾ ಗೊತ್ತುವಳಿಯು ಅಥವಾ ವಿಶ್ವವಿದ್ಯಾಲಯದ ಸ್ವಾಧೀನದಲ್ಲಿರುವ ಇತರ ದಾಖಲೆಗಳು ಅಥವಾ ವಿಶ್ವವಿದ್ಯಾಲಯವು ಯುಕ್ತವಾಗಿ ನಿರ್ವಹಿಸುವ ಯಾವುದೇ ರಿಜಿಸ್ಟರ್‌ನಲ್ಲಿಯ ಯಾವುದೇ ನಮೂದುಗಳ ಪ್ರತಿಯನ್ನು, ಅದರ ಮೇಲೆ ಕುಲಸಚಿವರು ಪ್ರಮಾಣೀಕರಿಸಿದ್ದರೆ, ಅದನ್ನು ಅಂಥ ರಶೀದಿ, ಅರ್ಜಿ, ಸೂಚನೆ, ಆದೇಶ, ವ್ಯವಹರಣೆ, ಗೊತ್ತುವಳಿ ಅಥವಾ ದಾಖಲೆ ಅಥವಾ ರಿಜಿಸ್ಟರ್‌ನಲ್ಲಿ ಇರುವ ನಮೂದನ್ನು ಮೇಲ್ನೋಟದ ಸಾಕ್ಷ್ಯವೆಂಬುದಾಗಿ ಸ್ವೀಕರಿಸತಕ್ಕದ್ದು ಮತ್ತು ವಿಷಯಗಳ ಸಾಕ್ಷಿಯಾಗಿ ಅಂಗೀಕರಿಸತಕ್ಕದ್ದು ಹಾಗೂ ಮೂಲ ದಾಖಲೆಗಳನ್ನೇ ಸಲ್ಲಿಸಿದ್ದರೆ ಅದನ್ನು, ದಾಖಲಿಸಿರುವ ವಿಷಯಗಳು ಮತ್ತು ವಹಿವಾಟುಗಳ ಸಾಕ್ಷ್ಯವಾಗಿ ಅಂಗೀಕರಿಸಲಾಗುತ್ತಿತ್ತೋ, ಅದೇ ರೀತಿಯಲ್ಲಿ ಇವನ್ನೂ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

55. ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ.– ರಾಜ್ಯಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಥವಾ ಅದರಲ್ಲಿ ಇರುವ ಯಾವುವೇ ಉಪಬಂಧಗಳನ್ನು ಅಥವಾ ಅದರಡಿಯಲ್ಲಿ ರಚಿಸಿದ ಯಾವುವೇ ನಿಯಮಗಳು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿರ್ದೇಶನ ನೀಡುವುದು ಅವಶ್ಯವೆಂದು ಅಥವಾ ಉಚಿತವೆಂದು ಅಭಿಪ್ರಾಯಪಟ್ಟಲ್ಲಿ ಅದು ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯದ ಪ್ರಬಂಧಕ ಮಂಡಳಿ ಅಥವಾ ಸಂದರ್ಭಾನುಸಾರವಾಗಿ ವ್ಯವಸ್ಥಾಪನಾ ಮಂಡಳಿಯು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

56. ದಂಡಗಳು.– (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ದಂಡನೆಯನ್ನು ಇತರ ಯಾವುದೇ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ದಂಡನೆಗೆ ಬಾಧಕವಾಗದಂತೆ ವಿಧಿಸಬಹುದು.

57. ಪ್ರವೇಶಿಸುವ ಮತ್ತು ಪರಿಶೋಧಿಸುವ ಅಧಿಕಾರ.– ಈ ಉದ್ದೇಶಕ್ಕಾಗಿ, ರಾಜ್ಯಸರ್ಕಾರದಿಂದ ಪ್ರಾಧಿಕೃತಗೊಂಡ 'ಎ' ಸಮೂಹದ ಅಧಿಕಾರಿ ದರ್ಜೆಗಿಂತ ಕಡಿಮೆಇಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಅಧಿನಿಯಮ, 1984ರ (1984ರ ಕರ್ನಾಟಕ ಅಧಿನಿಯಮ 37) ಅಡಿಯಲ್ಲಿ ನಿರ್ದಿಷ್ಟಪಡಿಸಿರಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಆ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತಹವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತನಾದ ಅಧಿಕಾರಿ ಎಂಬುದಾಗಿ ಭಾವಿಸತಕ್ಕದ್ದು.

58. ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸಲು ನಿರ್ದೇಶನವನ್ನು ನೀಡುವ ಅಧಿಕಾರ.– (1) ವಿಶ್ವವಿದ್ಯಾಲಯವು ತನ್ನ ರಚನೆ ಅಥವಾ ನಿಗಮನವನ್ನು ನಿಯಂತ್ರಿಸುವ ಕಾನೂನಿಗೆ ಅನುಸಾರವಾಗಿ ತನ್ನ ಸಮಾಪನವನ್ನು ಉದ್ದೇಶಿಸಿದ್ದಲ್ಲಿ, ಅದು ಕನಿಷ್ಠ ಆರು ತಿಂಗಳ ಲಿಖಿತ ಪೂರ್ವ ಸೂಚನೆಯನ್ನು (ನೋಟೀಸು) ಸರ್ಕಾರಕ್ಕೆ ನೀಡತಕ್ಕದ್ದು.

(2) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಈ ಕೆಳಗಿನವುಗಳ ಬಗ್ಗೆ, ಎಂದರೆ:–

(i) ಪದವಿಯನ್ನು ನೀಡುವುದಕ್ಕಾಗಿ ಬೋಧನೆಯ ಗುಣಮಟ್ಟ;

(ii) ಶಿಕ್ಷಣದ ಗುಣಮಟ್ಟ;

(iii) ಉನ್ನತ ಶಿಕ್ಷಣದ ವ್ಯಾಪಾರೀಕರಣವನ್ನು ತಡೆಗಟ್ಟುವುದು;

(iv) ಅಧಿನಿಯಮದ ಉಪಬಂಧಗಳ ಉಲ್ಲಂಘನೆಯ ಬಗ್ಗೆ, ಯಾವುದಾದರೂ ಇದ್ದಲ್ಲಿ,

– ಇವುಗಳ ಬಗ್ಗೆ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸತಕ್ಕದ್ದು ಮತ್ತು ಸರ್ಕಾರಕ್ಕೆ ವರದಿಯನ್ನು ಕಳುಹಿಸತಕ್ಕದ್ದು.

(3) ದುರ್ವ್ಯವಹರಣೆ, ದುರಾಡಳಿತ ಮತ್ತು ಅಶಿಸ್ತು ಆಗಿದೆ ಎಂಬುದನ್ನು ಗುರುತಿಸಿದರೆ, ಸರ್ಕಾರವು, ವಿಶ್ವವಿದ್ಯಾಲಯದ ಆಡಳಿತ ವರ್ಗದವರಿಗೆ ಆಡಳಿತವನ್ನು ಸರಿಪಡಿಸಬೇಕೆಂದು ನಿರ್ದೇಶನಗಳನ್ನು ನೀಡತಕ್ಕದ್ದು. ನಿಯಮಿಸಬಹುದಾದ ಅಂಥ ಅವಧಿಯೊಳಗೆ ಆ ನಿರ್ದೇಶನಗಳನ್ನು ಪಾಲಿಸದಿದ್ದಲ್ಲಿ ವಿಶ್ವವಿದ್ಯಾಲಯವನ್ನು ಅಥವಾ ಅದರ ಯಾವುದೇ ವ್ಯಾಸಂಗ ಕ್ರಮವನ್ನು (ಕೋರ್ಸ್) ಸಮಾಪನಗೊಳಿಸುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(4) ವಿಶ್ವವಿದ್ಯಾಲಯವನ್ನು ಅಥವಾ ಅದರ ಯಾವುದೇ ವ್ಯಾಸಂಗ ಕ್ರಮವನ್ನು (ಕೋರ್ಸ್) ಸಮಾಪನಗೊಳಿಸುವ ವಿಧಾನವು, ಸರ್ಕಾರವು ಈ ಸಂಬಂಧದಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ವಿಶ್ವವಿದ್ಯಾಲಯವು ತನ್ನ ಕಾರಣಗಳನ್ನು ಹೇಳಿಕೊಳ್ಳಲು ಸಮಂಜಸ ಅವಕಾಶಗಳನ್ನು ನೀಡಿದ ಹೊರತು ಅಂಥ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(5) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ಸ್ವೀಕರಿಸಿದ ಮೇಲೆ, ಸರ್ಕಾರವು ಸಂಬಂಧಿಸಿದ ನಿಯಂತ್ರಣಾ ಪ್ರಾಧಿಕಾರದೊಡನೆ ಸಮಾಲೋಚಿಸಿ, ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸಲು ಅಥವಾ ವ್ಯಾಸಂಗ ಕ್ರಮವನ್ನು ಪರಿಸಮಾಪನಗೊಳಿಸಲು ಉದ್ದೇಶಿಸಿದ ದಿನಾಂಕದಿಂದ, ವಿಶ್ವವಿದ್ಯಾಲಯದಲ್ಲಿ ನಿಯತ ವ್ಯಾಸಂಗ ಕ್ರಮಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಕೊನೆಯ ತಂಡ (ಬ್ಯಾಚ್) ತನ್ನ ವ್ಯಾಸಂಗ ಕ್ರಮವನ್ನು ಮುಗಿಸುವವರೆಗೆ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ವಿಶ್ವವಿದ್ಯಾಲಯದ ಆಡಳಿತಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡತಕ್ಕದ್ದು.

59. ಸಮಾಪನೆಯ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವೆಚ್ಚಗಳು.– (1) 58ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾಲಯದ ಆಡಳಿತವನ್ನು ಹಸ್ತಾಂತರಗೊಳಿಸುವ ಅವಧಿಯಲ್ಲಿ ಅದರ ಆಡಳಿತಾತ್ಮಕ ವೆಚ್ಚಗಳನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿ, ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಭರಿಸತಕ್ಕದ್ದು.

(2) ವಿಶ್ವವಿದ್ಯಾಲಯದ ಆಡಳಿತವನ್ನು ಹಸ್ತಾಂತರಗೊಳಿಸುವ ಅವಧಿಯಲ್ಲಿ ವಿಶ್ವವಿದ್ಯಾಲಯದ ವೆಚ್ಚವನ್ನು ಭರಿಸಲು 47, 48, 49 ಮತ್ತು 50ನೇ ಪ್ರಕರಣಗಳ ಅಡಿಯಲ್ಲಿ ಉಲ್ಲೇಖಿಸಲಾದ ನಿಧಿಯು ಸಾಕಷ್ಟು ಇಲ್ಲದಿದ್ದಲ್ಲಿ, ಅಂಥ ವೆಚ್ಚವನ್ನು ಸರ್ಕಾರವು, ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ಆಸ್ತಿಗಳನ್ನು ವಿಲೇ ಮಾಡುವ ಮೂಲಕ ಭರಿಸತಕ್ಕದ್ದು.

(3) ವಿಶ್ವವಿದ್ಯಾಲಯದ ಸಮಾಪನೆಯು ದುರ್ವ್ಯವಹರಣೆ ಅಥವಾ ದುರಾಡಳಿತದ ಕಾರಣಗಳಿಗಾಗಿ ಆಗಿದ್ದರೆ, ಸರ್ಕಾರವು ಅಂಥ ದುರ್ವ್ಯವಹಾರಕ್ಕೆ ಅಥವಾ ದುರಾಡಳಿತಕ್ಕೆ ಹೊಣೆಯಾಗಿರುವ ವ್ಯಕ್ತಿಗಳನ್ನು ಗುರುತಿಸುವ ಮತ್ತು ಅವರ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ದಂಡನೆಯನ್ನು ವಿಧಿಸಲು ಸ್ವತಂತ್ರವಾಗಿರತಕ್ಕದ್ದು.

60. ತೊಂದರೆಗಳ ನಿವಾರಣೆಗೆ ಅಧಿಕಾರ.– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಅಥವಾ ಆದೇಶದ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಅಧಿಸೂಚನೆ ಅಥವಾ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

61. ರಾಜ್ಯ ಸರ್ಕಾರದ ನಿಯಮಗಳ ರಚನಾಧಿಕಾರ.– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು

ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮಹಾತ್ಮಾಗಾಂಧಿ ವಿದ್ಯಾಪೀಠ ನ್ಯಾಸವು ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮುಂದೆ ಬಂದಿದೆ. ಪ್ರಖ್ಯಾತ ಸಂಸ್ಥೆಯೊಂದರಿಂದ ಸ್ಥಾಪಿತವಾಗುವ ಖಾಸಗಿ ವಿಶ್ವವಿದ್ಯಾಲಯವು ಶಿಕ್ಷಣ ಆಕಾಂಕ್ಷಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ವಿಸ್ತರಿಸುವುದಕ್ಕೆ ಖಚಿತವಾಗಿ ನೆರವಾಗುತ್ತದೆ. ಇದು ಕರ್ನಾಟಕದಲ್ಲಿ ಉನ್ನತ ಶಿಕ್ಷಣ ವಲಯದಲ್ಲಿ ಪ್ರಸ್ತುತ ಶೇಕಡಾ 11.5 ಕ್ಕೆ ನಿಂತಿರುವ ಒಟ್ಟು ದಾಖಲಾತಿ ಪ್ರಮಾಣದ ಏರಿಕೆಯನ್ನೂ ಸಹ ತ್ವರಿತಗೊಳಿಸುತ್ತದೆ.

ಮೇಲ್ಕಂಡ ಅಂಶಗಳ ದೃಷ್ಟಿಯಿಂದ, ದಯಾನಂದ ಸಾಗರ ವಿಶ್ವವಿದ್ಯಾಲಯದ ಸ್ಥಾಪನೆಗೆ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

